ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 14 ಬುಧವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 267 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಅಭಿನಂದನೆಗಳು

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ (ರಿ) ಬೆಂಗಳೂರು

ಗೌರವಾಧ್ಯಕ್ಷರಾಗಿ ಆಯ್ಕೆಯಾಗಿರುವ **ಶ್ರೀ ಎಂ. ರಾಜೇಂದ್ರರವರಿಗೆ**

ಹೃತ್ಪೂರ್ವಕ ಅಭಿನಂದನೆಗಳು




8 ವರ್ಷ ಮೈಸೂರು ಹೋಟೆಲ್ ಮಾಲಿಕರ ಸಂಘದ ಅಧ್ಯಕ್ಷರಾಗಿ ಮತ್ತು 4 ವರ್ಷ ಕರ್ನಾಟಕ ರಾಜ್ಯ ಹೋಟೆಲ್ ಗಳ ಸಂಘದ ಅಧ್ಯಕ್ಷರಾಗಿ, 75 ವರ್ಷ ತುಂಬಿದ ರಾಜ್ಯ ಸಂಘವನ್ನು 30 ಜಿಲ್ಲೆಗಳ ಪ್ರವಾಸಮಾಡಿ ಎಲ್ಲಾ ಜಿಲ್ಲಾ ಸಂಘಗಳ ಅಧ್ಯಕ್ಷರು ಪದಾದಿಕಾರಿಗಳನ್ನು ಹುರಿದುಂಬಿಸಿ ಅತ್ಯಂತ ಎತ್ತರಕ್ಕೆ ಕೊಂಡ್ಯೆದ, ಸಂಘದ ಇತಿಹಾಸದಲ್ಲೆ ಮೈಲಿಗಲ್ಲಾಗುವಂತೆ ಆತಿಥ್ಯರತ್ನ ಮತ್ತು ಹುಬ್ಬಳ್ಳಿಯಲ್ಲಿ ನಡೆದ 16ನೇ ರಾಜ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿಗಳು ಮತ್ತು ಮಾಜಿ ಮುಖ್ಯಮಂತ್ರಿಗಳನ್ನು ಕರೆಸಿ ಸಮ್ಮೇಳನವನ್ನು ಅದ್ದೂರಿಯಾಗಿ ಯಶಸ್ವಿಯಾಗಿ ನಡೆಸಿಕೊಟ್ಟಂತಹ ಹಾಗೂ ಹಲವಾರು ಇಲಾಖೆಗಳಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿದ ರಾಜ್ಯ ಸಂಘಕ್ಕೆ ಹೆಚ್ಚು ಶಕ್ತಿ ಗೌರವ ತಂದುಕೊಟ್ಟಂತಹ

ಶ್ರೀ ಎಂ. ರಾಜೇಂದ್ರರವರನ್ನು

ಪುನಃ ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಿರುವುದಕ್ಕೆ ಹೃದಯಪೂರ್ವಕ ಅಭಿನಂದನೆಗಳು

ಶುಭಾಶಯ ಕೋರುವವರು



Sri. Shyama Raju K
President, SIHRA




Sri. G K Shetty
President, KSHA



Sri. C. Narayanagowda
President, HOA, Mysore



Sri. Ravi Shastri
HOACT, Mysore



Sri. Prakash Shetty
Past Hon. President, KSHA, Bangalore



Sri. B. Chandrashekar Hebbar
Hon. President, KSHA , Bangalore



ಮೈಸೂರಲ್ಲಿ ಆಟೋಮೊಬೈಲ್; ಎಲೆಕ್ಟ್ರಿಕ್ ವಾಹನ ಉತ್ಪಾದನಾ ಕ್ಲಸ್ಟರ್ ಸ್ಥಾಪಿಸಿ

ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಸಂಸದ ಯದುವೀರ್ ಮನವಿ



ಮೈಸೂರಲ್ಲಿ ಆಟೋಮೊಬೈಲ್ ಮತ್ತು ಎಲೆಕ್ಟ್ರಿಕ್ ವಾಹನ ಉತ್ಪಾದನಾ ಕ್ಲಸ್ಟರ್ ಸ್ಥಾಪನೆಗೆ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸಂಸದ ಯದುವೀರ್ ಮನವಿ ಮಾಡುತ್ತಿರುವುದು.

ಮೈಸೂರು, ಜ.13(ಎಂಕೆ)– ಮೈಸೂರಿನಲ್ಲಿ ಆಟೋಮೊಬೈಲ್ ಮತ್ತು ಎಲೆಕ್ಟ್ರಿಕ್ ವಾಹನ ಉತ್ಪಾದನಾ ಕ್ಲಸ್ಟರ್ ಸ್ಥಾಪನೆ ಕುರಿತು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ಮೈಸೂರಿನಲ್ಲಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳಿದ್ದು, ಭೂಮಿಯ ಲಭ್ಯತೆಯೂ ಇದೆ. ಆದ್ದರಿಂದ ಮೈಸೂರಿನ ಸರ್ವಾಂಗೀಣ ಪ್ರಗತಿಗೆ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಿಸಲು ಆದ್ಯತೆ ನೀಡುವ ನಿಟ್ಟಿನಲ್ಲಿ ಆಟೋಮೊಬೈಲ್ ಮತ್ತು ವಾಹನ ಉತ್ಪಾದನಾ ಘಟಕ ಅವಶ್ಯವಾಗಿ ಆಗಬೇಕಿದೆ. ಇದರಿಂದ ಕೈಗಾರಿಕಾ ಅಭಿವೃದ್ಧಿಯ ಜೊತೆಗೆ ಸಾವಿರಾರು ಯುವಕ–ಯುವತಿಯರಿಗೆ ಉದೋಗಾವಕಾಶಗಳು ಲಭ್ಯವಾಗಲಿವೆ ಎಂದು ವಿವರಿಸಿದ್ದಾರೆ.

ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ್ ಮತ್ತು ಇವಿ ಕ್ಷೇತ್ರದತ್ತ ಬಿಜೆಪಿ ಸರ್ಕಾರ ನೀಡಿರುವ ಆದ್ಯತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಪ್ರಮುಖ ಕೈಗಾರಿಕಾ ಕ್ಲಸ್ಟರ್ ಆರಂಭಿಸಲು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಸ್ವಚ್ಛತಾ ಸಿಬ್ಬಂದಿಗೆ ಘನ ತ್ಯಾಜ್ಯ ನಿರ್ವಹಣೆ ಕುರಿತ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ

ಮೈಸೂರಿಗೆ ಸ್ವಚ್ಛತಾ ಗೌರವ ಸಂದಿದ್ದರೆ ಅದಕ್ಕೆ ಪೌರಕಾರ್ಮಿಕರೇ ಕಾರಣ



ನಗರಪಾಲಿಕೆ ಸ್ವಚ್ಛತಾ ಸಿಬ್ಬಂದಿಗೆ ಘನತ್ಯಾಜ್ಯ ನಿರ್ವಹಣೆ ಕುರಿತು ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ನಡೆಯಿತು. ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಸ್‌ಐಯುಡಿ ನಿರ್ದೇಶಕ ಅಸಾದ್ ಉರ್ ರೆಹಮಾನ್ ಶರೀಫ್, ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಮತ್ತಿತರರಿದ್ದರು.

ಮೈಸೂರು, ಜ.13(ಎಂಕೆ)– ಸ್ವಚ್ಛತಾ ಪೌರಕಾರ್ಮಿಕರು ರಿಯಲ್ ಹೀರೋಗಳಾಗಿದ್ದು, ಮೈಸೂರು ಪಾರಂಪರಿಕ ನಗರಿ, ಸ್ವಚ್ಛ ನಗರಿ ಎಂಬಿತ್ಯಾದಿ ಖ್ಯಾತಿಗಳನ್ನು ಪಡೆಯಲು ಅವರ ಪರಿಶ್ರಮವೇ ಕಾರಣವಾಗಿದೆ ಎಂದು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಶ್ಲಾಘಿಸಿದರು.

ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಹೇಮಾವತಿ ಸಭಾಂಗಣದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛ ಭಾರತ ಮಿಷನ್ 2.0 ಅಡಿಯಲ್ಲಿ ಆಯೋಜಿಸಿದ್ದ ಸ್ವಚ್ಛತಾ ಸಿಬ್ಬಂದಿಗೆ ಘನತ್ಯಾಜ್ಯ ನಿರ್ವಹಣೆ ಕುರಿತು ಒಂದು ದಿನದ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದ ಅವರು, ಪೌರಕಾರ್ಮಿಕರಿಲ್ಲದೆ ಮೈಸೂರಿಗೆ ಇಷ್ಟೆಲ್ಲಾ ವಿಶೇಷ ಗೌರವ ದೊರೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಸ್ವಚ್ಛತಾ ನಿರ್ವಹಣೆಯಲ್ಲಿ ತೊಡಗುವ ಪೌರಕಾರ್ಮಿಕರ ಕಾಲೋನಿಗಳ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಪಾರ್ಕ್, ಜಿಮ್, ಸಭಾಂಗಣ, ಕ್ಲಬ್ ಹೌಸ್ ಕಲ್ಪನೆ ರೂಪಿಸಲು ಸೂಚಿಸಲಾಗಿದೆ. ಪೌರಕಾರ್ಮಿಕರ ಹಿತದೃಷ್ಟಿಯಿಂದ ಅವರಿಗೆ ಕರ್ತವ್ಯದ ಸಮಯದಲ್ಲಿ ಅನುಕೂಲವಾಗುವಂತೆ ಉತ್ತಮ ಗುಣಮಟ್ಟದ ಶೂಗಳು ಮತ್ತು ಕೈ–ಗವಸುಗಳನ್ನು ವಿತರಿಸಲು ಈಗಾಗಲೇ ತಿಳಿಸಲಾಗಿದ್ದು, ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಕಡೆಗೆ ಗಮನ ನೀಡಬೇಕು ಎಂದು ತಿಳಿಸಿದರು.

ಕಾರ್ಯಾಗಾರ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಪೌರಕಾರ್ಮಿಕರಿಗೆ ಸ್ವಚ್ಛತಾ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡುವಂತೆ ಸಾರ್ವಜನಿಕರಿಗೂ ಸ್ವಚ್ಛತಾ ಕ್ರಮಗಳ ಕುರಿತು ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳಾದಲ್ಲಿ ಮೈಸೂರು ಮತ್ತೆ ಸ್ವಚ್ಛತೆ ಮೊದಲ ಸ್ಥಾನಕ್ಕೇರಲಿದೆ. ಪೌರಕಾರ್ಮಿಕರು ಮನೆ ಮನೆಗೆ ಭೇಟಿ ನೀಡಿ ಕಸ ಸಂಗ್ರಹಣೆ ಮಾಡುವ ವೇಳೆ ಸಾರ್ವಜನಿಕರಿಂದಲೂ ಪೂರಕ ಸಹಕಾರ ದೊರೆತಲ್ಲಿ ಸ್ವಚ್ಛತಾ ಸಮಸ್ಯೆಗಳು ಬಹುತೇಕ ಬಗೆಹರಿಯಲಿವೆ. ಈ ನಿಟ್ಟಿನಲ್ಲಿ ಸಾರ್ವಜನಿಕ ವಲಯಕ್ಕೂ ಸ್ವಚ್ಛತಾ ಅರಿವು ಕಾರ್ಯಾಗಾರಗಳಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯ ನಗರಾಭಿವೃದ್ಧಿ ಸಂಸ್ಥೆ(ಎಸ್‌ಐಯುಡಿ) ನಿರ್ದೇಶಕ ಅಸಾದ್ ಉರ್ ರೆಹಮಾನ್ ಶರೀಫ್ ಮಾತನಾಡಿ, ಮೈಸೂರು ಸ್ವಚ್ಛತಾ ಅಭಿಯಾನದಲ್ಲಿ ಮೊದಲ ಸ್ಥಾನದಿಂದ 23ನೇ ಸ್ಥಾನಕ್ಕೆ ಕುಸಿದಾಗ ಸಾಕಷ್ಟು ಟೀಕೆ ವ್ಯಕ್ತವಾಗಿತ್ತು. ನಂತರ ಹಗಲು–ರಾತ್ರಿ ದುಡಿದು, ನಗರದ ಸ್ವಚ್ಛತೆ ಕಾಪಾಡಿದ್ದರಿಂದ ಮೂರನೇ ಸ್ಥಾನ ಕ್ಕೇರಿದೆ. ಮುಂದಿನ ದಿನಗಳಲ್ಲಿ ಮತ್ತೆ ಮೈಸೂರು ಸ್ವಚ್ಛತೆಯಲ್ಲಿ ಕೆಳಗಿಳಿಯದಂತೆ ಕೆಲಸ ಮಾಡಿ. ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

> "ಪೌರಕಾರ್ಮಿಕರ ವೃತ್ತಿ ಅನುಭವದ ಜೊತೆಗೆ ಆಧುನಿಕತೆಗೆ ಅನುಗುಣವಾಗಿ ತಂತ್ರಜ್ಞಾನ ಅಳವಡಿಕೆಯಾದರೆ ಸಾಮರ್ಥ್ಯಾಭಿವೃದ್ಧಿಯ ಜೊತೆಗೆ ಸ್ವಚ್ಛತಾ ನಿರ್ವಹಣೆಯು ತ್ವರಿತಗತಿಯಲ್ಲಿ ಸಾಗಲಿದೆ. ಮುಖ್ಯವಾಗಿ ಸಾರ್ವಜನಿಕರಿಗೆ ಇಂದಿಗೂ ಸ್ವಚ್ಛತೆ ಕುರಿತು ಅರಿವಿಲ್ಲ. ಆದ್ದರಿಂದ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ.
> –ನಿತೇಶ್ ಪಾಟೀಲ್

ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಕಾರ್ಯಪಾಲಕ ಇಂಜಿನಿಯರ್ ಶ್ರೀನಿವಾಸ್, ವಲಯ ಆಯುಕ್ತರಾದ ಕೆ.ರಮೇಶ್, ಮಂಜುನಾಥ್ ರೆಡ್ಡಿ, ಅಖಿಲ ಭಾರತ ಸ್ಥಳೀಯ ಸ್ವ–ಸರ್ಕಾರ ಸಂಸ್ಥೆಯ ದಕ್ಷಿಣ ವಲಯ ಪ್ರಾಂತ ನಿರ್ದೇಶಕ ಕಿರಣ್, ಭಗೀರಥ ಸಂಸ್ಥೆ ಸಂಸ್ಥಾಪಕ ಡಾ.ಪಿ.ಎಂ.ಕುಲಕರ್ಣಿ, ಸಂಪನ್ಮೂಲ ವ್ಯಕ್ತಿ ಜಿತೇಂದ್ರ, ಪಾಲಿಕೆ ಪರಿಸರ ವಿಭಾಗದ ಮೀನಾಕ್ಷಿ, ಪರಿಸರ ಇಂಜಿನಿಯರ್‌ಗಳಾದ ಮೈತ್ರಿ, ಶ್ರೀದೇವಿ, ಲೋಕೇಶ್ವರಿ, ಜ್ಯೋತಿ, ಮಹಾದೇವಿ, ಚಿನ್ಮಯಿ, ನವೀನ್, ಕೃಷ್ಣಮೂರ್ತಿ ಮತ್ತಿತರರಿದ್ದರು.

ಮುಡಾ ಹಗರಣ: ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಬಿ–ರಿಪೋರ್ಟ್

ಜ. 22ಕ್ಕೆ ಆದೇಶ ಕಾಯ್ದಿರಿಸಿದ ನ್ಯಾಯಾಲಯ!



ಬೆಂಗಳೂರು, ಜ.13– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಬಿಎಂ ಮತ್ತಿತರರು ಆರೋಪ ಎದುರಿಸುತ್ತಿರುವ ಮುಡಾ ಭೂಮಿ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದ ಬಿ–ರಿಪೋರ್ಟ್ (ಮುಗಿದ ವರದಿ) ಕುರಿತ ಆದೇಶವನ್ನು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜನವರಿ 22 ಕ್ಕೆ ಕಾಯ್ದಿರಿಸಿದೆ.

ಲೋಕಾಯುಕ್ತ ಪೊಲೀಸರು ಸಿದ್ದರಾಮಯ್ಯ ಮತ್ತಿತರರ ವಿರುದ್ಧ ಸಾಕ್ಷ್ಯಾಧಾರಗಳ ಕೊರತೆ ಉಲ್ಲೇಖಿಸಿ ಬಿ–ರಿಪೋರ್ಟ್ ಸಲ್ಲಿಸಿದ್ದರು. ಇದನ್ನು ದೂರುದಾರರಾದ ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದರು.

ಮಂಗಳವಾರ ಈ ಪ್ರಕರಣ ವಿಶೇಷ ನ್ಯಾಯಾಲಯದ ಮುಂದೆ ಬಂದಿತು. ಲೋಕಾಯುಕ್ತ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಕರಣದ ವಿವರವನ್ನು ಸಲ್ಲಿಸಿದರು.

ತನಿಖಾ ಸಂಸ್ಥೆಯ ಪರವಾಗಿ ವಾದಿಸಿದ ಲೋಕಾಯುಕ್ತ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ವೆಂಕಟೇಶ್ ಅರಬಟ್ಟಿ ಅವರು, ಲೋಕಾಯುಕ್ತ ಪೊಲೀಸರು ಒಟ್ಟು 70 ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿದ್ದು, ಈ ಪೈಕಿಯಾರೊಬ್ಬರೂ ಕೂಡ ಮುಖ್ಯಮಂತ್ರಿಗಳು ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಅಥವಾ ತನಿಖೆಯ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಹೇಳಿಕೆ ನೀಡಿಲ್ಲ. ತನಿಖಾಧಿಕಾರಿಗಳು ಎಲ್ಲಾ ಆಯಾಮಗಳಿಂದ ಪರಿಶೀಲಿಸಿ ಬಿ–ರಿಪೋರ್ಟ್ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಕಕ್ಷಿದಾರರಾಗಿ ಹಾಜರಿದ್ದ ಸ್ನೇಹಿಮಯಿ ಕೃಷ್ಣ ಅವರು ನ್ಯಾಯಾಲಯಕ್ಕೆ ಲಿಖಿತ ಅಹವಾಲು ಸಲ್ಲಿಸಿದರು. ವಾದ–ವಿವಾದ ಆಲಿಸಿದ ನ್ಯಾಯಾಲಯ ಕರಣದ ಸೂಕ್ಷ್ಮತೆಯನ್ನು ಪರಿಗಣಿಸಿ ಜನವರಿ 22ರಂದು ತನ್ನ ಅಂತಿಮ ಆದೇಶವನ್ನು ಪ್ರಕಟಿಸುವುದಾಗಿ ತಿಳಿಸಿತು.

ನಾಳೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ; ಸಂಕ್ರಾಂತಿ ಸಂಭ್ರಮ ಸಂಗೀತ ಸಂಜೆ

ಮೈಸೂರು, ಜ. 13– ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನ ಹಾಗೂ ಗಾನ ನಂದನ ಸಂಸ್ಥೆ ಸಹಯೋಗದಲ್ಲಿ ಜ.15ರಂದು ಸಂಜೆ 6.30ಕ್ಕೆ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ 'ಸಂಕ್ರಾಂತಿ ಸಂಭ್ರಮ' ಹಾಗೂ 11ನೇ ವರ್ಷದ ರಾಜ್ಯಮಟ್ಟದ 'ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ' ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಚಿತ್ರ ನಟ ಬಾಲ ರಾಜ್ವಾಡಿ, ಸಂಸ್ಕೃತಿ ಚಿಂತಕ ಡಾ.ರಘುರಾಂ ವಾಜಪೇಯಿ, ಶ್ರೀ ರಾಜರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥೆಯ ಪ್ರಸಾದನ ಕಲಾವಿದ ಬಿ.ಎಂ.ರಾಮಚಂದ್ರು, ಪತ್ರಕರ್ತರಾದ ಧರ್ಮಾಪುರ ನಾರಾಯಣ್, ರವಿ ಪಾಂಡವಪುರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ವೇಳೆ ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮನೋವೈದ್ಯ ಡಾ.ಬಿ.ಎನ್.ರವೀಶ್ ಹಾಗೂ ಯುವ ಪರ್ವತಾರೋಹಿ ಸೂರ್ಯಕೃಷ್ಣ ಅವರನ್ನು ಅಭಿನಂದಿಸಲಾಗುವುದು.

ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಸಮಾರಂಭವನ್ನು ಉದ್ಘಾಟಿಸಲಿದ್ದು, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಜನಹಿತ ವಿವಿದೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಭೈರಪ್ಪ, ಪಡುವಾರಹಳ್ಳಿ ಗ್ರಾಮಾಭ್ಯುದಯ ಸಂಘದ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವ ಸ್ವಾಮಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನ ಹಾಗೂ ಗಾನ ನಂದನ ಅಧ್ಯಕ್ಷ ಎನ್.ಬೆಟ್ಟೇಗೌಡ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಸಂಗೀತ ಸಂಜೆ: ಸಂಜೆ 5ರಿಂದ ರಾತ್ರಿ 9.30ರವರೆಗೆ ಸಂಕ್ರಾಂತಿ ಸಂಭ್ರಮ ಸಂಗೀತ ಸಂಜೆ ಕಾರ್ಯಕ್ರಮವು ಎನ್.ಬೆಟ್ಟೇಗೌಡರ ನೇತೃತ್ವದಲ್ಲಿ ಡಾ.ವೈ.ಡಿ.ರಾಜಣ್ಣ, ಡಾ.ಪೂರ್ಣಿಮಾ, ಡಾ.ಶ್ರೀಲತಾ ಮನೋಹರ್, ಸಿ.ಎಸ್.ವಾಣಿ, ಶ್ವೇತ, ನಾಗೇಂದ್ರ ಡಾ.ಚಿನ್ನ ನಾಗಪ್ಪ, ಕು.ಪಿ.ಶ್ರೇಯಾ, ರೇವತಿ ಕೃಷ್ಣಪ್ಪ ಹಾಡಲಿದ್ದಾರೆ.

ಶ್ರೀಗಳ ಪುಣ್ಯಸ್ಮರಣೆ...



ಶ್ರೀ ಬಾಲಗಂಗಾಧರ ನಾಥ ಮಹಾ ಸ್ವಾಮೀಜಿಯವರ 13ನೇ ಪುಣ್ಯಾರಾಧನಾ ಕಾರ್ಯಕ್ರಮ ನೆರವೇರಿತು. ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ಕೊಪ್ಪಲ್ ದೀಪು, ರಾಘು, ಮಹದೇವ್, ಅರವಿಂದ್‌ನಗರ ರಾಜು, ಡಿಪೋ ರಘು, ಕುಮಾರ್, ಕಿರಣ್, ಪ್ರದೀಪ್, ಲಿಖಿತ್ ಇನ್ನಿತರರು ಉಪಸ್ಥಿತರಿದ್ದರು.

ಮೂಲ ಸೌಕರ್ಯಕ್ಕಾಗಿ ಮಹದೇವಪುರ ಬಡಾವಣೆ ನಿವಾಸಿಗಳ ಪ್ರತಿಭಟನೆ



ಮೂಲಸೌಕರ್ಯಕ್ಕಾಗಿ ಮಹದೇವಪುರ ಬಡಾವಣೆ ನಿವಾಸಿಗಳು ಪ್ರತಿಭಟಿಸಿದರು.

ಮೈಸೂರು,ಜ.13–ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಮಹದೇವಪುರ ಬಡಾವಣೆ ಎ–ಬ್ಲಾಕ್ ನಿವಾಸಿಗಳು ಸಮರ್ಪಕ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ, ಪ್ರತಿಭಟನೆ ನಡೆಸಿದರು.

ಬಡಾವಣೆಯ ಗಂಭೀರ ಸಮಸ್ಯೆಗಳನ್ನು ಪರಿಹರಿಸುವಂತೆ ವರ್ಷಗಳಿಂದ ಹೋರಾಡುತ್ತಾ ಬಂದಿದ್ದು, ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಶಾಸಕರು ಬಡಾವಣೆಗೆ ಭೇಟಿ ನೀಡಿ, ನಮ್ಮ ಸಮಸ್ಯೆ ಆಲಿಸಿಲ್ಲ. ಎ ಮತ್ತು ಬಿ ಬ್ಲಾಕ್‌ಗಳಲ್ಲಿ ರಸ್ತೆ, ಶುದ್ಧ ಕುಡಿಯುವ ನೀರಿನ ಪೂರೈಕೆ, ಬೀದಿದೀಪಗಳು ಸಮರ್ಪಕವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆಗಳ ಪರಿಹಾರಕ್ಕೆ ಕ್ರಮ ವಹಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸ್ಥಳೀಯರಾದ ನಾಗರಾಜು, ಚೆಲುವರಾಜು ಕುಬೇಂದ್ರಪ್ಪ, ಕುಮಾರ್ ಭಟ್ಟ, ಬಿಜೆಪಿ ಮುಖಂಡ ಕಿರಣ್ ನಾಯ್ಡು, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಚಂದ್ರಶೇಖರ್, ಸ್ವಾಮಿ, ಜೈ ಕರ್ನಾಟಕ ಸಂಘಟನೆಯ ಮಧು, ರಾಜೇಶ್ವರಿ, ಸುಜಾತ, ಮಂಗಳ, ಈಶ್ವರಿ, ತ್ರಿವೇಣಿ ಮತ್ತಿತರರು ಪಾಲ್ಗೊಂಡಿದ್ದರು.

ನಿಧನ

ನಾಗರಾಜಯ್ಯ



ಮೈಸೂರು, ಜ. 13– ಮಂಡ್ಯದ ಮೈಸೂರು ಸಕ್ಕರೆ ಕಂಪನಿ ಲಿಮಿಟೆಡ್ (ಮೈಷುಗರ್)ನ ನಿವೃತ್ತ ಉದ್ಯೋಗಿ ನಾಗರಾಜಯ್ಯ (79) ಅವರು ಸೋಮವಾರ(ಜ.12) ನಿಧನರಾದರು.

ಇವರು ಪತ್ನಿ, ಮಕ್ಕಳಾದ ಮೈಸೂರಿನ ಸುಪ್ರಿಯ ಆಸ್ಪತ್ರೆಯ ಸಿಇಒ ಡಾ.ಜಿ.ಎನ್.ನರೇಂದ್ರ ಬಾಬು ಹಾಗೂ ಜಿ.ಎನ್. ನವೀನ್‌ಕುಮಾರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮವಾದ ಮಂಡ್ಯ ತಾಲೂಕು ಬಿ.ಗೌಡಗೆರೆಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಸ್ತಫಾ ಕಮಾಲ್‌ಪಾಷ



ಮೈಸೂರಿನ ರಾಜೀವ್‌ನಗರದ ನಿವಾಸಿ, ನಿವೃತ್ತ ಪೊಲೀಸ್ ಮುಸ್ತಫಾ ಕಮಾಲ್‌ಪಾಷ (76) ಅವರು ಜ.9ರಂದು ನಿಧನರಾದರು. ಇವರು ತಾಯಿ, ಪುತ್ರ, ನಾಲ್ವರು ಸಹೋದರಿಯರು, ಮೂವರು ಸಹೋದರರು ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಜ.10ರಂದು ಅಸರ್ ಸಲಾತ್ ನಂತರ ಈದ್ಗಾ ಮಸೀದಿಯಲ್ಲಿ ಅಂತ್ಯಕ್ರಿಯೆಯ ಪ್ರಾರ್ಥನೆ ನೆರವೇರಿಸಿದ ನಂತರ ಟಿಪ್ಪು ಸರ್ಕಲ್ ಬಳಿಯ ಮುಸ್ಲಿಮರ ರುದ್ರಭೂಮಿ ಗೇಟ್ ನಂ.8ರಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೇನಂಡ ಎಂ.ಬೋಪಣ್ಣ



ಮೂಲತಃ ವಿರಾಜಪೇಟೆ ತಾಲೂಕು ಕೊಕೇರಿ ಗ್ರಾಮದವರಾದ ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಚೇನಂಡ ಎಂ.ಬೋಪಣ್ಣ(ಮುತ್ತು) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಇವರಿಗೆ 86 ವರ್ಷ ವಯಸ್ಸಾಗಿತ್ತು. ಇವರು ಪುತ್ರ ಜೆರ್ರಿ ಮಂದಣ್ಣ, ಪುತ್ರಿ ಕೋಡಿಮಣಿಯಂಡ ಜೆಸ್ಸಿಕಾ ನಂಜುಂಡ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಬುಧವಾರ (ಜ.14) ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.1.2026 ಬುಧವಾರ, ಮಳೆ ನಕ್ಷತ್ರ: ಉಷಾ, 11.01.2026ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ



ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ
ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಚಲನಚಿತ್ರೋತ್ಸವ–2026

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)

- **ಶ್ರೀ ರಂಗಮಂದಿರ:** ಬೆಳಗ್ಗೆ 10 ರಿಂದ ಮುಸಾಹರ್ (ಹಿಂದಿ), ನಿರ್ದೇಶನ : ಅಭಿನವ್ ಪಾಂಡೇ; ಮಧ್ಯಾಹ್ನ 12 ರಿಂದ ಜೈ ಭೀಮ್ ಕಾಮ್ರೇಡ್–2 (ಹಿಂದಿ) ನಿರ್ದೇಶನ : ಆನಂದ್ ಪಟವರ್ಧನ್; ಮಧ್ಯಾಹ್ನ 2 ರಿಂದ ಕಾಳ್ಜಾಡಿ (ಕನ್ನಡ), ನಿರ್ದೇಶನ: ಗಿರೀಶ್ ಮಾಚಳ್ಳಿ.

ಮಕ್ಕಳ ಬಹುರೂಪಿ

- **ಭೂಮಿಗೀತ :** ಮಣಿಪುರ್ ಕಲಾಕ್ಷೇತ್ರ ತಂಡದಿಂದ ಪಿ ಥದೊಂಯ್ (ಮಣಿಪುರಿ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಹೈಸ್ನಾಂ ತೋಂಬಾ ಸಿಂಗ್, ಸಂಜೆ 6.30ಕ್ಕೆ.
- **ವನರಂಗ :** ತಮಾಷ ಥಿಯೇಟರ್, ಗೊರೆಗಾಂವ್, ಮುಂಬೈ ಕಲಾವಿದರಿಂದ ಸೇಮ್ ಸೇಮ್ ಬಟ್ ಡಿಫರೆಂಟ್ (ಇಂಗ್ಲಿಷ್) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಸಪನ್ ಸರನ್, ಸಂಜೆ 7ಕ್ಕೆ
- **ಕಿರು ರಂಗಮಂದಿರ :** ಚಾಮರಾಜನಗರ ರಂಗವಾಹಿನಿ ಕಲಾತಂಡದಿಂದ ಬೆಲ್ಲದ ದೋಣಿ (ಕನ್ನಡ) ನಾಟಕ ಪ್ರದರ್ಶನ, ರಚನೆ : ಹನೂರು ಚನ್ನಪ್ಪ, ನಿರ್ದೇಶನ : ರೂಬಿನ್ ಸಂಜಯ್, ಸಂಜೆ 7ಕ್ಕೆ.
- **ಕಲಾಮಂದಿರ :** ತೆಕ್ಕಟ್ಟೆ ಧಮನಿ ಕಲಾ ತಂಡದಿಂದ ಸೂರ್ಯ ಚಂದ್ರ (ಕನ್ನಡ) ನಾಟಕ ಪ್ರದರ್ಶನ, ರಚನೆ : ಡಾ. ಕೋಟ ಶಿವರಾಮ ಕಾರಂತ, ನಿರ್ದೇಶನ : ರೋಹಿತ್ ಎಸ್. ಬೈಕಾಡಿ, ಬೆಳಗ್ಗೆ 11 ಮತ್ತು ಸಂಜೆ 7ಕ್ಕೆ.

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ:** ಶ್ರೀಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ, ಮೈಸೂರಿನ ಹಿರಿಯ ಹಾಗೂ ಕಿರಿಯ ಕಲಾವಿದರಿಂದ ಗೋಷ್ಠಿಗಾಯನ, ಸ್ಥಳ: ಚಾಮುಂಡಿಬೆಟ್ಟದ ದೇವಸ್ಥಾನದ ಒಳಗೆ, ಸಂಜೆ 6 ರಿಂದ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಕಾರ್ಯಕ್ರಮ, ನೂಪುರ ನೃತ್ಯಾಲಯದ ಶ್ರೀಮತಿ ದಿವ್ಯಾ ಪ್ರಶಾಂತ್ ಅವರ ಶಿಷ್ಯರಾದ ಲಿಷಿತಾ ಎಂ. ಗೌಡ, ಸಹನಾ, ವಿ. ವಿನಿಷಾ, ಕೆ. ಮಾನ್ಯ, ಸಿ.ಟಿ. ಅರುಷಿ, ಡಿಂಪಲ್ ಆದ್ಯಾ, ಇಪ್ಸಿತಾ, ಎನ್. ತೇಜಸ್ವಿನಿ, ಬಿ.ಎಸ್. ಮೋಹನಾತಿ, ಕೆ. ಮನೋಜ್ಞ, ಪ್ರೀಶಾ ಪ್ರಶಾಂತ್, ಕೆ. ಸುದೀಕ್ಷಾ, ಕೆ. ದೀಕ್ಷಿತಾ, ಆದ್ಯಾ ಆನಂದ ಅರಸ್, ಧ್ರುವಿಕ ಆರ್. ಆಚಾರ್, ಸೋನು ಎ., ಎಸ್. ಗೆಹನಾ, ಎಂ.ಡಿ. ತಾನಿಯಾ, ಸಹನಾ, ನೈಸಾ, ಎ.ಎಸ್.ದುರ್ಗಾಶ್ರೀ, ಸಹನಾ ಪ್ರಶಾಂತ್, ಪೂರ್ಣಿಮಾ ದಬೇಕರ್, ನಿಷಿತಾ ವಿನಯ್ ಅವರಿಂದ ಭರತನಾಟ್ಯ ಮತ್ತು ಮೋಹಿನಿಯಾಟ್ಟಂ ನೃತ್ಯ ಪ್ರದರ್ಶನ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.
- **ಶಬರಿಮಲೈ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಶ್ರೀ ಚಾಮುಂಡಿಬೆಟ್ಟದ ಪಾದದಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ, ಉದ್ಘಾಟನೆ : ಶ್ರೀ ಅರಮನೆ ಜಪದಕಟ್ಟೆ ಮಠದ ಡಾ. ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ. ದೇವೇಗೌಡ, ಹರೀಶ್‌ಗೌಡ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ, ಸಂಜೆ 6.20 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ : ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ಗಂಧದ ಗುಡಿ ಫೌಂಡೇಷನ್, ಮೈಸೂರು ನಗರ ಸಂಚಾರ ಪೊಲೀಸ್ :** ರಸ್ತೆ ಸುರಕ್ಷತಾ ಸಪ್ತಾಹ–2026, ಸಂಕ್ರಾಂತಿ ಹಬ್ಬದ ಪ್ರಯುಕ್ತ ಸಂಚಾರಿ ನಿಯಮ ಉಲ್ಲಂಘನೆ ಮಾಡಿದವರಿಗೆ ಎಳ್ಳು ಬೆಲ್ಲ ಕೊಟ್ಟು ಸಂಚಾರ ನಿಯಮದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಉಪಸ್ಥಿತರು : ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್‌ರಾಜ್, ಸಹಾಯಕ ಪೊಲೀಸ್ ಆಯುಕ್ತ ಎಂ. ಶಿವಶಂಕರ್, ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಮನೋಹರ್‌ಗೌಡ, ಮೇಘನರಾಜ್, ಯಶೋಧ, ಅಭಿನಂದನ್ ಅರಸ್, ಮಾದೇವ ಶೆಟ್ಟಿ, ರಮೇಶ್, ಸ್ಥಳ: ಕೆ.ಆರ್. ವೃತ್ತ, ಬೆಳಗ್ಗೆ 10ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ–ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ ಪುಟ್ಟಿ ಹಾಗೂ ಎಂ.ಎಸ್. ಲಕ್ಷೀಶ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು –ಅರ್ಚನಾ ಕುಲ್ಕರ್ಣಿ, 8.30 ಯುವವಾಣಿ :ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಇಂಗ್ಲಿಷ್ / English, ಭಾಗವಹಿಸುತ್ತಾರೆ – ಹುಣಸೂರಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲೀಷ್ ಉಪನ್ಯಾಸಕರಾದ ಸದಾನಂದ. ಆರ್.ಪ್ರಸ್ತುತಿ–ದಿಗ್ವಿಜಯ್.ಬಿ., 9.15 ಮನೋನಂದನ, ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು– ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ, ಮೈಸೂರು, ವಿಷಯ–ಮಾನಸಿಕ ರೋಗಗಳ ಚಿಕಿತ್ಸೆಯಲ್ಲಿ ಬಳಸುವ ಔಷಧಗಳ ಪರಿಣಾಮ, ತಪ್ಪು ಕಲ್ಪನೆಗಳ ನಿವಾರಣೆ ಭಾಗವಹಿಸುವ ತಜ್ಞರು–ಡಾ. ಅಭಿಜಿತ್ ಹೆಚ್.ಆರ್., ಮನೋವೈದ್ಯರು, ಪ್ರಸ್ತುತಿ–ಡಾ. ಕುಲದೀಪ್ .ಎನ್., 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಎ.ಎಸ್. ಮುರಳೀಧರ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಜೆ. ಶ್ರೀನಿವಾಸ ಐಯ್ಯಂಗಾರ್–ವೀಣಾ ವಾದನ, 4.00 ಮಹಿಳಾರಂಗ–ಸಂಕ್ರಾಂತಿ ಹಬ್ಬದ ಕುರಿತು ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ– ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲೂಕಿನ ಶಾಶ್ವತಿ ಅಕ್ಕಮಹಾದೇವಿ ಬಳಗದ ಸದಸ್ಯರು, 4.30 ಹಿಂದಿಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಮಧುಬಾಲ ಅಗರ್ ವಾಲ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಮೈಸೂರಿನ ಕರ್ಜನ್ ಪಾರ್ಕ್, ಡಾ. ಎಂ.ಹೆಚ್. ಮರಿಗೌಡ ಸಭಾಂಗಣದಲ್ಲಿ ನಡೆದ ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ ಹಣ್ಣು–ಹೊನ್ನು ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡ ಚಿತ್ರಗೀತೆಗಳು, 8.00 ಮಕ್ಕಳ ಮಂಟಪ–ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಪ್ರಥಮ ಭಾಷೆ ಸಂಸ್ಕೃತ ಭಾಗವಹಿಸುವವರು–ಲಕ್ಷ್ಮೀನಾರಾಯಣ ಭಟ್ಟ, ಶಿಕ್ಷಕರು, ರಾಮಕೃಷ್ಣ ವಿದ್ಯಾಶ್ರಮ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 9.30 ಕ್ರೀಡಾಲೋಕ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025 – ಮನೋಜ್ ಬರುವ್ವಾ– ವೈಯೋಲಿನ್ ವಾದನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 14 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 267 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗಮನ–ನಿರ್ಗಮನದೊಂದಿಗೆ ಸಿಎಂ ಕುರ್ಚಿ ಕಾದಾಟದ ಸನ್ನಿವೇಶಕ್ಕೆ ಸಾಕ್ಷಿಯಾಯ್ತು ಮೈಸೂರು ವಿಮಾನ ನಿಲ್ದಾಣ; ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ

ರಾಹುಲ್ ಗಾಂಧಿ ಗುಪ್ತ್... ಗುಪ್ತ್... ಮಾತುಕತೆ

ಮೈಸೂರು, ಜ.13(ಬಿಎಲ್‌ಯು)– 'ಮುಖ್ಯಮಂತ್ರಿ ಕುರ್ಚಿ ಕದನ'ದ ನಡುವೆ ಮೈಸೂರಿನಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರ ಜೊತೆ ಪ್ರತ್ಯೇಕ ಗುಪ್ತ್... ಗುಪ್ತ್... ಮಾತುಕತೆ ನಡೆಸಿದರು. ಮೈಸೂರು ವಿಮಾನ ನಿಲ್ದಾಣದಲ್ಲಿ ನಡೆದ ಕೆಲ ನಿಮಿಷಗಳ ಪ್ರತ್ಯೇಕ ಮಾತುಕತೆ ಪ್ರಹಸನ, ರಾಜ್ಯ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ಇಂದು ಮಧ್ಯಾಹ್ನ ದೆಹಲಿಯಿಂದ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರನ್ನು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು. ಆದರೆ ಸಮಯದ ಅಭಾವದಿಂದ ರಾಹುಲ್‌ಗಾಂಧಿ ತರಾತುರಿಯಲ್ಲೇ ತಮಗಾಗಿ ಕಾದಿದ್ದ ಹೆಲಿಕಾಪ್ಟರ್‌ನಲ್ಲಿ ತಮಿಳುನಾಡಿನ ಗುಡಲೂರಿಗೆ ತೆರಳಿದರು.

ಅಲ್ಲಿನ ಸೈಂಟ್ ಥಾಮಸ್ ಇಂಗ್ಲಿಷ್ ಹೈಸ್ಕೂಲ್ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು, ಸಂಜೆ ವೇಳೆಗೆ ಮತ್ತೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಈ ವೇಳೆ ಸಿಎಂ, ಡಿಸಿಎಂ ಸೇರಿದಂತೆ ಕೆಲ ನಾಯಕರು ಹಾಗೂ ಮುಖಂಡರು ಅವರನ್ನು ನವದೆಹಲಿಗೆ ಬೀಳ್ಕೊಡಲು ಕಾದಿದ್ದರು. ರಾಹುಲ್ ಗಾಂಧಿ ಹೆಲಿಕಾಪ್ಟರ್ ಇಳಿಯುತ್ತಿದ್ದಂತೆ ■6ನೇ ಪುಟಕ್ಕೆ


ಮೊದಲು ಜೊತೆ ಜೊತೆ....


ಮುಖ್ಯಮಂತ್ರಿಗಳೊಂದಿಗೆ....


ಉಪಮುಖ್ಯಮಂತ್ರಿಗಳೊಂದಿಗೆ.... } ರಾಹುಲ್‌ಗಾಂಧಿ ಮಾತುಕತೆ

ಬರುವಾಗ ಜಂಟಿ...! ಹೋಗುವಾಗ ಒಂಟಿ...!!

ಮೈಸೂರು: ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಿ–ಬೀಳ್ಕೊಡಲೆಂದು ಬೆಂಗಳೂರಿಂದ ವಿಶೇಷ ವಿಮಾನದಲ್ಲಿ ಒಟ್ಟಿಗೆ ಹಾರಿ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆದರೆ ಸಂಜೆ ವೇಳೆಗೆ ಒಂಟೊಂಟಿಯಾಗಿ ವಾಪಸ್ಸಾಗಿದ್ದಾರೆ. ಇದು ಇಬ್ಬರ ನಡುವೆ ಎಲ್ಲವೂ ಸರಿಯಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಧಿಕೃತ ಪ್ರವಾಸ ಕಾರ್ಯಕ್ರಮದ ಪ್ರತ್ಯೇಕ ಪ್ರಕಟಣೆಯಲ್ಲೂ ಇಬ್ಬರೂ ಒಂದೇ ವಿಶೇಷ ವಿಮಾನದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಬಂದು, ಅದರಲ್ಲೇ ವಾಪಸ್ಸಾಗುತ್ತಾರೆ ಎಂದು ನಿಗದಿಯಾಗಿತ್ತು. ಇದನ್ನು ಬರುವಾಗ ಪಾಲಿಸಿದ ಉಭಯ ನಾಯಕರು, ಮೈಸೂರು ವಿಮಾನ ನಿಲ್ದಾಣದಲ್ಲಿ ಪಕ್ಷದ ಅಧಿನಾಯಕನ ಸಮ್ಮುಖದಲ್ಲಿ ನಡೆದ ಪ್ರಹಸನದ ನಂತರ ತೆರಳುವಾಗ ಪಾಲಿಸಲಿಲ್ಲ.

ತಮಿಳುನಾಡಿನಿಂದ ಮೈಸೂರು ವಿಮಾನ ನಿಲ್ದಾಣಕ್ಕೆ ವಾಪಸ್ಸಾದ ರಾಹುಲ್ ಗಾಂಧಿಯನ್ನು ದೆಹಲಿಗೆ ಬೀಳ್ಕೊಟ್ಟ ಬಳಿಕ ಸಿಎಂ ■6ನೇ ಪುಟಕ್ಕೆ

ಬಜೆಟ್‌ಗೂ ಮುನ್ನ ಸಾಧನಾ ಸಮಾವೇಶ

ಮುಖ್ಯಮಂತ್ರಿಯಾಗಿ ಮುಂದುವರೆಯುವ ಇಂಗಿತ

ಮೈಸೂರು: ಇಷ್ಟೆಲ್ಲಾ ರಾಜಕೀಯ ಪ್ರಹಸನದ ನಡುವೆ ಸಾಧನಾ ಸಮಾವೇಶ ನಡೆಸಲು ಉದ್ದೇಶಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವ ಮೂಲಕ ಮತ್ತೊಮ್ಮೆ ತಮ್ಮ ಶಕ್ತಿ ಪ್ರದರ್ಶನದ ಮುನ್ಸೂಚನೆ ನೀಡಿದ್ದಾರೆ.

ಬಜೆಟ್ ಮಂಡನೆಗೂ ಮುನ್ನ ಸಾಧನಾ ಸಮಾವೇಶ ಆಯೋಜಿಸಲಾಗುವುದು. ರಾಜ್ಯದಲ್ಲಿ ಅತೀ ಹೆಚ್ಚು ಅವಧಿಯ ಮುಖ್ಯಮಂತ್ರಿ ಎಂಬ ದಾಖಲೆ ನಿರ್ಮಿಸಿರುವ ಹಿನ್ನೆಲೆಯಲ್ಲಿ ಫೆಬ್ರವರಿ 13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶ ನಡೆಸುವ ಬಗ್ಗೆ ಎಲ್ಲಾ ರೀತಿಯ ತಯಾರಿ ನಡೆಯುತ್ತಿದೆ. ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ಆಯವ್ಯಯ ಮಂಡಿಸುತ್ತೇನೆ. ವಿಧಾನಸಭಾ ವಿಶೇಷ ಅಧಿವೇಶನ ನಡೆಸುವ ಬಗ್ಗೆ ಬುಧವಾರ ನಡೆಯುವ ತುರ್ತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮರಳುತ್ತಾರೆಂಬ ಚರ್ಚೆ ಬಗ್ಗೆ ಪ್ರತಿಕ್ರಿಯಿಸಿ, ಅವರೇನಾದರೂ ರಾಜ್ಯ ರಾಜಕಾರಣಕ್ಕೆ ಬರುತ್ತಿರುವ ಬಗ್ಗೆ ಹೇಳಿಕೆ ನೀಡಿದ್ದಾರೆಯೇ ಎಂದು ಪ್ರಶ್ನಿಸಿದರು. ನೇರವಾಗಿ ಈ ಮಾತು ಹೇಳಿಲ್ಲ, ಆದರೆ ಅವರ ಹೇಳಿಕೆಗಳನ್ನು ಗಮನಿಸಿದರೆ ರಾಜ್ಯ ■6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ಚರ್ಚೆ ನಡೆದಿಲ್ಲ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಹೈಕಮಾಂಡ್ ತೀರ್ಮಾನಕ್ಕೆ ಇಬ್ಬರೂ ಬದ್ಧ
- ಪ್ರತಿಕ್ರಿಯೆಗೆ ಸಿಗದ ಡಿಸಿಎಂ ಶಿವಕುಮಾರ್

ಮೈಸೂರು, ಜ.13(ಬಿಎಲ್‌ಯು)– ಮೈಸೂರಿಗೆ ಆಗಮಿಸಿದ್ದ ರಾಹುಲ್ ಗಾಂಧಿ ಅವರ ಜೊತೆ ಅಧಿಕಾರ ಹಸ್ತಾಂತರ ಕುರಿತಂತೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.



ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಮಧ್ಯಾಹ್ನ ತಮಿಳುನಾಡಿನ ಗುಡಲೂರಿಗೆ ತೆರಳುತ್ತಿದ್ದ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಅವರು ತಮಿಳುನಾಡಿಗೆ ತೆರಳಲು ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಈ ವೇಳೆ ಅವರನ್ನು ಸ್ವಾಗತಿಸಿದ್ದೇವೆ. ಆದರೆ ಅವರೊಂದಿಗೆ ರಾಜಕೀಯವಾಗಿ ಯಾವುದೇ ಮಾತುಕತೆ ನಡೆಸಿಲ್ಲ. ಅಧಿಕಾರ ಹಸ್ತಾಂತರ ಅಥವಾ ಸಚಿವ ಸಂಪುಟ ಪುನಾರಚನೆ ಬಗ್ಗೆ ಯಾವುದೇ ಚರ್ಚೆ ಮಾಡಿಲ್ಲ ಎಂದು ತಿಳಿಸಿದರು.

ಅಧಿಕಾರ ಹಂಚಿಕೆ ಬಗ್ಗೆ ಊಹಾಪೋಹ ಮಾಧ್ಯಮಗಳ ಸೃಷ್ಟಿಸುತ್ತಿವೆಯಷ್ಟೇ. ವಾಸ್ತವವಾಗಿ ಯಾವುದೇ ಗೊಂದಲ, ಸಮಸ್ಯೆ ಇಲ್ಲ. ಅಷ್ಟೆ ಅಲ್ಲದೆ ಈ ವಿಚಾರದಲ್ಲಿ ಎಲ್ಲೂ, ಯಾವತ್ತೂ ಯಾರೂ ಅಪಸ್ವರ ಎತ್ತಿಲ್ಲ ಎಂದು ಸ್ಪಷ್ಟನೆ ನೀಡಿದರು. ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಶಾಸಕ ಇಕ್ಬಾಲ್ ಹುಸೇನ್ ಸೇರಿದಂತೆ ಹಲವು ಕಾಂಗ್ರೆಸ್ ಶಾಸಕರೇ ಮಾತನಾಡುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಯಾರೋ ಎಂಎಲ್‌ಎಗಳು ಏನೂ ಗೊತ್ತಿಲ್ಲದೆ ಏನೇನೊ ಹೇಳುತ್ತಾರೆ. ಅವರಿಗೆಲ್ಲಾ ■6ನೇ ಪುಟಕ್ಕೆ

ರಾಹುಲ್ ಗಾಂಧಿ ಕಮಿಂಗ್ ಅಂಡ್ ಗೋಯಿಂಗ್...

ಮೈಸೂರು: 'ರಾಹುಲ್ ಗಾಂಧಿ ಕಮಿಂಗ್ ಅಂಡ್ ಗೋಯಿಂಗ್'. ಇದು ರಾಹುಲ್ ಗಾಂಧಿ ಮೈಸೂರು ಭೇಟಿ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಒಂದೇ ವಾಕ್ಯದ ಸ್ಪಷ್ಟನೆ.

ಅಧಿಕಾರ ಹಸ್ತಾಂತರ ಕುರಿತಂತೆ ರಾಹುಲ್ ಗಾಂಧಿ ಅವರ ಜೊತೆ ಚರ್ಚೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಹುಲ್ ಗಾಂಧಿ ಕಮಿಂಗ್ ಅಂಡ್ ಗೋಯಿಂಗ್'. ಅವರೊಂದಿಗೆ ಅಧಿಕಾರ ಹಸ್ತಾಂತರದ ಬಗ್ಗೆ ಯಾವುದೇ ರೀತಿಯ ಚರ್ಚೆ ಮಾಡಿಲ್ಲ ಎಂದು ತಮ್ಮದೇ ಹಾಸ್ಯಧಾಟಿಯಲ್ಲಿ ತಿಳಿಸಿದರು. ದೆಹಲಿಯಿಂದ ಬಂದ ರಾಹುಲ್ ಗಾಂಧಿ ಅವರು ತಮಿಳುನಾಡಿನ ಗುಡಲೂರಿಗೆ ತೆರಳಿದರು. ತಮಿಳುನಾಡಿನಿಂದ ದೆಹಲಿಗೆ ತೆರಳಲು ಮತ್ತೆ ಮೈಸೂರು ವಿಮಾನ ನಿಲ್ದಾಣಕ್ಕೆ ಬರುತ್ತಾರೆ. ಅವರನ್ನು ಬೀಳ್ಕೊಡುವಾಗಲೂ ಅವರೊಂದಿಗೆ ರಾಜಕೀಯವಾಗಿ ಚರ್ಚೆ ನಡೆಸುವುದಿಲ್ಲ ಎಂದು ಹೇಳಿದರು.

ಸದ್ಯಕ್ಕೆ ದೆಹಲಿಗೆ ಹೋಗಲ್ಲ: ಸಚಿವ ಸಂಪುಟ ಪುನಾರಚನೆ ಕುರಿತು ಮಾತನಾಡಲು ದೆಹಲಿಗೆ ತೆರಳುತ್ತಿದ್ದೀರಾ ಎಂಬುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಸದ್ಯಕ್ಕೆ ನಾನು ದೆಹಲಿಗೆ ಹೋಗುತಿಲ್ಲ ಎಂದು ಸ್ಪಷ್ಟಪಡಿಸಿದರು.

ಶ್ವಾನ ಪ್ರಿಯರಿಗೆ ಸುಪ್ರೀಂಕೋರ್ಟ್ ಚಾಟಿ

ಅಷ್ಟೊಂದು ಪ್ರೀತಿ ಇದ್ದರೆ ನಿಮ್ಮ ಮನೆಗೇಕೆ ಕರೆದೊಯ್ಯಬಾರದು!

ನವದೆಹಲಿ: ಕಳೆದ ಐದು ವರ್ಷಗಳಿಂದ ಬೀದಿ ಪ್ರಾಣಿಗಳ ವಿಚಾರದಲ್ಲಿ ನಿಯಮಗಳ ಅನುಷ್ಠಾನದ ಕೊರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಸುಪ್ರೀಂಕೋರ್ಟ್, ನಾಯಿ ಕಡಿತದ ಘಟನೆಗಳಿಗೆ ಭಾರಿ ಪರಿಹಾರ ಪಾವತಿಸಲು ರಾಜ್ಯಗಳನ್ನೇ ಹೊಣೆ ಮಾಡುವುದಾಗಿ ಮಂಗಳವಾರ ಹೇಳಿದೆ.



ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್‌ವಿ ಅಂಜಾರಿಯಾ ಅವರಿದ್ದ ಪೀಠವು, ನಾಯಿ ಕಡಿತದ ಘಟನೆಗಳಿಗೆ ನಾಯಿ ಪ್ರಿಯರು ಮತ್ತು ಅವುಗಳಿಗೆ ಆಹಾರ ನೀಡುವವರು ಸಹ ಜವಾಬ್ದಾರರು ಮತ್ತು ಹೊಣೆಗಾರರು ಎಂದು ಹೇಳಿತು.

ಮಕ್ಕಳು ಅಥವಾ ವೃದ್ಧರಿಗೆ ಪ್ರತಿಯೊಂದು ನಾಯಿ ಕಡಿತ, ಸಾವು ಅಥವಾ ಗಾಯಕ್ಕೆ, ಆಯಾ ರಾಜ್ಯ ಸರ್ಕಾರಗಳು ಭಾರೀ ಪರಿಹಾರ ನೀಡುವಂತೆ ನಾವು ಕೇಳಲಿದ್ದೇವೆ. ಏಕೆಂದರೆ, ಅವರು ಕಳೆದ ಐದು ವರ್ಷಗಳಲ್ಲಿ ನಿಯಮಗಳ ಅನುಷ್ಠಾನದ ವಿಚಾರದಲ್ಲಿ ಏನನ್ನೂ ಮಾಡಿಲ್ಲ. ಅಲ್ಲದೆ, ಈ ಬೀದಿ ನಾಯಿಗಳಿಗೆ ಆಹಾರ ನೀಡುತ್ತಿರುವವರ ಮೇಲೆ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಿಗದಿಪಡಿಸಲಾಗುತ್ತದೆ. ನೀವು ಈ ಪ್ರಾಣಿಗಳನ್ನು ತುಂಬಾ ಪ್ರೀತಿಸುತ್ತಿದ್ದರೆ, ಅವುಗಳನ್ನು ನಿಮ್ಮ ಮನೆಗೆ ಏಕೆ ಕರೆದೊಯ್ಯ ಬಾರದು. ಈ ನಾಯಿಗಳು ಏಕೆ ಸುತ್ತಾಡ ಬೇಕು, ಕಚ್ಚಬೇಕು ಮತ್ತು ಜನರನ್ನು ಹೆದರಿಸಬೇಕು ಎಂದು ನ್ಯಾಯಮೂರ್ತಿ ವಿಕ್ರಮ್ ನಾಥ್ ಹೇಳಿದರು.

ನ್ಯಾಯಮೂರ್ತಿ ನಾಥ್ ಅವರ ಅಭಿಪ್ರಾಯಗಳಿಗೆ ಸಮ್ಮತಿ ವ್ಯಕ್ತಪಡಿಸಿದ ನ್ಯಾಯಮೂರ್ತಿ ಮೆಹ್ತಾ, ನಾಯಿಗಳು 9 ವರ್ಷದ ಮಗುವಿನ ಮೇಲೆ ದಾಳಿ ಮಾಡಿದಾಗ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು. ಅವುಗಳಿಗೆ ಆಹಾರ ನೀಡುತ್ತಿರುವ ಸಂಸ್ಥೆಯೇ ಈ ಸಮಸ್ಯೆಗೆ ನಾವು ಕಣ್ಣು ಮುಚ್ಚಿ ■6ನೇ ಪುಟಕ್ಕೆ

ಹಳೇ ವಾಹನಗಳಿಗೆ ಫಿಟ್‌ನೆಸ್ ಪ್ರಮಾಣಪತ್ರ ಗೊಂದಲಕ್ಕೆ ತಿಂಗಳಲ್ಲಿ ಪರಿಹಾರ



- ಮೈಸೂರು ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚವ್ಹಾಣ್ ಸ್ಪಷ್ಟನೆ
- ಅಪಘಾತಗಳ ನಿಯಂತ್ರಣ ದೃಷ್ಟಿಯಿಂದ ಸೆನ್ಸಾರ್ ಬೇಸ್ಡ್ ಚಾಲನಾ ಪರೀಕ್ಷಾ ಟ್ರ್ಯಾಕ್


ಸುದ್ದಿಗೋಷ್ಠಿಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚವ್ಹಾಣ್, ಎಆರ್‌ಟಿಒ ಸಿ.ಎನ್.ರಾಮಚಂದ್ರ ಇದ್ದಾರೆ.

ಮೈಸೂರು, ಜ.13(ಎಂಟಿವೈ)– ಹದಿನೈದು ವರ್ಷಗಳ ಹಳೆಯ ವಾಹನಗಳ ಫಿಟ್‌ನೆಸ್ ಪರೀಕ್ಷಿಸುವ ಆಟೋಮೇಟೆಡ್ ಟೆಸ್ಟಿಂಗ್ ಸೆಂಟರ್(ಎಟಿಎಸ್)ನಲ್ಲಿ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದ್ದು, ತಿಂಗಳೊಳಗೆ ಫಿಟ್‌ನೆಸ್ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯಲ್ಲಿನ ಗೊಂದಲ ನಿವಾರಿಸುವುದಾಗಿ ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚವ್ಹಾಣ್ ತಿಳಿಸಿದ್ದಾರೆ.

ಮೈಸೂರಿನ ಪಶ್ಚಿಮ ಪ್ರಾದೇಶಿಕ ಸಾರಿಗೆ ಇಲಾಖೆಯ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಸೂಚನೆ ಮೇರೆಗೆ 15 ವರ್ಷ ಹಳೆಯದಾದ ವಾಹನಗಳ ಸಾಮರ್ಥ್ಯ(ಫಿಟ್‌ನೆಸ್)ವನ್ನು ಆಟೋಮೇಟೆಡ್ ಟೆಸ್ಟಿಂಗ್ ಸೆಂಟರ್‌ನಲ್ಲಿಯೇ ಪರಿಶೀಲನೆ ಮಾಡಬೇಕಾಗಿದೆ. ಮೈಸೂರಲ್ಲಿ ಎಟಿಎಸ್ ಸೆಂಟರ್‌ನಲ್ಲಿ ಹೊಸ ತಂತ್ರಾಂಶ ಅಳವಡಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ 15 ವರ್ಷ ಹಳೆಯದಾದ ವಾಹನಗಳ ಫಿಟ್‌ನೆಸ್ ಪ್ರಯಾಣ ಪತ್ರ ದೊರೆಯುತ್ತಿಲ್ಲ ಎಂದು ವಾಹನ ಮಾಲೀಕರು ದೂರುತ್ತಿದ್ದಾರೆ. ಫಿಟ್‌ನೆಸ್ ಪ್ರಮಾಣ ಪತ್ರ ನೀಡುವಿಕೆಯಲ್ಲಿ ವಿಳಂಬವಾಗುತ್ತಿದೆ. ಅದನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ. ಒಂದು ತಿಂಗಳೊಳಗೆ ಗೊಂದಲ ನಿವಾರಣೆಯಾಗುತ್ತದೆ. ಪ್ರಸ್ತುತ ಮಂಡ್ಯ ಜಿಲ್ಲೆಯ ಆರ್‌ಟಿಓ ಕಚೇರಿಯಲ್ಲಿ ಪಿಟ್‌ನೆಸ್ ಪರೀಕ್ಷೆಗೆ ಶುಲ್ಕ ಪಾವತಿಸಲು ಸೂಚನೆ ನೀಡಿ, ಮೈಸೂರಲ್ಲೇ ಫಿಟ್‌ನೆಸ್ ಪರೀಕ್ಷೆ ನಡೆಸಲಾಗುತ್ತಿದೆ ಎಂದರು.

ಆನ್‌ಲೈನ್ ಸೇವೆ ಆರಂಭ: ಮೈಸೂರಿನ ಪಶ್ಚಿಮ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ನಿಯಂತ್ರಿಸಿ, ಮಾದರಿ ಕಚೇರಿಯಾಗಿ ಪರಿವರ್ತಿಸಲು ಆನ್‌ಲೈನ್ ಸೇವೆ ಆರಂಭಿಸಲಾಗಿದೆ. ಡಿಎಲ್, ಎಲ್‌ಎಲ್‌ಆರ್, ತೆರಿಗೆ ಪಾವತಿ, ಮಾಲೀಕತ್ವ, ವಿಳಾಸ ಬದಲಾವಣೆ, ಕರಾರು ಒಪ್ಪಂದ ಹಾಗೂ ರದ್ದತಿ, ತೆರಿಗೆ ತೀರುವಳಿ ಪತ್ರ ನೀಡಿಕೆ, ನಕಲು ನೋಂದಣಿ ಪತ್ರ, ನೋಂದಣಿ ಪತ್ರ ನವೀಕರಣ ಸೇರಿದಂತೆ ಒಟ್ಟು 26 ಸೇವೆಗಳನ್ನು ಆನ್‌ಲೈನ್ ಮೂಲಕವೇ ಪಡೆಯಬಹುದಾಗಿದೆ. ಮನೆಯಲ್ಲಿಯೇ ಕುಳಿತುಕೊಂಡು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸೇವೆ ಪಡೆಯಬಹುದಾಗಿದೆ. ಅದಕ್ಕಾಗಿ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ರಸ್ತೆ ಸುರಕ್ಷತಾ ಮಾಸಾಚರಣೆ: ಪ್ರತಿ ವರ್ಷದಂತೆ ಈ ಬಾರಿಯೂ ಜನವರಿ ತಿಂಗಳಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ ಆಚರಿಸಲಾಗುತ್ತಿದೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಯುವ ಜನರಿಗೆ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಅತಿವೇಗದ ವಾಹನ ಚಾಲನೆ, ವ್ಹೀಲಿಂಗ್, ಡ್ರಂಕ್ ಅಂಡ್ ಡ್ರೈವ್‌ಗಳ ದುಷ್ಪರಿಣಾಮಗಳು ಹಾಗೂ ಕಾನೂನಿನ ಮೂಲಕ ವಿಧಿಸಬಹುದಾದ ಶಿಕ್ಷೆಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಪ್ರತಿವರ್ಷ ರಾಜ್ಯದಲ್ಲಿ ಅಪಘಾತದಿಂದ 28 ಸಾವಿರ ಜನ ಮೃತಪಡುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 170ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಮೈಸೂರು ಜಿಲ್ಲೆ ಕಳೆದ 5 ವರ್ಷದಿಂದ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆಯಲ್ಲಿ ರಾಜ್ಯದಲ್ಲಿ ಟಾಪ್–10 ನಗರದಲ್ಲಿ ಸೇರಿದೆ. ಈ ಹಿನ್ನೆಲೆಯಲ್ಲಿ ಅಪಘಾತಗಳ ಸಂಖ್ಯೆ ಕಡಿಮೆ ಮಾಡಲು ಹಾಗೂ ಅಪಘಾತದಲ್ಲಿ ಸಾವಿಗೀಡಾಗುತ್ತಿರುವವರ ಸಂಖ್ಯೆ ಕಡಿಮೆ ಮಾಡಲು ಸಾರಿಗೆ ಇಲಾಖೆ ಜಾಗೃತಿ ಮೂಡಿಸಲು ಮುಂದಾಗಿದೆ ಎಂದು ತಿಳಿಸಿದರು.

ಸಂಚಾರ ನಿಯಮ ಪಾಲಿಸಿ: ರಸ್ತೆ ಅಪಘಾತದಲ್ಲಿ ಸಾವಿಗೀಡಾಗುತ್ತಿರುವವರ ವಯಸ್ಸನ್ನು ಪರಿಶೀಲಿಸಿದಾಗ 20ರಿಂದ 40 ವರ್ಷದವರೇ ಹೆಚ್ಚಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಚಾರ ನಿಯಮ ಪಾಲಿಸುವಂತೆ ವಿದ್ಯಾರ್ಥಿಗಳು ■6ನೇ ಪುಟಕ್ಕೆ

ಸಹಾಯಕ್ಕಾಗಿ ಡೆಸ್ಕ್

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಬರದಿದ್ದರೆ ಜನರಿಗೆ ಸಹಾಯ ಮಾಡಲು ಡೆಸ್ಕ್ ತೆರೆಯಲಾಗಿದೆ. ಅಲ್ಲದೆ, ಪ್ರತಿದಿನ ಮಧ್ಯಾಹ್ನ 3 ಗಂಟೆಯಿಂದ ಸಂಜೆ 4.30ರವರೆಗೆ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ವಿವರಿಸಬಹುದು. ಏಕಗವಾಕ್ಷಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಹಿರಿಯ ನಾಗರಿಕರು, ಮಹಿಳೆಯರು, ವಿಕಲಚೇತನರಿಗೆ ನೆರವು ನೀಡಲಾಗುತ್ತದೆ ಎಂದು ತಿಳಿಸಿದರು.

ಸೆನ್ಸಾರ್‌ಬೇಸ್ಡ್ ಚಾಲನಾ ಪರೀಕ್ಷಾ ಟ್ರ್ಯಾಕ್

ಇತ್ತೀಚೆಗಿನ ಅಪಘಾತ ಪ್ರಕರಣಗಳನ್ನು ಗಮನಿಸಿದಾಗ ಚಾಲನೆಯಲ್ಲಿ ಕೌಶಲ್ಯ ಇಲ್ಲದ ಹಾಗೂ ಅಜಾಗರೂಕ ಚಾಲನೆಯಿಂದ ಅಪಘಾತವಾಗಿರುವ ಅಂಶ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಅಪಘಾತ ಕಡಿಮೆ ಮಾಡುವ ನಿಟ್ಟಿನಲ್ಲಿ ಚಾಲನಾ ಪ್ರಮಾಣ ಪತ್ರ ನೀಡಲು ಸೆನ್ಸಾರ್‌ಬೇಸ್ಡ್ ಆಟೋ ಮ್ಯಾಟಿಕ್ ಡ್ರೈವಿಂಗ್ ಟ್ರ್ಯಾಕ್‌ನಲ್ಲಿ ಡ್ರೈವಿಂಗ್ ಟೆಸ್ಟ್ ನಡೆಸಲಾಗುತ್ತಿದೆ. ಇದರಲ್ಲಿ ಮಾನವನ ಹಸ್ತಕ್ಷೇಪ ಇರುವುದಿಲ್ಲ. ಚಾಲಕರು ಚಾಲನೆಯಲ್ಲಿ ಕೌಶಲ್ಯ ಹೊಂದಿದ್ದರೆ ಮಾತ್ರ ಚಾಲನ ಪರವಾನಗಿ ಸಿಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಅಪಘಾತ ನಿಯಂತ್ರಿಸಬಹುದಾಗಿದೆ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ಸಂಸಾರಿ ಸನ್ಯಾಸಿಯಾಗಲು ಬಯಸುತ್ತಾನೆ.
ಸನ್ಯಾಸಿ ಸಂಸಾರಿಯಾಗಲು ಬಯಸುತ್ತಾರೆ. ಗೊತ್ತಾ?
ಸಂತ : ಕಾರಣ?
ಬಸ್ಯಾ : ಮೊದಲನೆಯದು 'ಭಯಕ್ಕೆ', ಎರಡನೆಯದು 'ಬಯಕೆ'.

ಮೈಸೂರು ಮಿತ್ರ

ಬುಧವಾರ, ಜನವರಿ 14, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ತನ್ನೆಡೆಗೆ ಎಸೆಯುವ ಕಲ್ಲುಗಳಿಂದಲೇ ಭವಿಷ್ಯಕ್ಕೆ ಬುನಾದಿ ಹಾಕಿಕೊಳ್ಳುವವನು ನಿಜವಾದ ಯಶಸ್ವಿ ವ್ಯಕ್ತಿ. –ಡೆವಿಡ್ ಬ್ರಿಂಕ್ಲೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ

ನಿಮ್ಮ ಪತ್ರಗಳು

ಮೈಸೂರಿನ ಹೆಮ್ಮೆ ನಮ್ಮ ರಂಗಾಯಣ



ಮಾನ್ಯರೆ,

ರಂಗಾಯಣದಲ್ಲಿ ಪ್ರತೀ ವರ್ಷವೂ ವಿವಿಧ ಥೀಮ್‌ಗಳಲ್ಲಿ ರಾಷ್ಟ್ರೀಯ ನಾಟಕೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ವರ್ಷ ಬಹುರೂಪಿ ಬಾಬಾ ಸಾಹೇಬ್ ಸಮತೆಯಡೆಗೆ ನಡಿಗೆ ಬೆಳ್ಳಿಹಬ್ಬ–25 ಎಂಬ ಉತ್ತಮ ಥೀಮ್ ಅಡಿ ಕಾರ್ಯಕ್ರಮ ನಡೆಯುತ್ತಿದೆ. ಕಲಾವಿದ ಅಲ್ಲದಿದ್ದರೂ ಅಭಿರುಚಿ ಇರುವುದರಿಂದ ಸುಮಾರು ಇಪ್ಪತ್ತೈದು ವರ್ಷಗಳಿಂದ ರಂಗಾಯಣದ ಒಡನಾಟವಿದೆ. ನನ್ನ ಜೊತೆ ಸ್ನೇಹಿತರೂ ಆಗಾಗ್ಗೆ ಇಲ್ಲಿಗೆ ಬರುತ್ತಿರುತ್ತಾರೆ. ಕಾರ್ಯಕ್ರಮಗಳು ಇಲ್ಲದಿದ್ದರೂ ಅಲ್ಲಿನ ಪರಿಸರಕ್ಕೆ ಮನಸೋತು ನಾವುಗಳು ಸೇರಿ ಸಮಯ ಕಳೆಯುತ್ತೇವೆ. ಅದ್ಭುತವಾದ ನಟರು ಹಾಗೂ ಕಲಿಯುತ್ತಿರುವ ವಿದ್ಯಾರ್ಥಿಗಳು ಬಹಳಷ್ಟು ಮಂದಿ ಇದ್ದಾರೆ. ರಂಗಾಯಣದ ಪ್ರಾರಂಭದಿಂದ ಇಲ್ಲಿಯವರೆಗೆ ಇಲ್ಲೊಂದು ಉತ್ತಮವಾದ ಕ್ಯಾಂಟೀನ್ ಪ್ರಾರಂಭಿಸಲಾಗಿಲ್ಲ. ಸುಸಜ್ಜಿತವಾದ ಕಟ್ಟಡ ಇದ್ದರೂ ಅಲ್ಲಿನ ಸಿಬ್ಬಂದಿಗಳು ಹಾಗೂ ಬರುವ ರಂಗಾಸಕ್ತರಿಗೆ ಆವರಣದಲ್ಲಿ ಉಪಹಾರಕ್ಕೆ, ಕನಿಷ್ಟ ಕಾಫಿಗೆ ದೂರದ ಹೊಟೇಲ್‌ಗಳನ್ನು ಆಶ್ರಯಿಸಬೇಕಾಗಿದೆ. ಇರುವ ಕ್ಯಾಂಟೀನ್‌ನಲ್ಲಿ ಕೊಳಕಾಗಿರುವ ಹಳೆಯ ಕುರ್ಚಿಟೇಬಲ್‌ಗಳು, ಸ್ವಚ್ಛಗೊಳಿಸದ ನೆಲ, ಕಾಫಿ/ಟೀ ಕೇಳಿದರೆ ಇಲ್ಲ, ಯಾವಾಗಲೂ ಮುಚ್ಚಿರುತ್ತದೆ. ಒಂದು ಉತ್ತಮ ದರ್ಜೆಯ ಕ್ಯಾಂಟೀನ್ ತೆರೆಯುವ ಎಲ್ಲಾ ಪೂರಕ ವಾತಾವರಣ ಇದ್ದರೂ ಯಾರೂ ಮನಸ್ಸು ಮಾಡದಿರುವುದು ದುರದೃಷ್ಟಕರ. ಬಸ್ ಸೌಲಭ್ಯವಂತೂ ಇಲ್ಲವೇ ಇಲ್ಲ, ಬೈಕು, ಕಾರು ಇದ್ದವರು ಮಾತ್ರ ಬಂದು ಹೋಗುವಂತಾಗಿದೆ. ಜನರ ಮನಸ್ಸನ್ನು ಕಲೆಯ ಮಾತ್ರದಿಂದಲೇ ಸೆಳೆಯಲಾಗದು, ಬಂದವರಿಗೆ ಸೌಲಭ್ಯಗಳೊಂದಿಗೆ ರುಚಿ–ಶುಚಿಯಾದ ಆಹಾರವೂ ಬೇಕಾಗುತ್ತದೆ. ದಯಮಾಡಿ ಮನಸ್ಸು ಮಾಡಿ, ಕ್ರಮವಹಿಸಿ, ಅಲ್ಲಿನ ಕಲಾವಿದರಿಗಾದರೂ ಮನಸ್ಸಿಗೆ ಮುದನೀಡುವ ಹಾಗೆ ಒಂದೊಳ್ಳೆ ಕಾಫಿ/ಟೀ, ಸ್ನ್ಯಾಕ್ಸ್ ಸಿಗುವಂತಾಗಲಿ.

–ಮಿರ್ಲೇಚಂದ್ರಶೇಖರ, ಲೇಖಕರು, ಮೈಸೂರು

ಪ್ರಾಮಾಣಿಕತೆಗೆ ಮಾದರಿಯಾದ ಕುಟುಂಬ

ಮಾನ್ಯರೇ

ಈ ಆಧುನಿಕ ಜೀವನ ವ್ಯವಸ್ಥೆಯಲ್ಲಿ ಕೆಲವರ ಮನಸ್ಥಿತಿಯಂತೂ, ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕೆಂಬ ಜಿದ್ದಿಗೆ ಬಿದ್ದಿದ್ದಾರೆ. ಇದಕ್ಕಾಗಿ ಕೆಲವರು ಸುಳ್ಳು, ಮೋಸ, ವಂಚನೆ, ಕೊಲೆ ಸುಲಿಗೆ, ಅಣ್ಣ–ತಮ್ಮಂದಿರಿಗೆ ಮೋಸ ಮಾಡಿ ಹೀಗೆ ಅಡ್ಡ ದಾರಿ ಹಿಡಿಯುವವರು ಜಗತ್ತಿನಲ್ಲಿ ಕೆಲವರು ಸಿಕ್ಕೆ ಸಿಕ್ಕುತ್ತಾರೆ. ಕೆಲವನ್ನು ಮಾಧ್ಯಮದ ಮೂಲಕ ನೋಡಿದರೆ, ಮತ್ತೆ ಕೆಲವು ಅನುಭವದಲ್ಲಿ ಅನುಭವಿಸಿದ್ದವರು ಉಂಟು. ನಿಧಿಗಾಗಿ ವಾಮಾಚಾರ ಮಾಡಿಸುವುದನ್ನು ಪತ್ರಿಕೆಗಳಲ್ಲೂ ನೋಡಿದ್ದೇವೆ. ಇಂಥ ಕೆಲವು ಮೌಢ್ಯವನ್ನು ಆಚರಿಸುವವರು ಇರುವಾಗ ಗದಗ ತಾಲೂಕಿನ ಕಲ್ಕುಂಡಿ ಗ್ರಾಮದ ಮನೆಯೊಂದರ ಅಡಿಪಾಯ ತೆಗೆಯುವ ವೇಳೆಯಲ್ಲಿ ಸಿಕ್ಕ ನಿಧಿಯನ್ನು ಸರ್ಕಾರಕ್ಕೆ ಒಪ್ಪಿಸಿ ಪ್ರಾಮಾಣಿಕತೆಯನ್ನು ಮೆರೆದು ಪ್ರಾಮಾಣಿಕತೆ ಹೆಸರಿಗೆ ಮಾದರಿಯಾಗಿದ್ದಾರೆ. **–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು**

ಸಂಕ್ರಾಂತಿ ಸಂವತ್ಸರ

ಮಾನ್ಯರೆ,

ದೇಶದಾದ್ಯಂತ ಕೊಟ್ಯಾಂತರ ಸಂಖ್ಯೆಯ ಜನರು ಆಚರಿಸುವ ಮಕರ ಸಂಕ್ರಾಂತಿ ಹಬ್ಬ ಬಂತು ಎಂದರೆ ಸಾಕು ನಮ್ಮ ಸುತ್ತಮುತ್ತಲಿನ ಪರಿಸರವನ್ನು ನೋಡುವುದೇ ಒಂದು ಆನಂದದಾಯಕ ವಿಚಾರವಾಗಿರುತ್ತದೆ. ಪ್ರತಿಯೊಂದು ಜಾತಿಯ ಗಿಡಮರಗಳು ಪುನರ್ಜನ್ಮ ಪಡೆದು ಚಿಗುರೊಡೆದಿರುತ್ತವೆ. ಹೀಗೆ ಚಿಗುರೊಡೆದ ಗಿಡಮರಗಳು ವಿವಿಧ ರೀತಿಯ ಪಕ್ಷಿಗಳಿಗೂ ಆಶ್ರಯ ನೀಡಿರುತ್ತವೆ. ಜೊತೆಗೆ ಪರಿಶುದ್ಧವಾದ ಗಾಳಿಯನ್ನು ಸೂಸುವುದರ ಮೂಲಕ ತನ್ನ ಸುತ್ತಮುತ್ತಲಿನ ವಾತಾವರಣವನ್ನು ಶುದ್ಧವಾಗಿ ಕಾಪಾಡಿಕೊಳ್ಳುತ್ತದೆ. ಅದೇ ರೀತಿ ಪ್ರತಿಯೊಬ್ಬರ ಮನಸ್ಸಿನಲ್ಲೂ ಒಂದಲ್ಲ ಒಂದು ರೀತಿಯ ಹೊಸ – ಹೊಸ ಆಲೋಚನೆಗಳು ಚಿಗುರೊಡೆದು, ಅದನ್ನು ಕಾರ್ಯರೂಪಕ್ಕೆ ತಂದು, ಅದರಿಂದ ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಶುಚಿಗೊಳಿಸುವ ಮುಖಾಂತರ ಒಂದು ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡುವ ಹಾದಿಯಲ್ಲಿ ಯುವ ಪೀಳಿಗೆ ಸಾಗಬೇಕಾಗಿದೆ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ಡಿಜಿಟಲ್ ಸ್ವಾಯತ್ತತೆ: ಭದ್ರತೆಯ ಸವಾಲುಗಳು

ಮಾನ್ಯರೆ,

ಇತ್ತೀಚಿನ ತಾಂತ್ರಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಸ್ಮಾರ್ಟ್‌ಫೋನ್ ಕಂಪನಿಗಳಿಂದ 'ಸೋರ್ಸ್ ಕೋಡ್' ಕೇಳಿಲ್ಲವೆಂದು ಸ್ಪಷ್ಟಪಡಿಸಿರುವುದು ಸಮಂಜಸವಾಗಿದೆ. ಆದರೆ, ರಾಷ್ಟ್ರೀಯ ಭದ್ರತೆ ಮತ್ತು ಬಳಕೆದಾರರ ದತ್ತಾಂಶ ಗೌಪ್ಯತೆಯ ವಿಷಯದಲ್ಲಿ ರಾಜೀ ಮಾಡಿಕೊಳ್ಳಲಾಗದು. ಸರ್ಕಾರವು ಕೇವಲ ಕೋಡ್ ಹಂಚಿಕೆಯ ಮೇಲೆ ಗಮನಹರಿಸುವ ಬದಲು, ಸಾಧನಗಳಲ್ಲಿ ಮೊದಲೇ ಅಳವಡಿಸಲಾದ ಅನಗತ್ಯ ಆಪ್‌ಗಳನ್ನು ತೆಗೆದುಹಾಕುವ ಹಕ್ಕನ್ನು ಗ್ರಾಹಕರಿಗೆ ನೀಡಬೇಕು. ಇದು ಡಿಜಿಟಲ್ ಸ್ವಾಯತ್ತತೆಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ. ತಾಂತ್ರಿಕವಾಗಿ ಕಂಪನಿಗಳ ಬೌದ್ಧಿಕ ಆಸ್ತಿ ಹಕ್ಕನ್ನು ಗೌರವಿಸುತ್ತಲೇ, ಸಾಫ್ಟ್‌ವೇರ್ ಅಪ್‌ಡೇಟ್‌ಗಳ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರಿ ಮಾನ್ಯತೆ ಪಡೆದ ಸ್ವತಂತ್ರ ತಾಂತ್ರಿಕ ಆಡಿಟಿಂಗ್ ಸಂಸ್ಥೆಗಳನ್ನು ನೇಮಿಸುವುದು ಉತ್ತಮ ಪರ್ಯಾಯ ಮಾರ್ಗವಾಗಿದೆ. ತಂತ್ರಜ್ಞಾನ ಜಗತ್ತಿನಲ್ಲಿ 'ನಂಬಿಕೆ' ಎಂಬುದು ಅತ್ಯಂತ ದೊಡ್ಡ ಬಂಡವಾಳ. ವಿದೇಶಿ ಸಾಫ್ಟ್‌ವೇರ್‌ಗಳ ಮೇಲಿನ ಅತಿಯಾದ ಅವಲಂಬನೆಯು ದೀರ್ಘಕಾಲದ ಭದ್ರತಾ ಅಪಾಯಗಳನ್ನು ತಂದೊಡ್ಡಬಹುದು. ಆದ್ದರಿಂದ, ದೇಶೀಯ ಆಪರೇಟಿಂಗ್ ಸಿಸ್ಟಮ್‌ಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದು ಇಂದಿನ ತುರ್ತು ಅಗತ್ಯವಾಗಿದೆ. ಕಠಿಣ ಭದ್ರತಾ ಮಾನದಂಡಗಳು ನಾವಿನ್ಯತೆಗೆ ಅಡ್ಡಿಯಾಗದಂತೆ, ಬಳಕೆದಾರರ ಹಿತಾಸಕ್ತಿಯನ್ನು ಕಾಯುವ ಸಮತೋಲಿತ ನೀತಿಗಳು ಇಂದಿನ ಆವಶ್ಯಕತೆಯಾಗಿದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಾರತದ ಪವಿತ್ರ ಸಪ್ತ ನಗರಗಳು

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಞ್ಚೀ ಹ್ಯವಂತಿಕಾ।
ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ॥

ಅಯೋಧ್ಯೆ, ಮಥುರಾ, ಮಾಯಾ, ಕಾಶಿ, ಕಾಂಚಿ, ಅವಂತಿಕೆ (ಉಜ್ಜಯಿನಿ) ಮತ್ತು ದ್ವಾರಕೆ–ಇವು ಮಾನವರಿಗೆ ಮೋಕ್ಷವನ್ನು ನೀಡುವ ಏಳು ನಗರಗಳು. ಹಿಂದೂಗಳಿಗೆ ಈ ಏಳು ಪವಿತ್ರವಾದ ಸ್ಥಳಗಳು. ಜೀವನದಲ್ಲಿ ಒಮ್ಮೆಯಾದರೂ ನೋಡಿ ಬರಬೇಕಾದ ಪಟ್ಟಣಗಳು.

ಅವುಗಳಲ್ಲಿ **ಅಯೋಧ್ಯೆ** ಮೊದಲನೆಯದು. ಇದು ಉಪನಿಷತ್ತುಗಳಲ್ಲೇ ಕೀರ್ತಿತವಾದ ಪ್ರದೇಶ. ದೇವಾನಾಂಪೂರಯೋಧ್ಯಾ. ಯಾರೂ ಯುದ್ಧ ಮಾಡಿ ಗೆಲ್ಲಲು ಆಗದ ನಗರ ಎಂಬ ನಂಬಿಕೆಯನ್ನು ಅದರ ಹೆಸರೇ ಸೂಚಿಸುತ್ತದೆ. ನಮ್ಮ ದೇಶದ ಅತ್ಯಂತ ಪ್ರಾಚೀನ ನಗರಗಳಲ್ಲಿ ಇದೂ ಒಂದು. ಶ್ರೀರಾಮನ ಕಾಲಕ್ಕಿಂತ ಹಿಂದೆಯೇ ಇಕ್ಷ್ವಾಕುವಂಶದ ಅರಸರ ರಾಜಧಾನಿಯಾಗಿತ್ತು. ಆದಿ ಕಾವ್ಯ ವಾಲ್ಮೀಕಿ ರಾಮಾಯಣದಲ್ಲಿ ಅಯೋಧ್ಯೆಯ ವರ್ಣನೆಯಿದೆ.




ಕೋಶಲೋ ನಾಮ ಮುದಿತಃ ಸ್ಫೀತೋ ಜನಪದೋ ಮಹಾನ್।
ನಿವಿಷ್ಟಃ ಸರಯೂತೀರೇ ಪ್ರಭೂತಧನಧಾನ್ಯವಾನ್ ॥
ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕ ವಿಶ್ರುತಾ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥
ಆಯತಾ ದ ಶ ಚ ದ್ವೇ ಚ ಯೋಜನಾನಿ ಮಹಾಪುರೀ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತ ಮಹಾಪಥಾ॥
ರಾಜಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾ।
ಮುಕ್ತ ಪುಷ್ಪಾವಕೀರ್ಣೇನ ಜಲಸಿಕ್ತೇನ ನಿತ್ಯಶಃ॥

(ಸರಯೂ ನದಿಯ ತೀರದಲ್ಲಿ ಸಂತೋಷಭರಿತವಾದ, ಸಮೃದ್ಧವಾದ, ಧನ–ಧಾನ್ಯಗಳಿಂದ ತುಂಬಿದ ಕೋಸಲವೆಂಬ ನಾಡು ಇದೆ. ಅದರಲ್ಲಿ ಪ್ರಪಂಚ ಪ್ರಸಿದ್ಧವಾದ ಅಯೋಧ್ಯೆ ಎಂಬ ನಗರವಿದೆ. ಮನುಷ್ಯರ ಒಡೆಯನಾಗಿದ್ದ ಮನು ಆ ನಗರವನ್ನು ತಾನೇ ನಿರ್ಮಿಸಿದ್ದನು. ಆ ನಗರದ ಉದ್ದ ಹನ್ನೆರಡು ಯೋಜನಗಳು. ಅಗಲ ಮೂರು ಯೋಜನಗಳು. ಅದರ ಬೀದಿಗಳು ವಿಶಾಲವಾಗಿದ್ದವು. ರಾಜಮಾರ್ಗವು ದೊಡ್ಡದಾಗಿದ್ದು, ನಗರಕ್ಕೆ ಶೋಭೆಯನ್ನು ತರುವಂತಿತ್ತು. ಅದನ್ನು ನಿತ್ಯವೂ ನೀರಿನಿಂದ ತೊಳೆದು ಅದರ ಮೇಲೆ ಹೂವುಗಳನ್ನು ಎರಚುತ್ತಿದ್ದರು.)

ಈ ಅಯೋಧ್ಯೆಯಲ್ಲಿ ವಿಷ್ಣುವಿನ ಏಳನೆಯ ಅವತಾರವೆನಿಸಿದ್ದ ಶ್ರೀರಾಮನು ಹುಟ್ಟಿದ ಕಾರಣ ಅದರ ಪವಿತ್ರತೆ ನೂರ್ಮಡಿ ಹೆಚ್ಚಾಯಿತು. ಅದು ಭಾರತೀಯರಿಗೆ ಪಾವನ ಕ್ಷೇತ್ರವಾಯಿತು.

ಮಥುರಾ: ಎರಡನೆಯ ನಗರ ಮಧುರಾ ಅಥವಾ ಮಥುರಾ. ಯಮುನಾ ನದಿಯ ದಡದಲ್ಲಿ ನಿರ್ಮಿತವಾದ, ಯದುವಂಶದ ರಾಜರಿಗೆ ರಾಜಧಾನಿಯಾಗಿದ್ದ ನಗರ. ವಿಷ್ಣುವಿನ ಎಂಟನೆಯ ಅವತಾರವೆನಿಸಿದ ಕೃಷ್ಣನು ಹುಟ್ಟಿದ ಪವಿತ್ರ ಸ್ಥಳ. ಅಲ್ಲಿಯೇ ಮುಂದೆ ಕೃಷ್ಣನು ಕಂಸನನ್ನು ಕೊಲ್ಲುವುದು. ಜಯದೇವನೆಂಬ ಸಂಸ್ಕೃತ ಕವಿ ಗೀತ ಗೋವಿಂದವೆಂಬ ಪ್ರಬಂಧವನ್ನು ಬರೆದು ಯಮುನಾ ತೀರದಲ್ಲಿ ರಾಧಾ–ಕೃಷ್ಣರ ಲೀಲೆಗಳನ್ನು ವರ್ಣಿಸಿದ್ದಾನೆ.



ಇಲ್ಲಿದ್ದ ಪ್ರಾಚೀನ ಕೃಷ್ಣ ದೇವಾಲಯವನ್ನು ವಿಧರ್ಮಿಯರು ನಾಶ ಮಾಡಿದ್ದರು. ಪ್ರಾತಃ ಸ್ಮರಣೀಯಳಾದ ಅಹಲ್ಯಾಬಾಯಿ ಹೋಳ್ಕರ್ ಅದರ ಸಮೀಪದಲ್ಲಿ ಕಟ್ಟಿಸಿದ ದೇವಾಲಯದಲ್ಲಿ ಈಗ ಕೃಷ್ಣನು ವಿರಾಜಮಾನನಾಗಿದ್ದಾನೆ. ಕೃಷ್ಣನ ಸಾನ್ನಿಧ್ಯದಿಂದ ಈ ನಗರವೂ ಮೋಕ್ಷದಾಯಕವಾಗಿದೆ. ಮಥುರೆಯ ಸುತ್ತಮುತ್ತಲೂ ಇರುವ ಪ್ರದೇಶ ವ್ರಜಭೂಮಿ. ಕೃಷ್ಣ ಭಕ್ತರಿಗೆ ಇದೂ ಪ್ರಿಯವಾದ ಜಾಗ. ಮಧುರೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ವೈಭವದಿಂದ ಆಚರಿಸುತ್ತಾರೆ. ಕೇಶವ, ತ್ರಿವಿಕ್ರಮ, ವಿಜಯ ಗೋವಿಂದ ಮುಂತಾದ ಕೃಷ್ಣನ ನಾನಾ ರೂಪಗಳ ದೇವಾಲಯಗಳೂ ಇಲ್ಲಿವೆ. ಮಧುರೆಗೆ ಅನತಿ ದೂರದಲ್ಲಿ ಕೃಷ್ಣನಿಗೆ ಗೋವರ್ಧನಗಿರಿಧಾರಿಯೆಂಬ ಕೀರ್ತಿಯನ್ನು ತಂದ ಗೋವರ್ಧನ ಎಂಬ ಪರ್ವತವೂ ಇದೆ. ಮಧುರೆಗೆ ಏಳು ಮೈಲಿ ದೂರದಲ್ಲಿರುವ ಪ್ರದೇಶ ವೃಂದಾವನ.

ಮಧುರಾನಗರವನ್ನು ತ್ರೇತಾಯುಗದಲ್ಲಿ ಶ್ರೀರಾಮನ ತಮ್ಮ ಶತ್ರುಘ್ನನು ನಿರ್ಮಿಸಿದ್ದನಂತೆ. ಕ್ರಿಸ್ತಶಕ ಐದನೆಯ ಶತಮಾನದಲ್ಲಿ ಇಲ್ಲಿ ಅನೇಕ ಬೌದ್ಧವಿಹಾರಗಳಿದ್ದುವೆಂದು ಚೀನಿ ಯಾತ್ರಿಕ ಫಾಹಿಯಾನ್ ಹೇಳಿದ್ದಾನೆ.

ಮಾಯಾ (ಮಾಯಾಪುರೀ) ಗಂಗೆಯ ದಡದಲ್ಲಿರುವ ಪವಿತ್ರ ಹರಿದ್ವಾರವನ್ನೇ ಪುರಾಣಗಳಲ್ಲಿ ಮಾಯಾಪುರಿಯೆಂದು ಕರೆದಿದ್ದಾರೆ. ಇದು ಈಗ ಉತ್ತರಾಂಚಲದಲ್ಲಿದೆ. ಗಂಗೆಯ ತೀರದಲ್ಲಿರುವ ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಬದರೀನಾಥಕ್ಕೂ ಕೇದಾರ ನಾಥಕ್ಕೂ ಹೋಗಲು ಇದು ದ್ವಾರದಂತೆ (ಬಾಗಿಲಿನಂತೆ) ಇದ್ದು ಹರಿದ್ವಾರವೆನಿಸಿದೆ. ದಕ್ಷಯಜ್ಞದಲ್ಲಿ ಶಿವನ ಪತ್ನಿ ಸತಿಯು ದೇಹತ್ಯಾಗವನ್ನು ಮಾಡಿದ ಸ್ಥಳ ಹರಿದ್ವಾರವೆನ್ನಲಾಗಿದೆ. ಇದು ಕಪಿಲ, ಭಾರದ್ವಾಜ ಮುಂತಾದ ಮಹರ್ಷಿಗಳ ತಪೋಭೂಮಿ. ಗಂಗಾನದಿಯ ಮೇಲೆ ಇಲ್ಲಿ ನಡೆಯುವ ದೀಪಾರತಿ ನಯನಾಕರ್ಷಕ. ಬೃಹಸ್ಪತಿ (ಗುರು) ಗ್ರಹವು ಮೇಷರಾಶಿಯನ್ನು ಪ್ರವೇಶಿಸುವಾಗ ಇಲ್ಲಿ ಕುಂಭಮೇಳ ನಡೆಯುವುದು.



ಕಾಶೀ ಗಂಗಾ ತೀರದಲ್ಲಿರುವ ಅತಿ ಪ್ರಾಚೀನ ಮತ್ತು ಪವಿತ್ರತಮ ಸ್ಥಳ ಕಾಶೀ ಅಥವಾ ವಾರಾಣಾಸೀ. ಕಾಶೀ ಎಂದರೆ ಅಧ್ಯಾತ್ಮಶಕ್ತಿಯಿಂದ ಪ್ರಕಾಶಿಸುವ ನಗರ. ಇಲ್ಲಿ ಗಂಗಾಸ್ನಾನ ಮಾಡುವುದು ಪ್ರತಿಯೊಬ್ಬ ಹಿಂದುವಿನ ಹಂಬಲ. ಎಷ್ಟೋ ಸಾವಿರ ವರ್ಷಗಳಿಂದ ಇಲ್ಲಿರುವ ವಿಶ್ವನಾಥ ಲಿಂಗಕ್ಕೆ ಕೋಟ್ಯಾಂತರ ಜನರು ಪೂಜೆಯನ್ನು ಸಲ್ಲಿಸಿದ್ದಾರೆ. ಪುರಾಣಗಳಲ್ಲಿ ಇದರ ಮಹಿಮೆಯನ್ನು ವರ್ಣಿಸಲಾಗಿದೆ. ಇಲ್ಲಿ ಮರಣ ಹೊಂದುವ ಜನರ ಕಿವಿಯಲ್ಲಿ ಶಿವನು ರಾಮತಾರಕ ಮಂತ್ರವನ್ನು ಉಪದೇಶಿಸಿ ಮೋಕ್ಷವನ್ನು ಕರುಣಿಸುವನೆಂದು ಪ್ರತೀತಿ. ವೇದ ಸಾಹಿತ್ಯದಲ್ಲೂ ಕಾಶಿಯ ಹೆಸರು ಕಂಡು ಬರುವುದರಿಂದ ಇದರ ಪ್ರಾಚೀನತೆ ಪ್ರಶ್ನಾತೀತ. ಬೌದ್ಧ ಜಾತಕ ಕಥೆಗಳಲ್ಲೂ ಕಾಶೀ ಪಟ್ಟಣದ ಹೆಸರಿದೆ. ಆನಂದಕಾನನ, ಅವಿಮುಕ್ತ ಕ್ಷೇತ್ರ ಎಂಬವೂ ಕಾಶಿಯ ಹೆಸರುಗಳು.




ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನನ್ನು ಮಾರಿಕೊಂಡು ಸ್ಮಶಾನದಲ್ಲಿ ಆಳಾಗಿ ದುಡಿದು ತನ್ನ ಸತ್ಯನಿಷ್ಠೆಯಿಂದ ಶಿವಸಾಕ್ಷಾತ್ಕಾರವನ್ನು ಪಡೆದು ಮತ್ತೆ ಮಹಾರಾಜನಾದದ್ದು ಕಾಶಿಯಲ್ಲಿ. ಭಾರತ ದೇಶದ ಸಂಸ್ಕೃತಿಯ ಆಧಾರವಾದ ಶಾಸ್ತ್ರ ವಿದ್ಯೆ ಬೆಳೆದಿರುವುದು, ಉಳಿದಿರುವುದು ಈ ನಗರದಲ್ಲೆಂದು ಹೇಳಬಹುದು. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಶ್ರೀಶಂಕರಾಚಾರ್ಯರು ಇಲ್ಲಿ ಭಾಷ್ಯಗಳ ರಚನೆಯನ್ನು ಮಾಡಿದರೆಂದು ಹೇಳಲಾಗಿದೆ.

ಕಞ್ಚೀ ಕಾಂಚೀಪುರ, ಕಾಂಜೀವರ ಎಂದು ಕರೆಯಲ್ಪಡುವ ಈ ಪವಿತ್ರಸ್ಥಳ ತಮಿಳುನಾಡಿನಲ್ಲಿ ಚೆನ್ನೈ (ಮದ್ರಾಸ್) ಮಹಾನಗರಕ್ಕೆ ನಲವತ್ತಾರು ಮೈಲು ದೂರದಲ್ಲಿದೆ. ಇದು ದಕ್ಷಿಣ ಭಾರತದ ಅಧ್ಯಾತ್ಮ ಕೇಂದ್ರಗಳಲ್ಲೊಂದು. ಇದರಲ್ಲಿ ವಿಷ್ಣು ಕಾಂಚೀ, ಶಿವ ಕಾಂಚೀ ಎಂಬ ಎರಡು ಭಾಗಗಳಿವೆ. ವಿಷ್ಣು ಕಾಂಚಿಯಲ್ಲಿ ಹಸ್ತಿಗಿರಿಯ ಮೇಲೆ ವರದರಾಜ ಸ್ವಾಮಿಯ ಭವ್ಯ ದೇವಾಲಯವಿದೆ. ಶಿವ ಕಾಂಚಿಯಲ್ಲಿ ಏಕಾಮ್ರೇಶ್ವರ (ಅಥವಾ ಏಕಾಂಬರೇಶ್ವರ) ದೇವಸ್ಥಾನವೂ ಕಾಮಾಕ್ಷೀ ದೇವಾಲಯವೂ ಇವೆ. ಏಕಾಂಬರೇಶ್ವರನ ದೇವಾಲಯದ ಶಿಖರ 188 ಅಡಿ ಎತ್ತರವಾಗಿದ್ದು ಭಕ್ತರನ್ನು ಆಕರ್ಷಿಸುತ್ತದೆ. ಈ ದೇವಾಲಯದಲ್ಲಿ ಅರವತ್ತ ಮೂರು ನಾಯನ್ಮಾರ್ (ಶಿವಭಕ್ತ)ಗಳ ವಿಗ್ರಹಗಳಿವೆ. ಶ್ರೀರಾಮಾನುಜಾಚಾರ್ಯರು, ವೇದಾಂತ ದೇಶಿಕರು, ಅಪ್ಪಯ್ಯ ದೀಕ್ಷಿತರು ಕಾಂಚಿಗೆ ಭೇಟಿ ಕೊಟ್ಟಿದ್ದರು. ಪಲ್ಲವರ ರಾಜಧಾನಿಯಾಗಿದ್ದ ಕಾಂಚಿಯಲ್ಲಿ ಪ್ರಸಿದ್ಧ ಸಂಸ್ಕೃತ ಕವಿ ದಂಡಿಯೂ ಇದ್ದನು. ಕಾಂಚಿಯಲ್ಲಿ ಶ್ರೀ ಶಂಕರಾಚಾರ್ಯರ ಮಠವೂ ಇದೆ.



ಅವಂತಿಕಾ: ಅವಂತಿಕಾ ಎಂಬುದು ಉಜ್ಜಯಿನೀ ಎಂದು ಪ್ರಸಿದ್ಧವಾಗಿರುವ ನಗರ. ಉಜ್ಜಯಿನೀ ಎಂದರೆ ಎಲ್ಲರನ್ನೂ ಸೌಂದರ್ಯದಿಂದ ಗೆಲ್ಲುವ ನಗರ ಎಂದು ಅರ್ಥ. ಇದು ಸಿಪ್ರಾ (ಕ್ಷಿಪ್ರಾ) ಎಂಬ ನದಿಯ ದಡದಲ್ಲಿದೆ. ಉಜ್ಜಯಿನಿಯ ಮೇಲೆ ಮಹಾಕವಿ ಕಾಳಿದಾಸನಿಗೆ ಅತ್ಯಧಿಕ ಪ್ರೀತಿ, ಅಭಿಮಾನ. ಅಲ್ಲೇ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಕಾಳಿದಾಸನು ನವರತ್ನಗಳಲ್ಲಿ ಒಬ್ಬನಾಗಿದ್ದನೆಂದು ಕೆಲವರ ಅಭಿಪ್ರಾಯ. ಯಜ್ಞಗಳನ್ನು ಮಾಡಿ ಪುಣ್ಯ ಮಾಡಿ ಸ್ವರ್ಗಕ್ಕೆ ಹೋಗಿ ಹಲವರು ತಮ್ಮ ಪುಣ್ಯಗಳನ್ನು ಕೊಟ್ಟು ಸ್ವರ್ಗದ ಒಂದು ಸುಂದರ ಭಾಗವನ್ನು ಕೊಂಡು ತಂದು ಭೂಮಿಯ ಮೇಲೆ ಇಟ್ಟರು. ಅದೇ ಉಜ್ಜಯಿನಿ ಎನ್ನುತ್ತಾನೆ ಕಾಳಿದಾಸ.



ಉಜ್ಜಯಿನಿಯ ಅಧಿದೇವತೆ ಮಹಾಕಾಲ. ಅವನ ಪೂಜೆ ಅತ್ಯಂತ ಮನೋಹರ, ಭಕ್ತಭರಿತ. ಮೇಘದೂತದಲ್ಲಿ ಯಕ್ಷನು ಮೇಘಕ್ಕೆ ಹೇಳುತ್ತಾನೆ –ನೀನು ಯಾವ ಕಾಲದಲ್ಲಿ ಉಜ್ಜಯಿನಿಯನ್ನು ತಲುಪಿದರೂ ಸಂಜೆ ಸೂರ್ಯನು ಮುಳುಗುವವರೆಗೂ ಕಾದಿದ್ದು ಸಂಜೆ ಪೂಜೆಯ ವೇಳೆಯಲ್ಲಿ ಗುಡುಗಿನ ಶಬ್ದವನ್ನು ಮಾಡಿ ಮಹಾಕಾಲನಿಗೆ ವಾದ್ಯ ಸೇವೆಯನ್ನು ಸಲ್ಲಿಸಬೇಕು–ಎಂದು

ಈ ಮಹಾಕಾಲೇಶ್ವರ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು. ಉಜ್ಜಯಿನಿ ಆದ್ದರಿಂದ ಪವಿತ್ರ ನಗರ.

ದ್ವಾರಕಾ ಗುಜರಾತಿನಲ್ಲಿರುವ ದ್ವಾರಕಾ ಸಪ್ತ ಪವಿತ್ರ ನಗರಗಳಲ್ಲಿ ಏಳನೆಯದು. ಮಧುರಾ ಶ್ರೀ ಕೃಷ್ಣನು ಹುಟ್ಟಿದ ಸ್ಥಳವಾದರೆ ದ್ವಾರಕೆ ಶ್ರೀ ಕೃಷ್ಣನೇ ನಿರ್ಮಿಸಿದ ನಗರ. ಜರಾಸಂಧನು ಮಥುರೆ ಮೇಲೆ ಮತ್ತೆ ಮತ್ತೆ ದಾಳಿ ಮಾಡುತ್ತಿದ್ದನು. ಯುದ್ಧ ಮಾಡಿ ಶ್ರೀ ಕೃಷ್ಣ ಅವನನ್ನು ಹಿಮ್ಮೆಟ್ಟಿಸಿದರೂ ಆ ಯುದ್ಧದಲ್ಲಿ ಅನೇಕರು ಸಾಯುತ್ತಿದ್ದುದನ್ನು ತಪ್ಪಿಸುವುದು ಸಾಧ್ಯವಾಗುತ್ತಿರಲಿಲ್ಲ. ಪ್ರಾಣಹಾನಿಯನ್ನು ತಪ್ಪಿಸಲು ಶ್ರೀ ಕೃಷ್ಣನು ಸಮುದ್ರ ಮಧ್ಯದಲ್ಲಿ ಹೊಸ ಪಟ್ಟಣವನ್ನು ನಿರ್ಮಿಸಿದನು. ಅದೇ ದ್ವಾರಕಾ.



ಕೃಷ್ಣನ ಕಾಲದಿಂದ ಇದ್ದ ನಗರ ಸಮುದ್ರ ಮಧ್ಯದಲ್ಲೇ ಮುಳುಗಿ ಹೋಗಿದೆಯಂತೆ. ಈಗ ಇರುವ ದ್ವಾರಕೆ ಅನಂತರ ಕಾಲದ್ದು. ಆದರೂ ದ್ವಾರಕಾಧೀಶ ಕೃಷ್ಣನ ಸನ್ನಿಧಾನದಿಂದ ಅದು ಪವಿತ್ರತಮ. ಶ್ರೀ ಶಂಕರಾಚಾರ್ಯರ ಪಶ್ಚಿಮಾಮ್ನಾಯ ಪೀಠವೂ ಈ ನಗರದ ಪವಿತ್ರತೆಯನ್ನು ಹೆಚ್ಚಿಸಿದೆ.

ಭಾರತ ದೇಶದಲ್ಲಿ ಅನೇಕ ದಿವ್ಯ ಪ್ರದೇಶಗಳೂ ಭವ್ಯ ತೀರ್ಥ ಸ್ಥಳಗಳೂ ಇವೆ. ಸ್ಥಳ ಪುರಾಣಗಳು ಅವುಗಳ ಮಹತ್ತ್ವವನ್ನು ತಿಳಿಸುತ್ತವೆ. ಮೈಸೂರಿಗೆ ಬೆಟ್ಟದ ಮೇಲೆ ಚಾಮುಂಡೇಶ್ವರಿ, ದಕ್ಷಿಣದಲ್ಲಿ ಶ್ರೀಕಂಠೇಶ್ವರನ ನಂಜನಗೂಡು, ಉತ್ತರದಲ್ಲಿ ಶ್ರೀರಂಗನಾಥ ಸ್ವಾಮಿಯ ಶ್ರೀರಂಗಪಟ್ಟಣ, ಪೂರ್ವದಲ್ಲಿ ತಲಕಾಡು, ಪಶ್ಚಿಮದಲ್ಲಿ ತಲಕಾವೇರಿ ಇತ್ಯಾದಿಗಳಿವೆ. ಆಂಧ್ರದಲ್ಲಿ ವೆಂಕಟೇಶ್ವರನ ಸನ್ನಿಧಿಯಾದ ತಿರುಪತಿ, ಒಡಿಸ್ಸಾದಲ್ಲಿ ಭಗವಾನ್ ಜಗನ್ನಾಥನ ಪುರೀ, ಮಹಾರಾಷ್ಟ್ರದಲ್ಲಿ ಶಿರಡಿ, ಗುಜರಾತಿನಲ್ಲಿ ಸೋಮನಾಥ ಮುಂತಾದ ನೂರಾರು ಭಕ್ತಿ ಕೇಂದ್ರಗಳು ಭಕ್ತರನ್ನು ಕೈಬೀಸಿ ಕರೆಯುತ್ತಿವೆ. ಮೇಲುಕೋಟೆ, ಮಂತ್ರಾಲಯ, ಶೃಂಗೇರಿ, ಉಡುಪಿ, ಚಿದಂಬರಂ, ಮುಂತಾದ ಜ್ಞಾನಕ್ಷೇತ್ರಗಳು ಭಾರತದ ಬೆಳಕನ್ನು ಹರಡುತ್ತಿವೆ. ಸ್ವಮತ ಶ್ರದ್ಧೆ, ಪರಮತ ಸಹಿಷ್ಣುತೆ, ವಿದ್ಯಾಸಕ್ತಿ, ಮಾನವೀಯತೆ ಮುಂತಾದ ಮೌಲ್ಯಗಳನ್ನು ಇವು ಹರಡಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಡಾ.ಶುಶ್ರೂತ್‌ಗೌಡರಿಗೂ ನಮ್ಮ ಜಮೀನಿಗೂ ಸಂಬಂಧವಿಲ್ಲ

ಅವರಿಗೆ ನಮ್ಮ ಜಮೀನಲ್ಲಿ ನರ್ಸಿಂಗ್ ಸಂಸ್ಥೆ ಸ್ಥಾಪಿಸುವ ಉದ್ದೇಶವಿತ್ತು: ಜಮೀನಿನ ಮಾಲೀಕರ ಮಕ್ಕಳು ಸ್ಪಷ್ಟನೆ

ಮೈಸೂರು, ಜ.13(ಜಿಎ)–ಮೈಸೂರು ಜಯಲಕ್ಷ್ಮಿ ಪುರಂನ ಕಾಳಿದಾಸ ರಸ್ತೆಯ ಸರ್ವೆ ನಂಬರ್ 155ರಲ್ಲಿ ಬರುವ 10 ಎಕರೆ ಜಮೀನಿಗೂ ಬಿಜೆಪಿ ಮುಖಂಡ ಡಾ.ಶುಶ್ರೂತ್‌ಗೌಡರಿಗೂ ಯಾವುದೇ ಸಂಬಂಧವಿಲ್ಲ. ಅವರು ನಮಗೆ ಆತ್ಮೀಯರು ಅಷ್ಟೇ. ನಮ್ಮ ಜಮೀನಿನಲ್ಲಿ ಉತ್ತಮ ಸೌಲಭ್ಯಯುಳ್ಳ ನರ್ಸಿಂಗ್ ಸಂಸ್ಥೆ ಆರಂಭಿಸಲು ಕರಾರು ಒಪ್ಪಂದಕ್ಕೆ ಮುಂದಾದರು. ಆದರೆ, ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಅದು ಮುಂದುವರೆದಿಲ್ಲ ಎಂದು ಭೂಮಿಯ ಮೂಲ ಮಾಲೀಕರಾದ ರಾಮಯ್ಯ ಅವರ ಪುತ್ರರಾದ ಸುರೇಶ್ ಹಾಗೂ ಆರ್.ಮಹದೇವ ಸ್ಪಷ್ಟಪಡಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಗೋಷ್ಠಿಯಲ್ಲಿ ರಾಮಯ್ಯ ಪುತ್ರರಾದ ಸುರೇಶ್, ಆರ್.ಮಹದೇವ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮೀನು ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ ಸೇರಿದ ಆಸ್ತಿ ಎಂದು ಹಲವರು ವಿವಾದ ಸೃಷ್ಟಿಸುತ್ತಿರುವುದು ಸರಿಯಲ್ಲ. ಇದು ದಲಿತ ಸಮುದಾಯಕ್ಕೆ ಸೇರಿದ ತಮ್ಮ ಕುಟುಂಬದ ಆಸ್ತಿಯಾಗಿದೆ. ಈ ಜಮೀನಿನ ಸಂಬಂಧ ಇತ್ತೀಚೆಗೆ ಕೆಲವರು ಸುಳ್ಳು ಮಾಹಿತಿಯನ್ನು ನೀಡುತ್ತಿರುವುದು ಸರಿಯಲ್ಲ. 1963ರ ಫೆಬ್ರವರಿ 3ರಂದು ಆಗಿನ ತಹಶೀಲ್ದಾರ್ ಅವರು ಹಿನಕಲ್ ಸರ್ವೆ ನಂ.155ರ ಅಡಿಯಲ್ಲಿ ಬರುವ ಒಟ್ಟು 10 ಎಕರೆ ಭೂಮಿಯನ್ನು ದಲಿತ ಸಮುದಾಯಕ್ಕೆ ಸೇರಿದ ನಮ್ಮ ತಂದೆ ರಾಮಯ್ಯ ಅವರಿಗೆ ಮಂಜೂರು ಮಾಡಿದ್ದರು.

ರಾಮಯ್ಯ ಅವರಿಗೆ ಸೇರಿದ ಭೂಮಿಗೆ ಆರ್‌ಟಿಸಿ ಇದ್ದು, ಸ್ಕೆಚ್‌ನಲ್ಲಿ ರಾಮಯ್ಯ ಅವರ ಹೆಸರಲ್ಲಿ 10 ಎಕರೆ ಭೂಮಿ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ನಂತರ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಾಗ ಖಾತೆ ಪಡೆದುಕೊಂಡು ನಿಯಮಿತವಾಗಿ ಪಾಲಿಕೆಗೆ ತೆರಿಗೆ ಪಾವತಿಸುತ್ತಾ ಬಂದಿದ್ದಾರೆ. 2000ರಲ್ಲಿ ರಾಮಯ್ಯ ನಿಧನದ ನಂತರವೂ ಅವರ ಕುಟುಂಬ ಸದಸ್ಯರಾದ ನಾವುಗಳು ನಿರಂತರವಾಗಿ ಪಾಲಿಕೆಗೆ ತೆರಿಗೆ ಪಾವತಿಸುತ್ತಿದ್ದೇವೆ. ನಂತರ ಅವರು ಪೌತಿ ಖಾತೆಗಾಗಿ ಅರ್ಜಿ ಸಲ್ಲಿಸಿ, ಎಲ್ಲಾ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿದ ಬಳಿಕ ಪಾಲಿಕೆ ಅಧಿಕಾರಿಗಳು ಪೌತಿ ಖಾತೆಯನ್ನು ಮಂಜೂರು ಮಾಡಿದ್ದಾರೆ. ಇದೀಗ ಈ ಭೂಮಿಗೆ ಸಂಬಂಧಿಸಿದಂತೆ ಉತ್ತರಾಧಿಕಾರಿಗಳಾಗಿರುವ ನಾವು ಕಾನೂನುಬದ್ಧ ಮಾಲೀಕರಾಗಿದ್ದು, ಎಲ್ಲಾ ದಾಖಲಾತಿ ಪ್ರಕ್ರಿಯೆಗಳು ಸರಿಯಾದ ಕ್ರಮದಲ್ಲಿ ಮತ್ತು ನಿಯಮಾನುಸಾರವೇ ನಡೆದಿದೆ ಎಂದು ಅವರು ಸ್ಪಷ್ಟಪಡಿಸಿದರು.

ಈ ಅಮೂಲ್ಯ ಭೂಮಿಯನ್ನು ಕಬಳಿಸಲು ಯತ್ನಿಸುತ್ತಿರುವ ಕೆಲ ಸ್ವಾರ್ಥಪರ ಗುಂಪುಗಳು ಈ ಜಮೀನು ಬೇರೆಯವರಿಗೆ ಸೇರಿದ್ದು ಎಂದು ವಿರೋಧ ವ್ಯಕ್ತಪಡಿಸಿದ್ದು, ಅವರ ಒತ್ತಡದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಪೌತಿ ಖಾತೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಪ್ರಸ್ತುತ ಈ ವಿಷಯವು ನ್ಯಾಯಾಲಯದ ಮುಂದೆ ವಿಚಾರಣೆ ಹಂತದಲ್ಲಿದ್ದು ಅಂತಿಮ ತೀರ್ಪು ಬಾಕಿಯಿದೆ ಎಂದು ತಿಳಿಸಿದರು.

ಈ ಹಂತದಲ್ಲಿ ಆಧಾರರಹಿತ ಆರೋಪಗಳು, ತಪ್ಪು ಮಾಹಿತಿ ಅಥವಾ ಏಕಪಕ್ಷೀಯ ಹೇಳಿಕೆಗಳನ್ನು ನೀಡುವವರ ವಿರುದ್ಧ ನ್ಯಾಯಾಂಗ ನಿಂದನೆ ಮತ್ತು ಮಾನಹಾನಿ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ಮಾತನಾಡಿ, ದಲಿತ ಸಮುದಾಯದವರಿಗೆ ಒಳಿತು ಮಾಡುವ ದೃಷ್ಟಿಯಿಂದ ಡಾ.ಶುಶ್ರುತ್‌ಗೌಡರು ಈ ಸ್ಥಳದಲ್ಲಿ ಉತ್ತಮ ಸೌಲಭ್ಯಯುಳ್ಳ ನರ್ಸಿಂಗ್ ಸಂಸ್ಥೆ ಆರಂಭಿಸಲು ಮುಂದಾಗಿದ್ದರು. ಈ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಉದ್ದೇಶವಿತ್ತು. ಈ ಮಾಹಿತಿ ಇಲ್ಲದೆ ಕೆಲವರು ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ರವಿಶಂಕರ್, ಪುರುಷೋತ್ತಮ್ ಮತ್ತಿತರರು ಉಪಸ್ಥಿತರಿದ್ದರು.

ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣ ವ್ಯವಸ್ಥೆಯ ಪೋರ್ಟಲ್ ಅನುಷ್ಠಾನ

ಮೈಸೂರು,ಜ.13–ಕಾರ್ಮಿಕ ಇಲಾಖೆ ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆ ಹಾಗೂ ಇತರೆ ದೂರುಗಳನ್ನು ದಾಖಲಿಸಲು ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ ವ್ಯವಸ್ಥೆಯ ಪೋರ್ಟಲ್ ಅನ್ನು ಅನುಷ್ಠಾನಗೊಳಿಸಿದೆ.

ಪೋರ್ಟಲ್‌ನಲ್ಲಿ ಸಾರ್ವಜನಿಕರಿಗೆ ಬಾಲ ಹಾಗೂ ಕಿಶೋರ ಕಾರ್ಮಿಕರು ಕಂಡು ಬಂದಲ್ಲಿ ದೂರನ್ನು ನೇರವಾಗಿ ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣ ವ್ಯವಸ್ಥೆಯ ಪೋರ್ಟಲ್‌ನಲ್ಲಿ ದಾಖಲು ಮಾಡಲು ಅನುವು ಮಾಡಿಕೊಡಲಾಗಿರುತ್ತದೆ. ಹಾಗೂ ಜನಸ್ಪಂದನ–ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣ ವ್ಯವಸ್ಥೆಯ ಪೋರ್ಟಲ್‌ನಲ್ಲಿ ದಾಖಲಿಸಿದ ದೂರುಗಳು ನೇರವಾಗಿ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳ ಲಾಗ್‌ಇನ್ ತಲುಪುತ್ತದೆ. ಸಾರ್ವಜನಿಕರು ನಿಮ್ಮ ಸುತ್ತಮುತ್ತಲ ಪ್ರದೇಶದಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರು ಕಂಡು ಬಂದಲ್ಲಿ ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣ ವ್ಯವಸ್ಥೆಯ ಪೋರ್ಟಲ್‌ನಲ್ಲಿ ನಿಮ್ಮ ದೂರನ್ನು ನೇರವಾಗಿ ಪೋರ್ಟಲ್ ಮುಖಾಂತರ ನೀಡಬಹುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಾಬಾ ಸಾಹೇಬರ ಚಿಂತನೆ, ಆದರ್ಶಗಳ ಪ್ರತಿಧ್ವನಿ 'ಬಹುರೂಪಿ ನಾಟಕೋತ್ಸವ'

ಮೈಸೂರು,ಜ.13(ವಿವಿಹೆಚ್)– ಮೈಸೂರು ರಂಗಾಯಣದ ಪ್ರತಿಷ್ಠಿತ ಉತ್ಸವ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ದಲ್ಲಿ ಮಹಾನ್ ಮಾನವತಾವಾದಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಾರ್ಥಕ ಚಿಂತನೆ ಮತ್ತು ಆದರ್ಶಗಳು ಪ್ರತಿಧ್ವನಿಸುತ್ತಿವೆ. ಇಡೀ ರಂಗಾಯಣ ಅಂಬೇಡ್ಕರ್ ಮಯವಾಗಿ ಕಂಗೊಳಿಸುತ್ತಿದೆ.


ಅಂಬೇಡ್ಕರ್ ಅವರ ಕುರಿತ ಛಾಯಾಚಿತ್ರ ಪ್ರದರ್ಶನ.

ಇಲ್ಲಿ ಪ್ರದರ್ಶನಗೊಂಡಿರುವ 160ಕ್ಕೂ ಹೆಚ್ಚಿನ ಛಾಯಾಚಿತ್ರಗಳು ಅಂಬೇಡ್ಕರ್ ಅವರ ಬದುಕು, ಬರಹ, ಸಂಶೋಧನೆ, ಚಳವಳಿ ಹಾಗೂ ಅವರು ದೇಶಕ್ಕೆ ನೀಡಿದ ಕೊಡುಗೆಗಳ ಅನಾವರಣಗೊಳಿಸಿವೆ. ರಂಗಕಲಾವಿದ ಎನ್.ಶಿವಲಿಂಗಯ್ಯ ಅವರ ಸಂಗ್ರಹದ ಈ ಛಾಯಾಚಿತ್ರಗಳು ಅಂಬೇಡ್ಕರ್ ಅವರ ಕುರಿತ ಮಹತ್ವದ ಸಂಗತಿಗಳನ್ನು ಇಲ್ಲಿ ಜನಮನಕ್ಕೆ ಮುಟ್ಟಿಸುವಂತಾಗಿದೆ.

1924ರಲ್ಲಿ ದಲಿತರ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಬಹಿಷ್ಕೃತ ಹಿತಕಾರಿಣಿ ಸಭಾ ಸ್ಥಾಪನೆ, 1927ರಲ್ಲಿ ಮಹಾರ್ ಕೆರೆ ನೀರನ್ನು ದಲಿತರು ಬಳಸುವ ಹಕ್ಕಿಗಾಗಿ ಹೋರಾಟ, 1930–32ರ ಮೂರು ದುಂಡುಮೇಜಿನ ಪರಿಷತ್ತುಗಳಲ್ಲಿ ಭಾಗವಹಿಸಿ ದಲಿತರ ಹಕ್ಕುಗಳಿಗಾಗಿ ಹೋರಾಟ, 1942ರಲ್ಲಿ ಅಸ್ಪೃಶ್ಯರ ಹಿತರಕ್ಷಣೆಗಾಗಿ ಅಖಿಲ ಭಾರತ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್ ಸ್ಥಾಪನೆ, 1956ರ ಅಕ್ಟೋಬರ್ 14ರಂದು ನಾಗಪುರದಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದೂ ಸೇರಿದಂತೆ ಬಾಬಾ ಸಾಹೇಬರಿಗೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳ ಚಿತ್ರಣ ಮೂಡಿ ಬಂದಿವೆ.

10 ಸಾವಿರ ನಾಣ್ಯಗಳು: ಅಂಬೇಡ್ಕರ್ ಭಾವಚಿತ್ರವಿರುವ 10 ಸಾವಿರ ನಾಣ್ಯಗಳನ್ನು ಕೋಲಾರ ಜಿಲ್ಲೆಯ ಮುಳಬಾಗಿಲಿನ ಸತೀಶ್ ಎಂಬುವವರು ಸಂಗ್ರಹಿಸಿದ್ದು, ಆ ಎಲ್ಲವನ್ನೂ ರಂಗಾಯಣದಲ್ಲಿ ಪ್ರದರ್ಶಿಸಲಾಗುತ್ತಿದೆ. ಈ ಬಾರಿಯ ಬಹುರೂಪಿಯಲ್ಲಿಯೂ ಆಹಾರ, ಪುಸ್ತಕ ಮತ್ತು ಕರಕುಶಲ ವಸ್ತುಗಳ ಮಾರಾಟ ಮಳಿಗೆಗಳು ಎಲ್ಲರ ಗಮನ ಸೆಳೆಯುತ್ತಿವೆ. ನಾಟಕೋತ್ಸವದ ಎರಡನೇ ದಿನವಾದ ಮಂಗಳವಾರವೂ ಕಿಕ್ಕಿರಿದು ತುಂಬಿದ್ದ ಜನ, ತಮಗಿಷ್ಟದ ಖಾದ್ಯ ಸವಿಯುತ್ತ, ವಸ್ತುಗಳನ್ನು ಕೊಳ್ಳುವಲ್ಲಿ ನಿರತರಾಗಿದ್ದರು.

ಮಣ್ಣಿನಿಂದ ಮಾಡಿದ ಕಲಾಕೃತಿಗಳು, ಚರ್ಮ ವಾದ್ಯಗಳಾದ ಡೊಳ್ಳು, ಚಂಡೆ, ಜಂಬೆ, ಕಸೂತಿ ಸೀರೆ, ಇಳಕಲ್ ಸೀರೆ, ಕತ್ತಾಳೆ ನಾರು ಮತ್ತು ಹತ್ತಿ ಬಟ್ಟೆಗಳು, ಬಿದಿರಿನ ಗೃಹೋಪಯೋಗಿ ವಸ್ತುಗಳು, ಕುಂಚದಿಂದ ಅರಳಿದ ಜುಲು ಆರ್ಟ್, ಕ್ಯೂಬಿಸಂ ಆರ್ಟ್‌ಗಳು, ವನ್ಯಜೀವಿಗಳ ಬಗ್ಗೆ ವಿಶೇಷ ಅರಿವು ಮೂಡಿಸುವಲ್ಲಿ ವನ್ಯಜೀವಿ ಕ್ಯಾಲೆಂಡರ್, ಛಾಯಾಚಿತ್ರಗಳು, ಹಾಸಿಗೆ, ಹೊದಿಕೆಗಳು ಸೇರಿದಂತೆ ತರೇಹಾವರಿ ವಸ್ತುಗಳ ಖರೀದಿಗೆ ಜನರು ಮುಗಿಬೀಳುತ್ತಿರುವುದು ಕಂಡುಬಂದಿತು.

> ಹಾಡಿ ಜನರು ಸ್ವತಃ ಹೆಣೆದ ಬಿದಿರಿನ ಕರಕುಶಲ ವಸ್ತುಗಳನ್ನು ಬಿದಿರು ಥಿಯೇಟರ್ ಮೈಸೂರು ತಂಡದಿಂದ ಮೂಲ ಬೆಲೆಗೆ ಕೊಂಡುಕೊಂಡು, ಅದೇ ಬೆಲೆಗೆ ಮಾರಾಟ ಮಾಡುತ್ತಿದ್ದೇವೆ. ಹಾಡಿ ಜನರ ಕಲೆಯನ್ನು ಪ್ರೋತ್ಸಾಹಿಸುವ ಜೊತೆಗೆ ಅವರಿಗೂ ಆರ್ಥಿಕವಾಗಿ ಸಹಾಯ ಮಾಡುವುದು ಇದರ ಉದ್ದೇಶ.
> -ಚೈತನ್ಯಾ, ಮಳಿಗೆದಾರರು.



> ಡಾ.ಅಂಬೇಡ್ಕರ್ ಅವರ ಜೀವನ, ಹೋರಾಟ ಬಗೆಗಿನ ಛಾಯಾಚಿತ್ರ ಪ್ರದರ್ಶನ ಅತ್ಯುತ್ತಮವಾಗಿದೆ. ಈ ಛಾಯಾಚಿತ್ರ ವೀಕ್ಷಣೆಗಾಗಿ ಚಾಮರಾಜನಗರದಿಂದ ಬಂದಿದ್ದೇನೆ. ಕೇವಲ ಒಂದು ಸಮುದಾಯಕ್ಕೆ ಸೀಮಿತ ವ್ಯಕ್ತಿಯನ್ನಾಗಿ ಮಾಡಿರುವ ಸಮಾಜಕ್ಕೆ, ಅದೇ ವ್ಯಕ್ತಿಯ ಹೋರಾಟದ ಯಶೋಗಾಥೆ ತಿಳಿಸಲು ಮುಂದಾಗಿರುವ ನಾಟಕೋತ್ಸವಕ್ಕೆ ಧನ್ಯವಾದಗಳು.
> -ಮಲ್ಲಿಕ್.ಜೆ.ಕೆ. ಜ್ಯೋತಿಗೌಡನ ಪುರ, ಚಾಮರಾಜನಗರ ಜಿಲ್ಲೆ.



ಬಹುರೂಪಿ ರಂಗೋತ್ಸವಕ್ಕೆ ಹರಿದು ಬರುತ್ತಿದೆ ರಂಗಾಸಕ್ತರ ದಂಡು


ಕರಗಟ್ಟಂ, ಡಮ್ಮಿ ಹಾರ್ಸ್ ನೃತ್ಯ ಪ್ರದರ್ಶಿಸಿದ ಸೇಲಂನ ಮುಪ್ಪಿಡತಿ ಸೂರ್ಯನ ಕೌಂಡಸಂಗಾಡು ತಂಡ.

ಮೈಸೂರು, ಜ.13(ವಿವಿಹೆಚ್)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಎರಡನೇ ದಿನವಾದ ಮಂಗಳವಾರವೂ ರಂಗಾಸಕ್ತರ ದಂಡು ನೆರೆದಿತ್ತು. ಸಂಜೆ ವೇಳೆಗೆ ರಂಗಾಯಣದ ಆವರಣಕ್ಕೆ ಕಾಲಿಟ್ಟ ರಂಗಾಸಕ್ತರು ವನರಂಗ, ಭೂಮಿಗೀತ, ಕಿರುರಂಗಮಂದಿರ, ಕಲಾಮಂದಿರದಲ್ಲಿ ನಾಟಕಗಳನ್ನು ವೀಕ್ಷಿಸಿದರು.

ಕಲಿಯುವ ಮನೆ ಮಕ್ಕಳು ಅಭಿನಯಿಸಿದ 'ರೂಪಾಂತರ' ನಾಟಕವನ್ನು ನೂರಾರು ಮಕ್ಕಳು ನೋಡಿ ಖುಷಿಪಟ್ಟರು. ಬಹುಭಾಷ ನಟ ಪ್ರಕಾಶ್ ರಾಜ್ ಕೂಡ ಕುಟುಂಬ ಸಮೇತರಾಗಿ ಆಗಮಿಸಿ ನಾಟಕ ವೀಕ್ಷಿಸುವ ಮೂಲಕ ಮಕ್ಕಳ ಪ್ರೋತ್ಸಾಹಿಸಿದರು. ಕೆ.ಪಿ.ಲಕ್ಷ್ಮಣ ಅವರ ನಿರ್ದೇಶನದ 'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ' ನಾಟಕ ವೀಕ್ಷಿಸಲು ಭೂಮಿಗೀತ ವೇದಿಕೆಯಲ್ಲಿ ಪ್ರೇಕ್ಷಕರು ಕಿಕ್ಕಿರಿದು ತುಂಬಿದ್ದರು.

ವನರಂಗದಲ್ಲಿ ಧನಂಜಯ ರಾಧಾ ನಿರ್ದೇಶನದ ಅಸ್ಸಾಮಿ ಭಾಷೆಯ 'ದದನ್ ರಾಜಾ', ಕಿರು ರಂಗಮಂದಿರದಲ್ಲಿ ಅರುಣ್ ಲಾಲ್ ನಿರ್ದೇಶನದ ಮಲಯಾಳಂ ಭಾಷೆಯ 'ಕುಹೂ' ನಾಟಕಗಳಿಗೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಂಜೆ ಕಲಾಮಂದಿರದಲ್ಲಿ ಪುನರ್ ಪ್ರದರ್ಶನಗೊಂಡ 'ರೂಪಾಂತರ' ನಾಟಕ ವೀಕ್ಷಿಸಲು ಮಕ್ಕಳು ತುಂಬಿದ್ದರು.

ಮತ್ತೊಂದೆಡೆ ಕಿಂದರಜೋಗಿ ಆವರಣದಲ್ಲಿ ನಡೆದ ಜನಪದ ಉತ್ಸವ ಮತ್ತಷ್ಟು ಮೆರುಗನ್ನು ಹೆಚ್ಚಿಸಿತು. ಸೇಲಂನ ಮಪ್ಪಿಡಕಿ ಸೂರ್ಯನ ಕೌಂಡ ಸಂಗಾಡು, ಸೀಲ ನಾಯಗನ ಪಟ್ಟಿ ತಂಡದಿಂದ ಪ್ರದರ್ಶಿಸಿದ ಕರಗ, ಕೀಲು ಕುದುರೆ, ಕವಾಡಿ ನೃತ್ಯ ಜನರರನ್ನು ರಂಜಿಸಿತು. ಹಾಸನದ ಕುಮಾರಯ್ಯ ಮತ್ತು ತಂಡದಿಂದ ಚಿಟ್ ಮೇಳ ಪ್ರದರ್ಶನವಾಯಿತು.

ಬೆಳ್ಳಿತೆರೆಯಲ್ಲಿ ದೇಮರ ಒಡಲಾಳ: ಬಹುರೂಪಿ ಚಲನಚಿತ್ರೋತ್ಸವ ಅಂಗವಾಗಿ ಶ್ರೀರಂಗ ಮಂದಿರದಲ್ಲಿ ಇಂದು ಸಂಜೆ ಪ್ರದರ್ಶನ ಕಂಡ 'ಮಾರಿಕೊಂಡವರು' ಸಿನಿಮಾ ವೀಕ್ಷಿಸಿದ ಪ್ರೇಕ್ಷಕರ ಮನಮುಟ್ಟಿತು. ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ 'ಮಾರಿಕೊಂಡವು', 'ಡಾಂಬರು ಬಂದುದು', 'ಗ್ರಸ್ತರು' ಕತೆಗಳನ್ನು ಆಧರಿಸಿ ಕೆ.ಶಿವರುದ್ರಯ್ಯ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದೆ. ದಲಿತರ ನೋವು, ಮೇಲ್ಜಾತಿಯ ದಬ್ಬಾಳಿಕೆಯು ಈ ಚಿತ್ರದಲ್ಲಿ ಅನಾವರಣಗೊಂಡಿದೆ. ಇದರೊಂದಿಗೆ ಆರ್.ಎಸ್.ಟಿವಿ ನಿರ್ದೇಶನದ 'ಸಂವಿಧಾನ್ ಮೇಕಿಂಗ್ ಆಫ್ ದಿ ಇಂಡಿಯನ್ ಕಾನ್ಸ್‌ಟಿಟ್ಯೂಷನ್', ಆನಂದ ಪಟವರ್ಧನ್ ನಿರ್ದೇಶನದ 'ಜೈ ಭೀಮ್ ಕಾಮ್ರೇಡ್ 1' ಚಿತ್ರಗಳು ಪ್ರದರ್ಶನಗೊಂಡು ಅಸ್ಪೃಶ್ಯತೆ ನೋವನ್ನು ತೆರೆದಿಟ್ಟವು.


ರೂಪಾಂತರ ನಾಟಕ ಪ್ರದರ್ಶಿಸಿದ ಮಕ್ಕಳು

ಹರ್ಮನ್‌ಪ್ರೀತ್ ಕೌರ್ ಅರ್ಧಶತಕ: ಮುಂಬೈಗೆ ಜಯ

ನವಿ ಮುಂಬೈ, ಜ.13(ವಿವಿಹೆಚ್)– ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಅಜೇಯ ಅರ್ಧಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ಗುಜರಾತ್ ಜೈಂಟ್ಸ್ ಅನ್ನು 7 ವಿಕೆಟ್‌ಗಳಿಂದ ಮಣಿಸಿತು.



ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಜೈಂಟ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು. ಬೃಹತ್ ಮೊತ್ತ ಬೆನ್ನತ್ತಿದ ಮುಂಬೈ 19.2 ಓವರ್‌ಗಳಲ್ಲಿ ಇನ್ನೂ 4 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್ ನಷ್ಟಕ್ಕೆ 193 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮುಂಬೈ ಪರ ಇನ್ನಿಂಗ್ಸ್ ಆರಂಭಿಸಿದ ಗುಣಲನ್ ಕಮಲಿನಿ 13, ಹೇಲಿ ಮ್ಯಾಥ್ಯೂಸ್ 22 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ನಂತರ 3ನೇ ವಿಕೆಟ್‌ಗೆ ಜೊತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಅಮನ್ಜೋತ್ ಕೌರ್ 72 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರೆ. ಆದರೆ 26 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 40 ರನ್ ಗಳಿಸಿ ಅಮನ್ಜೋತ್ ಕೌರ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ನಾಯಕಿ ಹರ್ಮನ್‌ಪ್ರೀತ್ ಕೌರ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ನಿಕೋಲಾ ಕ್ಯಾರಿ ಅವರ ಜೊತೆ ಗೂಡಿ 4ನೇ ವಿಕೆಟ್‌ಗೆ 84 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಅಂತಿಮವಾಗಿ ಹರ್ಮನ್‌ಪ್ರೀತ್ ಕೌರ್ 43 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ ಅಜೇಯ 71, ನಿಕೋಲಾ ಕ್ಯಾರಿ 38 ರನ್ ಗಳಿಸಿ ಅಜೇಯರಾಗಿ ಉಳಿದರು. ಗುಜರಾತ್ ಜೈಂಟ್ಸ್ ಪರ ರೇಣುಕಾ ಸಿಂಗ್ ಠಾಕೂರ್, ಕಾಶ್ವೀ ಗೌತಮ್ ಹಾಗೂ ಸೋಫಿ ಡಿವೈನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಜೈಂಟ್ಸ್ ಪರ ಬೆತ್ ಮೂನಿ 33, ಕನಿಕಾ ಅಹುಜಾ 35, ಜಾರ್ಜಿಯಾ ವೇರ್ಹ್ಯಾಮ್ 43, ಭಾರತಿ ಫುಲ್ಮಾಲಿ 36, ಆಶ್ಲೀ ಗಾರ್ಡರ್ಸ್ 20, ಆಯುಷಿ ಸೋನಿ 11 ರನ್ ಗಳಿಸಿದರು. ಮುಂಬೈ ಇಂಡಿಯನ್ಸ್ ಪರ ಶಬಿಮ್ ಇಸ್ಮಾಯಿಲ್, ಹೇಲಿ ಮ್ಯಾಥ್ಸ್, ನಿಕೋಲಾ ಕ್ಯಾರಿ ಹಾಗೂ ಅಮೆಲಿಯಾ ಕೆರ್ ತಲಾ ಒಂದೊಂದು ವಿಕೆಟ್ ಪಡೆದು ಗಮನ ಸೆಳೆದರು. ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಎಂಐ ನಾಯಕಿ ಹರ್ಮನ್‌ಪ್ರೀತ್ ಕೌರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿಬಿ–ಜಿ ರಾಮ್–ಜಿ, ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಜಾಗೃತಿ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾಹಿತಿ ● ಮುಂಬರುವ ಜಿಪಂ, ತಾಪಂ ಚುನಾವಣೆಗೆ ಪಕ್ಷ ಸದೃಢ

ಬೆಂಗಳೂರು, ಜ.13(ಕೆಎಂಶಿ)–ಮುಂದಿನ ದಿನಗಳಲ್ಲಿ ವಿಬಿ–ಜಿ–ರಾಮ್–ಜಿ ಹಾಗೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ಐಆರ್) ಕುರಿತು ಜನರಲ್ಲಿ ಪಕ್ಷ ಜಾಗೃತಿ ಮೂಡಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ವಿವಿಧ ಜಿಲ್ಲೆ ಹಾಗೂ 39 ಸಂಘಟನಾತ್ಮಕ ಜಿಲ್ಲೆಗಳ ಸರಣಿ ಸಭೆಯಲ್ಲಿ ಜಿಲ್ಲಾ ರಾಜಕೀಯ ಸ್ಥಿತಿಗತಿ, ಸಂಘಟನೆ ಪರಿಸ್ಥಿತಿ, ಮುಂಬರುವ ಜಿಲ್ಲಾ, ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಪಕ್ಷವನ್ನು ಯಾವ ರೀತಿ ಸದೃಢವಾಗಿ ಕೊಂಡೊಯ್ಯಬೇಕೆಂಬುದನ್ನು ಚರ್ಚಿಸಲಾಗಿದೆ ಎಂದರು.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ಐಆರ್) ಕುರಿತ ಕೇಂದ್ರ ಚುನಾವಣಾ ಆಯೋಗದ ನಿರ್ಣಯವನ್ನು ಪಕ್ಷ ಸ್ವಾಗತಿಸುತ್ತದೆ. ರಾಜ್ಯದಲ್ಲಿ ಫೆಬ್ರವರಿ ಅಥವಾ ನಂತರದ ದಿನಗಳಲ್ಲಿ ಎಸ್ಐಆರ್ ನಡೆಯುವ ಸಾಧ್ಯತೆ ಇದ್ದು, ಬಿಜೆಪಿ ಹೆಚ್ಚಿನ ಗಮನ ಕೊಡಲಿದೆ.

ಜಾಗೃತಿ ಸಭೆಗಳು: ಬಿಹಾರ ವಿಧಾನಸಭಾ ಚುನಾವಣೆ ಮೇಲೆ ಎಸ್ಐಆರ್ ಪರಿಣಾಮ ಬೀರಿದ್ದು, 65 ಲಕ್ಷಕ್ಕೂ ಹೆಚ್ಚು ನಕಲಿ ಮತದಾರರ ಹೆಸರನ್ನು ಕೈಬಿಟ್ಟಿತ್ತು. ಅದೇ ರೀತಿ ಉತ್ತರ ಪ್ರದೇಶದಲ್ಲಿ 2.5 ಕೋಟಿಗೂ ಹೆಚ್ಚು ನಕಲಿ ಮತದಾರರನ್ನು ಕೈಬಿಡಲಾಗಿದೆ ಎಂದರು.

ವಿಬಿ–ಜಿ–ರಾಮ್–ಜಿ ಕುರಿತು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಗ್ಯಾರಂಟಿ ಭ್ರಮೆಯಲ್ಲಿದ್ದ ರಾಜ್ಯ ಸರ್ಕಾರಕ್ಕೆ ಸತ್ಯದ ಅರಿವಾಗುತ್ತಿದೆ. ಜಿಲ್ಲಾ, ತಾಲೂಕು ಪಂಚಾಯತ್ ಚುನಾವಣೆ ಮುಂದೂಡಿ, ಮನರೇಗಾ ಕುರಿತು ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸಿದ್ದರಾಮಯ್ಯ ಅಪಪ್ರಚಾರ ಷಡ್ಯಂತ್ರದ ವಿರುದ್ಧ ಜಿಲ್ಲಾ ಹಾಗೂ ಗ್ರಾಮೀಣ ಮಟ್ಟದಲ್ಲಿ ಜಾಗೃತಿ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.



ನಿರೀಕ್ಷೆಗೂ ಮೀರಿ ಎಲ್ಲ ಜಿಲ್ಲೆಗಳಲ್ಲಿ ಸಭೆಗಳು ಯಶಸ್ವಿಯಾಗಿವೆ. ಪಕ್ಷದ ಎಲ್ಲ ಹಿರಿಯರು, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಸದಾನಂದಗೌಡ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಧಾನಮಂಡಲದ ಉಭಯ ಸದನಗಳ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಗೋವಿಂದ ಕಾರಜೋಳ, ಸಿ.ಟಿ.ರವಿ ಸೇರಿದಂತೆ ಅನೇಕ ನಾಯಕರು ತೊಡಗಿಸಿಕೊಂಡಿರುವುದು ಕಾರ್ಯಕರ್ತರಿಗೆ ಆನೆ ಬಲ ಬಂದಂತಾಗಿದೆ ಎಂದರು.

ಕೋರ್ ಕಮಿಟಿ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ವಿರುದ್ಧ ವಿವಿಧ ಹಂತದಲ್ಲಿ ಜನಾಂದೋಲನ ರೂಪಿಸಲು ಚರ್ಚೆ ನಡೆಯಿತು ಎಂದರು.

ಕಾನೂನು–ಸುವ್ಯವಸ್ಥೆ ಕುಸಿತ: ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಇದಕ್ಕೆ ಬಳ್ಳಾರಿಯ ಗೂಂಡಾಗಿರಿ ಸ್ಪಷ್ಟ ಉದಾಹರಣೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್ ನಾಯಕರ ಗನ್‌ಮ್ಯಾನ್ ಗುಂಡು ಹಾರಿಸಿ, ಅವರದೇ ಪಕ್ಷದ ಕಾರ್ಯಕರ್ತ ಸಾವನ್ನಪ್ಪಿದ್ದಾನೆ. ಯಲ್ಲಾಪುರದಲ್ಲಿ ದಲಿತ ಹೆಣ್ಣು ಮಗಳ ಬರ್ಬರ ಹತ್ಯೆ ನಡೆದಿದೆ. ದಲಿತ ಕುಟುಂಬಕ್ಕೆ ನ್ಯಾಯ ಕೊಡಿ, 50 ಲಕ್ಷ ಪರಿಹಾರ ಕೊಡಿ ಎಂದು ಒತ್ತಾಯಿಸಿದರು.

ಸುಳ್ಯ ಕ್ಷೇತ್ರದ ಬಿಜೆಪಿ ದಲಿತ ಶಾಸಕಿ ಭಾಗೀರಥಿ ಮುರುಳ್ಯ ವಿರುದ್ಧ ಶ್ರದ್ಧಾಂಜಲಿ ಟ್ವೀಟ್ ನೀಡಿದ್ದರೂ ತಾಂತ್ರಿಕ ಕಾರಣ ಮುಂದಿಟ್ಟು ಪೊಲೀಸ್ ವರಿಷ್ಠಾಧಿಕಾರಿಗಳು ಕಾನೂನಾತ್ಮಕ ಕ್ರಮ ಕೈಗೊಳ್ಳುತ್ತಿಲ್ಲ. ತಪ್ಪಿತಸ್ಥ ಕಾರ್ಯಕರ್ತನ ಬಂಧನ ಆಗಿಲ್ಲ. ಅಹಿಂದ ಹೆಸರು ಹೇಳಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದ ಸಿದ್ದರಾಮಯ್ಯ ಸರ್ಕಾರದಲ್ಲಿ ದಲಿತರಿಗೆ ಅಪಮಾನ ಆಗುತ್ತಿದೆ. ಗೃಹ ಸಚಿವರು, ಕಾನೂನು–ಸುವ್ಯವಸ್ಥೆ ಬಗ್ಗೆ ಚಕಾರ ಎತ್ತುತ್ತಿಲ್ಲ. ಬಳ್ಳಾರಿಗೆ ಭೇಟಿ ನೀಡಿದ ಡಿಸಿಎಂ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ಮಾಡಿದ್ದಾರೆ.

ಈ ಎಲ್ಲ ವಿಚಾರಗಳನ್ನು ಮುಂದಿಟ್ಟುಕೊಂಡು ಜನವರಿ 17ರಂದು ಬಳ್ಳಾರಿಯಲ್ಲಿ ಬೃಹತ್ ಪ್ರತಿ ಭಟನೆ ನಡೆಸಲಾಗುತ್ತಿದೆ ಎಂದರು. ಗೃಹಲಕ್ಷ್ಮಿ ಯೋಜನೆಯ 5 ಸಾವಿರ ಕೋಟಿ ರೂ. ಏನಾಯಿತೆಂಬ ಬಗ್ಗೆ ಸಚಿವರಿಂದ ಸಮರ್ಪಕ ಉತ್ತರ ಬಂದಿಲ್ಲ. ರಾಜ್ಯದಲ್ಲಿ ಡ್ರಗ್ಸ್ ಹಾವಳಿ ಹೆಚ್ಚುತ್ತಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಮಾದಕವಸ್ತು ವಶ ಪ್ರಮಾಣ ತೀವ್ರ ಏರಿಕೆಯಾಗಿರುವುದು, ಯುವಜನರನ್ನು ತಲುಪುತ್ತಿರುವುದು ಗಂಭೀರ ವಿಚಾರ ಎಂದರು.

ಕಾಡಾನೆ ದಾಳಿಗೆ ಮಹಿಳೆ ಬಲಿ; ಅರಣ್ಯ ಇಲಾಖೆ ವಿರುದ್ಧ ರೊಚ್ಚಿಗೆದ್ದ ಗ್ರಾಮಸ್ಥರು

ಹಾಸನ: ಹಾಸನ ಜಿಲ್ಲೆಯಲ್ಲಿ ಮಾನವ–ಕಾಡಾನೆ ಸಂಘರ್ಷ ಮುಂದುವರೆದಿದ್ದು, ಸಕಲೇಶಪುರ ತಾಲೂಕಿನ ಮೋಗಲಿ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಕಾಡಾನೆ ದಾಳಿಗೆ ಕಾರ್ಮಿಕ ಮಹಿಳೆಯೊಬ್ಬರು ಬಲಿಯಾಗಿದ್ದಾರೆ.



ಮೃತ ಮಹಿಳೆಯನ್ನು ಶೋಭಾ(40) ಎಂದು ಗುರುತಿಸಲಾಗಿದೆ. ಇಂದು ಬೆಳಗ್ಗೆ ಕಾಫಿ ತೋಟದಲ್ಲಿ ಸುಣ್ಣ ಹಚ್ಚುವ ಕೆಲಸಕ್ಕೆ ಶೋಭ ತೆರಳಿದ್ದರು. ಈ ವೇಳೆ ಏಕಾಏಕಿ ದಾಳಿ ನಡೆಸಿದ ಕಾಡಾನೆ, ಮಹಿಳೆಯನ್ನು ತುಳಿದು ಕೊಂದಿದೆ. ಘಟನೆಯ ಬಳಿಕ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಡಾನೆ ದಾಳಿಯಿಂದ ಮಹಿಳೆ ಮೃತಪಟ್ಟಿದ್ದಕ್ಕೆ ಆಕ್ರೋಶಗೊಂಡ ಗ್ರಾಮಸ್ಥರು, ಮೃತದೇಹವನ್ನು ಸ್ಥಳದಲ್ಲೇ ಇಟ್ಟು ಧರಣಿ ನಡೆಸಿದರು. ಅರಣ್ಯಾಧಿಕಾರಿಗಳ ನಿರ್ಲಕ್ಷ್ಯವೇ ಈ ದುರ್ಘಟನೆಗೆ ಕಾರಣ ಎಂದು ಆರೋಪಿಸಿದರು. ಕಾಡಾನೆಗಳ ಸಂಚಾರದ ಬಗ್ಗೆ ಮುಂಚಿತವಾಗಿಯೇ ಜನರಿಗೆ ಮಾಹಿತಿ ನೀಡುತ್ತಿಲ್ಲ. ಪುಂಡಾನೆಗಳನ್ನು ಸೆರೆಹಿಡಿಯುತ್ತಿಲ್ಲ ಹಾಗೂ ರೇಡಿಯೋ ಕಾಲರ್ ಅಳವಡಿಸದೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭೆ ಅನಾವರಣಗೊಂಡಾಗ ಮಾತ್ರ ಸಾಧನೆ ಸಾಧ್ಯ

ಶಾಸಕ ರವಿಕುಮಾರ್ ಗಣಿಗ ಅಭಿಪ್ರಾಯ



ಕಾರ್ಯಕ್ರಮದಲ್ಲಿ ಶಾಸಕ ರವಿಕುಮಾರ್ ಗಣಿಗ ಮಾತನಾಡಿದರು.

> ಪ್ರತಿಭಾ ಕಾರಂಜಿ ಮಕ್ಕಳಲ್ಲಿರುವ ಪ್ರತಿಭೆ ಅನಾವರಣಗೊಳಿಸಲು ಸೂಕ್ತ ವೇದಿಕೆ. ಶಿಕ್ಷಕರು ಮಕ್ಕಳ ಪ್ರತಿಭೆ ಗುರ್ತಿಸಿ ಅವರನ್ನು ಪ್ರೋತ್ಸಾಹಿಸಬೇಕು. ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳು ಮುಖ್ಯ. ಮಕ್ಕಳಿಗೆ ಜೀವನದ ಮೌಲ್ಯಗಳ ಕುರಿತು ಶಿಕ್ಷಕರು ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಕಳೆದ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ.
> – ಡಾ.ಕುಮಾರ್, ಜಿಲ್ಲಾಧಿಕಾರಿ.

ಮಂಡ್ಯ, ಜ.13– ಮಕ್ಕಳು ತಮ್ಮಲ್ಲಿ ಇರುವ ಪ್ರತಿಭೆ ಅನಾವರಣಗೊಳಿಸಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಶಾಸಕ ರವಿಕುಮಾರ್ ಗಣಿಗ ತಿಳಿಸಿದರು.

ನಗರದ ಸಂತ ಜೋಸೆಫರ ಪ್ರೌಢಶಾಲೆ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಮಂಡ್ಯ, ಶಾಲಾ ಶಿಕ್ಷಣ ಇಲಾಖೆ ಮಂಡ್ಯ ವತಿಯಿಂದ ನಡೆದ 2025–26ನೇ ಸಾಲಿನ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಕೇವಲ ಪಠ್ಯ ಪುಸ್ತಕಗಳಿಗೆ ಸೀಮಿತವಾಗದೇ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದರು.

ಮಕ್ಕಳು ಐಎಎಸ್‌ನಂತಹ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಜನ ಸೇವಕರಾಗಿ ರಾಜಕೀಯ ಪ್ರವೇಶಿಸಬೇಕು. ಭಾರತ ಯುವ ಪೀಳಿಗೆ ಮೇಲೆ ನಿಂತಿದೆ. ಮಕ್ಕಳು ದೊಡ್ಡ ಕನಸುಗಳನ್ನು ಕಾಣಬೇಕು ಮತ್ತು ಕನಸನ್ನು ನನಸಾಗಿಸಲು ಶ್ರಮ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮಕ್ಕಳಿಗೆ ಶಿಕ್ಷಣದ ಜೊತೆಗೆ ಅವರ ಪ್ರತಿಭೆ ಅನಾವರಣಗೊಳಿಸಲು ಸೂಕ್ತ ವೇದಿಕೆ ದೊರೆಯಬೇಕು. ಪ್ರತಿಯೊಂದು ಮಗುವಿನಲ್ಲೂ ವಿಶೇಷ ಪ್ರತಿಭೆ ಅಡಕವಾಗಿರುತ್ತದೆ. ಅಂತಹ ಮಕ್ಕಳಿಗೆ ಸೂಕ್ತ ವೇದಿಕೆ ಸಿಗದಿದ್ದರೆ ಅವರ ಪ್ರತಿಭೆ ಕಮರಿ ಹೋಗುತ್ತದೆ. ಹಾಗಾಗಿ ಮಕ್ಕಳಿಗೆ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿ, ಪ್ರತಿಭಾ ಕಾರಂಜಿ ವೈಯಕ್ತಿಕವಾಗಿ ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ. ಕಲಿಕಾ ದಿನಗಳಲ್ಲಿ ನಮ್ಮ ಶಾಲೆ ಪ್ರತಿನಿಧಿಸಿ ವಿವಿಧ ಪ್ರತಿಭಾ ಕಾರಂಜಿಗಳಲ್ಲಿ ಭಾಗಿಯಾಗುತ್ತಿದ್ದೆ. ಪ್ರತಿಭೆಗಳ ಸಮ್ಮಿಲನ ಮತ್ತು ಅನಾವರಣಕ್ಕೆ ಪ್ರತಿಭಾ ಕಾರಂಜಿ ಒಂದು ಉತ್ತಮ ವೇದಿಕೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ನಾಗೇಶ್, ಜಿಲ್ಲಾ ಪ್ರಾಂಶುಪಾಲ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜೆ.ವೈ.ಮಂಜುನಾಥ್, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟರಾಜಯ್ಯ, ಡಯಟ್ ಉಪ ನಿರ್ದೇಶಕ ಯೋಗೇಶ್, ಡಿಡಿಪಿಐ ಲೋಕೇಶ್, ಬಿಇಓಗಳಾದ ಮಹದೇವ್, ಕೆ.ಟಿ.ಸೌಭಾಗ್ಯ, ಸಂತ ಜೋಸೆಫರ ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

ವಿವಿಧೆಡೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಜ.13– ತಾಲೂಕಿನ ಸೋಳ್ಳೇಪುರ, ಶ್ರವಣೂರು, ಚಿಕ್ಕಮಂದಗೆರೆ, ಗದ್ದೆಹೊಸೂರು, ಮೂಡನಹಳ್ಳಿ, ಆಲೇನಹಳ್ಳಿ, ಮಂಚೀಬೀಡು, ಬೀರುವಳ್ಳಿ, ಅರೇನಹಳ್ಳಿ, ಸಾಕ್ಷಿಬೀಡು ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಸೋಳ್ಳೇಪುರದಲ್ಲಿ ಡಿಸಿಸಿ ಬ್ಯಾಂಕ್ ವತಿಯಿಂದ ನಿರ್ಮಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿದ ಶಾಸಕರು, ಜಿಲ್ಲೆಯ ಎಲ್ಲಾ ತಾಲೂಕುಗಳಿಗಿಂತ ಕೆ.ಆರ್.ಪೇಟೆ ತಾಲೂಕು ಭೌಗೋಳಿಕವಾಗಿ ಹೆಚ್ಚು ವಿಸ್ತೀರ್ಣ ಹೊಂದಿದೆ. ಆದರೆ ರಾಜ್ಯ ಸರ್ಕಾರ ಬೇರೆ ತಾಲೂಕುಗಳಿಗಿಂತ ಕಡಿಮೆ ಅನುದಾನ ನೀಡುತ್ತಿದೆ. ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ತಾಲೂಕಿನ ಮಾದಿಹಳ್ಳಿ, ಗೋಂದಿಹಳ್ಳಿ ಸೇತುವೆ ಪುನರ್ ನಿರ್ಮಾಣ ಸೇರಿದಂತೆ ಇನ್ನಿತರ ಯೋಜನೆಗಳಿಗೆ ಬಿಡುಗಡೆಯಾಗಿದ್ದ 35 ಕೋಟಿ ರೂ. ಅನುದಾನವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದಿದೆ. ಈ ಪೈಕಿ ಹಲವು ಅನುದಾನವನ್ನು ಸಂಬಂಧಪಟ್ಟ ಇಲಾಖೆ ಸಚಿವರ ಮನವೊಲಿಸಿ ಬಿಡುಗಡೆ ಮಾಡಿಸುವ ಮೂಲಕ ಭೂಮಿ ಪೂಜೆ ನೆರವೇರಿಸಿದ್ದೇನೆ ಎಂದರು.

ಕಳೆದ ವರ್ಷ ಸರ್ಕಾರ ಕಾಂಗ್ರೆಸ್ ಶಾಸಕರಿಗೆ 25 ಕೋಟಿ ಅನುದಾನ ನೀಡಿದರೆ, ಜೆಡಿಎಸ್ ಶಾಸಕನಾದ ನನಗೆ 10 ಕೋಟಿ ನೀಡಿತ್ತು. ಈ ಬಾರಿ ಸ್ವಪಕ್ಷದ ಶಾಸಕರಿಗೆ 50 ಕೋಟಿ ನೀಡಿದರೆ, ನನಗೆ 25 ಕೋಟಿ ಅನುದಾನ ನೀಡಿದೆ. ಈ ತಾರತಮ್ಯದಿಂದಾಗಿ ತಾಲೂಕಿನ ಅಭಿವೃದ್ಧಿಗೆ ತೊಡಕಾಗಿದೆ. ಆದರೂ ಬರುವ ಅನುದಾನದಲ್ಲಿ ಅಗತ್ಯವಿರುವ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಒತ್ತು ನೀಡಿದ್ದೇನೆ. ತಾಲೂಕಿನ ಎಲ್ಲಾ ರಸ್ತೆಗಳು ಹಾಳಾಗಿದ್ದು, ಅವುಗಳ ಅಭಿವೃದ್ಧಿಗೆ 100 ಕೋಟಿ ರೂ. ಬೇಕಾಗಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಉಸ್ತುವಾರಿ ಸಚಿವರ ಗಮನಕ್ಕೆ ಪ್ರಮಾಣದ ಅನುದಾನ ನೀಡುವ ಮೂಲಕ ತಾಲೂಕಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ರಾಜ್ಯ ಜೆಡಿಎಸ್ ವಕ್ತಾರ ಅಶ್ವಿನ್ ಕುಮಾರ್, ಜಿಲ್ಲಾ ದಿಶಾ ಸಮಿತಿ ಸದಸ್ಯ ನರಸನಾಯಕ್, ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್, ಸೋಳ್ಳೇಪುರ ಗ್ರಾಪಂ ಸದಸ್ಯ ಎಸ್.ಕೆ.ಬಾಲಕೃಷ್ಣ, ನಿವೃತ್ತ ಸರ್ವೆ ಅಧಿಕಾರಿ ಪುಟ್ಟೇಗೌಡ, ಕಿಕ್ಕೇರಿ ಹೋಬಳಿ ಜೆಡಿಎಸ್ ಮುಖಂಡರಾದ ಕೃಷ್ಣೇಗೌಡ, ಶೇಖರ್, ಸೋಳ್ಳೇಪುರ ಸೊಸೈಟಿ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಅಕ್ಕಿಹೆಬ್ಬಾಳು ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಮಂದಗೆರೆ ಗ್ರಾಪಂ ಉಪಾಧ್ಯಕ್ಷೆ ಪಲ್ಲವಿ, ತಾಪಂ ಮಾಜಿ ಅಧ್ಯಕ್ಷೆ ರೂಪಾ, ಟಿಎಪಿಸಿಎಂಎಸ್ ಉಪಾಧ್ಯಕ್ಷ ಲತಾಮಣಿ, ಬೀರುವಳ್ಳಿ ಸೊಸೈಟಿ ಮಾಜಿ ಅಧ್ಯಕ್ಷ ಈರೇಗೌಡ, ಕಿಕ್ಕೇರಿ ಪಿಡಿಒ ಚಲುವರಾಜು, ಮಂದಗೆರೆ ಗ್ರಾಪಂ ಕಾರ್ಯದರ್ಶಿ ಗಣೇಶ್, ಬೀರುವಳ್ಳಿ ಪಿಡಿಓ ಶಿವಕುಮಾರ್, ಕೆಆರ್‌ಡಿಎಲ್ ಇಂಜಿನಿಯರ್ ಚೇತನ್, ಶಾಸಕರ ಆಪ್ತ ಸಹಾಯಕ ಪ್ರತಾಪ್, ಕುಮಾರಸ್ವಾಮಿ ಮತ್ತಿತರರಿದ್ದರು.

ಪೋಷಕರು ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ


ಕಾರ್ಯಕ್ರಮವನ್ನು ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥಸ್ವಾಮೀಜಿ ಉದ್ಘಾಟಿಸಿದರು.

ಭಾರತೀನಗರ, ಜ.13– ಮಹಿಳೆಯರು ಸಮಾಜದಲ್ಲಿ ಏನಾದರೂ ಸಾಧನೆ ಮಾಡಲು ಪುರುಷರು ಅವರನ್ನು ಸ್ವತಂತ್ರರಾಗಿ ಬಿಡಬೇಕು ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥಸ್ವಾಮೀಜಿ ತಿಳಿಸಿದರು.

ಇಲ್ಲಿಗೆ ಸಮೀಪದ ಮೆಣಸಗೆರೆ ಗ್ರಾಮದ ಜ್ಞಾನಮುದ್ರ ವಿದ್ಯಾಮಂದಿರ ಶಾಲೆಯಲ್ಲಿ ಆಯೋಜಿಸಿದ್ದ ಜ್ಞಾನ ಪರಂಪರೆ–2026 ಮತ್ತು ಮಣಿಕಂಠ ಮಹಿಮೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರು ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿದರೇ ಅವರು ಸ್ವತಂತ್ರರಾಗಿ ಬದುಕಲು ಸಹಕಾರಿಯಾಗುತ್ತದೆ. ಇದಕ್ಕೆ ಉದಾಹರಣೆ ಎಂದರೆ ಜ್ಞಾನಮುದ್ರ ವಿದ್ಯಾಮಂದಿರ ಶಾಲೆಯನ್ನು ಒಂದು ಹಳ್ಳಿಯಲ್ಲಿ ಸ್ಥಾಪಿಸಿ ದೊಡ್ಡಮಟ್ಟಕ್ಕೆ ಕೊಂಡೊಯ್ದ ಶಾಲೆಯ ಮುಖ್ಯಸ್ಥರಾದ ಶಿವಮ್ಮ, ತೇಜಸ್ವಿನಿ, ಸೌಮ್ಯ ಅವರುಗಳೇ ಸಾಕ್ಷಿ ಎಂದರು.

ಗಂಡು ಮಕ್ಕಳ ಶಿಕ್ಷಣವನ್ನು ಪಿಯುಸಿಗೆ ನಿಲ್ಲಿಸಿ ವ್ಯವಸಾಯ ಮಾಡಲು ಬಿಟ್ಟರೂ ಪರವಾಗಿಲ್ಲ. ಹೆಣ್ಣು ಮಕ್ಕಳಿಗೆ ಕನಿಷ್ಠ 21 ವರ್ಷದವರೆಗೆ ಶಿಕ್ಷಣ ನೀಡಿ ಅವರಿಗೆ ಧೈರ್ಯ ತುಂಬಿದರೆ ಅವರು ಸ್ವತಂತ್ರವಾಗಿ ಬದುಕಲು ಸಾಧ್ಯವಾಗುತ್ತದೆ ಎಂದರು. ಸನಾತನ ಧರ್ಮದ ಸಂಸ್ಕಾರಗಳನ್ನು ಉಳಿಸುವ ನಿಟ್ಟಿನಲ್ಲಿ ನಾವು ಹೆಜ್ಜೆ ಇಟ್ಟಾಗ ಮಾತ್ರ ದೇಶ ಯಶಸ್ಸು ಕಾಣಲು ಸಾಧ್ಯ ಎಂದರು.

ಬಿಇಓ ಎಸ್.ಬಿ.ಧನಂಜಯ್ ಮಾತನಾಡಿ, ವಿದ್ಯಾರ್ಥಿಗಳು ಪರಿಸರ ಮತ್ತು ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳಬೇಕು. ಮಕ್ಕಳು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಒಡ್ಡಬೇಕಿರುವುದರಿಂದ ಅವರಿಗೆ ಗುಣಮಟ್ಟದ ಶಿಕ್ಷಣ ಅವಶ್ಯಕ. ಹೀಗಾಗಿ ಇದನ್ನರಿತ ಶಾಲೆಯ ಶಿಕ್ಷಕರು ಮತ್ತು ಆಡಳಿತ ಮಂಡಳಿ ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡಲು ಶ್ರಮಿಸುತ್ತಿದೆ ಎಂದರು.

ಇದೇ ವೇಳೆ ಕ್ರೀಡೆ, ಶೈಕ್ಷಣಿಕ ಸಾಧನೆ ಮಾಡಿದ ಹಲವು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ನಿಶ್ಚಲಾನಂದನಾಥ ಸ್ವಾಮೀಜಿ, ಬಿಇಓ ಎಸ್.ಬಿ.ಧನಂಜಯ್, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಡಿ.ಕೆ.ಶಿವಲಿಂಗೇಗೌಡ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥಾಪಕರಾದ ಶಿವಮ್ಮ ಶಿವಕುಮಾರ್, ಡಾ.ಸೌಮ್ಯ ರಾಜೇಶ್, ಟ್ರಸ್ಟಿ ತೇಜಸ್ವಿನಿ ತಿಪರೇಗೌಡ, ಪ್ರಾಂಶುಪಾಲರಾದ ಶೃತಿ ಇದ್ದರು.

ಹವಾಮಾನ ವೈಪರಿತ್ಯದಿಂದ ರೈತರು, ಕೂಲಿ ಕಾರ್ಮಿಕರಿಗೆ ತೊಂದರೆ

ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿಷಾದ


ಕಾರ್ಯಕ್ರಮವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಚಿನಕುರಳಿ, ಜ.13– ಹವಾಮಾನ ವೈಪರಿತ್ಯದಿಂದಾಗಿ ಗ್ರಾಮೀಣ ಬಡವರು, ರೈತರು, ಕೂಲಿ ಕಾರ್ಮಿಕರು ಹೆಚ್ಚು ತೊಂದರೆ ಅನುಭವಿಸುವಂತಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿಷಾದ ವ್ಯಕ್ತಪಡಿಸಿದರು.

ಇಲ್ಲಿನ ಗ್ರಾಪಂ ಆವರಣದಲ್ಲಿ ಗ್ರಾಪಂ ಹಾಗೂ ಕೆ.ಎಸ್.ಪುಟ್ಟಣ್ಣಯ್ಯ ಫೌಂಡೇಷನ್‌ನಿಂದ ಆಯೋಜಿಸಿದ್ದ ಗ್ರಾಪಂ ಸದಸ್ಯರು, ಅಧಿಕಾರಿಗಳು ಮತ್ತು ಸಮುದಾಯದ ಮಂಚೂಣಿ ಕಾರ್ಯಕರ್ತರೊಂದಿಗೆ ಪಂಚಾಯತ್ ಸಮ್ಮೇಳನ, ಹವಾಮಾನ ಬದಲಾವಣೆ ಪರಿಣಾಮ ತಡೆಗಟ್ಟುವಲ್ಲಿ ಗ್ರಾಪಂ ಮತ್ತು ಸಮುದಾಯದ ಪಾತ್ರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹವಾಮಾನ ವೈಪರಿತ್ಯದಿಂದಾಗಿ ಬಡವರು, ಕೂಲಿ ಕಾರ್ಮಿಕರು, ರೈತರು ತೊಂದರೆ ಅನುಭವಿಸುವಂತಾಗಿದೆ. ಹೀಗಾಗಿ ಗ್ರಾಮೀಣ ಮಟ್ಟದಲ್ಲಿ ಹವಾಮಾನ ವೈಪರಿತ್ಯ ತಡೆಗಟ್ಟುವ ಕ್ರಮ ಅನುಸರಿಸಬೇಕಾಗಿದೆ ಎಂದ ಅವರು ಗ್ರಾಪಂ ಮಟ್ಟದಲ್ಲಿ ಸಭೆ ನಡೆಸಿ ಜನರಿಗೆ ಹವಾಮಾನ ವೈಪರಿತ್ಯ ತಡೆಗಟ್ಟುವ ಕ್ರಮಗಳ ಸಂಬಂಧ ಸಂಶೋಧಕರು ವಿಜ್ಞಾನಿಗಳು ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಈ ಮಾತ್ರ ಮಾತನಾಡುತ್ತಿದ್ದರು. ಇದೀಗ ಪ್ರತಿಯೊಬ್ಬರೂ ಮಾತನಾಡುವಂತಾಗಿದೆ. ಹೀಗಾಗಿ ನಾವು ಸಣ್ಣ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆ. ಹವಾಮಾನ ವೈಪರಿತ್ಯ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

> ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಎದುರಾಗುತ್ತಿರುವ ಹವಾಮಾನ್ಯ ವೈಪರಿತ್ಯಕ್ಕೆ ಮನುಷ್ಯನ ದುರಾಸೆಯೇ ಕಾರಣ. ಮೊದಲು ನಾವು ಅದನ್ನು ತಡೆಗಟ್ಟುವ ಕ್ರಮಗಳನ್ನು ಅನುಸರಿಸಬೇಕು. ಗ್ರಾಮೀಣ ಪ್ರದೇಶಕ್ಕಿಂತ ಹೆಚ್ಚಾಗಿ ನಗರದಲ್ಲಿ ಪರಿಸರ ಮತ್ತು ವಾಯು ಮಾಲಿನ್ಯ ಹೆಚ್ಚಾಗಿದೆ. ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಎಲ್ಲೆಂದರಲ್ಲಿ ಕಸ ಬಿಸಾಡುವುದನ್ನು ನಿಲ್ಲಿಸಬೇಕು. ಚಿನಕುರಳಿ ಗ್ರಾಮನಲ್ಲಿ ಕುಡಿಯುವ ನೀರಿಗೆ ಪ್ಲಾಸ್ಟಿಕ್ ಲೋಟ ಕಡಿಮೆ ಮಾಡಿ ಗಾಜಿನ ಲೋಟಗಳಲ್ಲಿ ನೀರು ಕುಡಿಯುವ ಮೂಲಕ ಅರಿವು ಮೂಡಿಸುತ್ತಿದ್ದೇವೆ. ಶಾಸಕರು ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ನೀರು ಕುಡಿಯುವುದನ್ನು ಸ್ಥಗಿತಗೊಳಿಸಬೇಕು. – ಸಿ.ಶಿವಕುಮಾರ್, ಮನ್‌ಮುಲ್ ನಿರ್ದೇಶಕ.

ಹವಾಮಾನ ವೈಪರಿತ್ಯ ತಡೆಗಟ್ಟುವ ಜೊತೆಗೆ ಗ್ರಾಪಂ ಮಟ್ಟದಲ್ಲಿ ಆಡಳಿತ ಸುಧಾರಣೆ ನಡೆಸುವುದು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕಾರ್ಯಕ್ರಮ, ಯೋಜನೆಗಳ ಬಗ್ಗೆ, ಕಸ ವಿಲೇವಾರಿ ಮಾಡಿ ಹಸಿ–ಒಣ ಬೇರ್ಪಡಿಸುವುದರ ಬಗ್ಗೆಯೂ ಜಾಗೃತಿ ಮೂಡಿಸಲಾಗುವುದು. ತಾಲೂಕಿನ 24 ಗ್ರಾಪಂಗಳಲ್ಲೂ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮೊದಲ ಹಂತದಲ್ಲಿ 12 ಹಾಗೂ ಎರಡನೇ ಹಂತದಲ್ಲಿ 12 ಗ್ರಾಪಂಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಲಿಂಗದೇವರು ಮಾತನಾಡಿದರು. ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಉಪಾಧ್ಯಕ್ಷ ನರಸಿಂಗ ಶೆಟ್ಟಿ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್. ಗೋಪಾಲಗೌಡ, ಪಿಡಿಓ ಆರತಿಕುಮಾರಿ ಸೇರಿದಂತೆ ಗ್ರಾಪಂನ ಎಲ್ಲಾ ಸದಸ್ಯರು ಹಾಜರಿದ್ದರು.

ಮೂರನೇ ಪುಟದಿಂದ

ಗೊಂದಲಕ್ಕೆ ತಿಂಗಳಲ್ಲಿ ಪರಿಹಾರ

ಹಾಗೂ ಯುವಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಮೈಸೂರಲ್ಲಿ ಇದುವರೆಗೆ ಹಳದಿ ಬೋರ್ಡ್ ಹೊಂದಿರುವ 55,742 ಸಾರಿಗೆ ವಾಹನ ನೋಂದಣಿಯಾಗಿವೆ. ಅಲ್ಲದೆ, ಸ್ಕೂಟರ್, ಕಾರ್ ಸೇರಿದಂತೆ ಬಿಳಿ ಬೋರ್ಡ್ ಹೊಂದಿರುವ 11,60,169 ಸಾರಿಗೇತರ ವಾಹನಗಳು ಸೇರಿದಂತೆ ಒಟ್ಟು ಮೈಸೂರು ಜಿಲ್ಲೆಯಲ್ಲಿ 12,15,912 ವಾಹನಗಳು ನೋಂದಣಿಯಾಗಿವೆ ಎಂದು ತಿಳಿಸಿದರು.

ಕಾರ್ಡ್ ಮುದ್ರಣದಲ್ಲಿ ವಿಳಂಬ: ಡಿಎಲ್, ಆರ್‌ಸಿ ಕಾರ್ಡ್‌ಗಳ ಮುದ್ರಣ ಕೇಂದ್ರ ಕಚೇರಿಯಲ್ಲಾಗುತ್ತಿದ್ದು, 15 ದಿನ ತಡವಾಗುತ್ತಿದೆ. ಕೇಂದ್ರ ಕಚೇರಿಯಲ್ಲಿ ಮುದ್ರಣಗೊಂಡ ಬಳಿಕ ನಮ್ಮ ಕಚೇರಿ ಕೆಎಂಎಸ್ ಮಾಡಿ, ನೇರವಾಗಿ ವಾಹನ ಮಾಲೀಕರು ಮತ್ತು ಚಾಲಕರಿಗೆ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಕಳೆದ ತಂತ್ರಾಂಶದಲ್ಲಿ ಇನ್ನು 8 ಸಾವಿರ ಮಂದಿಗೆ ಡಿಎಲ್, ಆರ್‌ಸಿ ಕಾರ್ಡ್ ನೀಡಬೇಕಾಗಿದೆ. ಅದನ್ನು ಹಂತ ಹಂತವಾಗಿ ನೀಡುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

2325 ಪ್ರಕರಣ ದಾಖಲು: ಪ್ರಾದೇಶಿಕ ಕಚೇರಿಯಿಂದ ವಾರ್ಷಿಕ 3 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಿಸಲು ಅವಕಾಶವಿದ್ದು, ಈ ಬಾರಿ ಈಗಾಗಲೇ 2325 ಪ್ರಕರಣ ದಾಖಲಿಸಲಾಗಿದೆ. ಚಿತ್ರದುರ್ಗದ ಬಳಿ ಸ್ಲೀಪರ್ ಬಸ್ ಅಗ್ನಿ ದುರಂತದ ಹಿನ್ನೆಲೆಯಲ್ಲಿ ಮೈಸೂರಲ್ಲೂ ಸ್ಲೀಪರ್ ಬಸ್ ಪರಿಶೀಲಿಸಿ, ಸುರಕ್ಷತೆ, ಭದ್ರತೆ ಬಗ್ಗೆ ಅವಲೋಕಿಸಲಾಗಿದೆ. 10 ಬಸ್‌ಗಳಿಗೆ ನೋಟಿಸ್ ನೀಡಲಾಗಿದ್ದು, 30 ದಿನಗೊಳಗೆ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದರು.

ಬಜೆಟ್‌ಗೂ ಮುನ್ನ ಸಾಧನಾ ಸಮಾವೇಶ

ರಾಜಕಾರಣಕ್ಕೆ ಮರಳುವ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ ಎಂದಿದ್ದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಕುಮಾರಸ್ವಾಮಿ ಅವರಿಗೆ ಹುಷಾರಿರಲಿಲ್ಲ. ಈಗ ಅವರ ಆರೋಗ್ಯದಲ್ಲಿ ಚೇತರಿಸಿಕೊಂಡು ಕ್ರಿಯಾಶೀಲರಾಗಿದ್ದಾರೆ. ಆದರೆ ರಾಜ್ಯ ರಾಜಕಾರಣಕ್ಕೆ ಬರುವುದಾಗಿ ಅವರು ಎಂದೂ ಹೇಳಿಲ್ಲ. ಆದರೆ ನೀವೇ ಮಾಧ್ಯಮದವರು ಅವರ ಹಾವ–ಭಾವ ನೋಡಿ, ಮಾತಿನ ಏರಿಳಿತಗಳನ್ನು ನೋಡಿ, ಅದರ ಆಧಾರದ ಮೇಲೆ ರಾಜ್ಯ ರಾಜಕಾರಣಕ್ಕೆ ಬರುತ್ತಾರೆ ಎಂದು ಹೇಳುತ್ತಿದ್ದೀರಿ. ಆದರೆ ಈ ರೀತಿಯ ಹಾವ–ಭಾವದ ಮೇಲೆ ನಿರ್ಧಾರ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಿಸಿದರು.

ಮನೆಗೇಕೆ ಕರೆದೊಯ್ಯಬಾರದು!

ಕೂರಬೇಕೆಂದು ನೀವು ಬಯಸುತ್ತೀರಿ ಎಂದು ಹೇಳಿದರು. ಬೀದಿ ನಾಯಿಗಳನ್ನು ಸಾಂಸ್ಥಿಕ ಪ್ರದೇಶಗಳು ಮತ್ತು ರಸ್ತೆಗಳಿಂದ ಬೇರೆಡೆಗೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ ನವೆಂಬರ್ 7, 2025ರ ಆದೇಶವನ್ನು ಮಾರ್ಪಡಿಸುವಂತೆ ಕೋರಿ ಸಲ್ಲಿಸಲಾದ ಹಲವಾರು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿತ್ತು.

ಬರುವಾಗ ಜಂಟಿ...! ಹೋಗುವಾಗ ಒಂಟಿ...!!

ಸಿದ್ದರಾಮಯ್ಯ, ಬೆಂಗಳೂರಿಗೆ ಸಿದ್ಧವಾಗಿದ್ದ ವಿಶೇಷ ವಿಮಾನವೇರಿ ಕುಳಿತರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಅದೇ ವಿಮಾನದಲ್ಲಿ ತೆರಳಬೇಕಿತ್ತು. ಆದರೆ ಡಿಕೆಶಿ, ವಿಮಾನವೇರದೆ ನಿಲ್ದಾಣದಿಂದ ಹೊರಬಂದು ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಮಾವನ ಮನೆಗೆ ಭೇಟಿ ನೀಡಿ, ಅಲ್ಲಿ ಚಹಾ ಸೇವಿಸಿದ ಬಳಿಕ ರಸ್ತೆ ಮಾರ್ಗದಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಅಧಿಕಾರ ಹಸ್ತಾಂತರ ಚರ್ಚೆ ನಡೆದಿಲ್ಲ

ವಸ್ತುಸ್ಥಿತಿ ಏನು ಗೊತ್ತುರೀ. ಯಾವುದೇ ವಿಚಾರವಿದ್ದರೂ ಅದನ್ನು ನಾನು ಅಥವಾ ಡಿ.ಕೆ.ಶಿವಕುಮಾರ್ ಮಾತನಾಡಬೇಕು. ಇದೂವರೆಗೆ ಡಿ.ಕೆ.ಶಿವಕುಮಾರ್ ಅವರು ಏನಾದರೂ ಮಾತನಾಡಿದ್ದಾರೆಯೇ? ಯಾರೋ ಎಂಎಲ್‌ಎಗಳು ಹೇಳಿದರೆಂದು ನನ್ನ ಬಳಿ ಕೇಳಿದ್ರೆ ಹೇಗೆ ಎಂದು ಕೋಪದಿಂದ ನುಡಿದರು. ಅಧಿಕಾರ ಹಂಚಿಕೆ ಕುರಿತಂತೆ ಈವರೆಗೆ ಹೈಕಮಾಂಡ್ ಕೂಡ ಯಾವುದೇ ಹೇಳಿಕೆ ನೀಡಿಲ್ಲ. ಹೈಕಮಾಂಡ್ ನಿಮಗೆ ಏನಾದರೂ ಹೇಳಿದೆಯೇ ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯವಾಗಿಯೇ ಪರಿಹರಿಸಿಕೊಳ್ಳಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೇ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾನು ಈಗಾಗಲೇ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತನಾಡಿದ್ದೇನೆ. ಏನೇ ತೀರ್ಮಾನಗಳಿದ್ದರೂ ಅದನ್ನು ಹೈಕಮಾಂಡ್ ಮಾಡುತ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾನು ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಬದ್ಧ ಎಂದು ಪುನರುಚ್ಚರಿಸಿದರು.

ಕೊಟ್ಟ ಮಾತು ತಪ್ಪಬಾರದು ಎಂದು ಪದೇ ಪದೆ ಡಿ.ಕೆ.ಶಿವಕುಮಾರ್ ಅವರು ಹೇಳುತ್ತಿದ್ದಾರಲ್ಲಾ, ನೀವೇನಾದರೂ ಮಾತು ಕೊಟ್ಟಿದ್ದೀರಾ? ಅವರ ಮಾತಿನ ಅರ್ಥವೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಡಿ.ಕೆ.ಶಿವಕುಮಾರ್ ಅವರು ಈ ರೀತಿ ಹೇಳಿಯೇ ಇಲ್ಲ ನುಣುಚಿಕೊಂಡರು.

ರಾಹುಲ್ ಗಾಂಧಿ ಗುಪ್ತ್... ಗುಪ್ತ್... ಮಾತುಕತೆ

ಡಿಸಿಎಂ ಡಿ.ಕೆ.ಶಿವಕುಮಾರ್ ದಾಪುಗಾಲಾಕಿ ಹೋಗಿ ರಾಹುಲ್ ಗಾಂಧಿ ಅವರ ಬರಮಾಡಿಕೊಂಡು, ಏನೋ ವಿಚಾರ ಪ್ರಸ್ತಾಪಿಸಿದಂತಿತ್ತು. ಮಾತನಾಡುತ್ತಲೇ ಮೆಲ್ಲಗೆ ಹೆಜ್ಜೆ ಹಾಕುತ್ತಾ ಮುಂದೆ ಸಾಗಿದ ರಾಹುಲ್ ಗಾಂಧಿ, ಎಲ್ಲರೂ ನಿಂತಿದ್ದ ಸ್ಥಳ ತಲುಪಿ, ಅಲ್ಲಿದ್ದ ಮುಖಂಡರ ಹಸ್ತಲಾಘವ ಮಾಡಿ, ಅಲ್ಲೇ ಏಳೆಂಟು ಹೆಜ್ಜೆ ಮುಂದೆ ಹಾಕಿದರು. ತಮ್ಮನ್ನು ಹಿಂಬಾಲಿಸಿ ಬಂದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರೊಟ್ಟಿಗೆ ಕೆಲ ಕ್ಷಣ ಸಮಾಲೋಚಿಸಿದರು.

ಬಳಿಕ ಡಿ.ಕೆ.ಶಿವಕುಮಾರ್ ಅವರ ಬಿಟ್ಟು, ಎಂಟತ್ತು ಹೆಜ್ಜೆ ಮುಂದೆ ಸಿದ್ದರಾಮಯ್ಯನವರ ಕರೆದೊಯ್ದು ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಆ ವೇಳೆ ಸಿದ್ದರಾಮಯ್ಯ ಯಾವುದೋ ಪ್ರಮುಖ ವಿಚಾರವನ್ನು ಪ್ರಸ್ತಾಪಿಸುತ್ತಿರುವಂತಿತ್ತು. ಜೊತೆಗೆ ಏನನ್ನೋ ಸಮರ್ಥಿಸಿಕೊಳ್ಳುವಂತಿತ್ತು. ಆ ವೇಳೆ ಸಿದ್ದರಾಮಯ್ಯ ಅವರ ಬೆನ್ನ ಮೇಲೆ ಕೈ ಹಾಕಿ ರಾಹುಲ್ ಗಾಂಧಿ, ಏನೋ ಪ್ರತಿಕ್ರಿಯೆ ನೀಡುವಂತಿತ್ತು. ಇತ್ತ ಡಿ.ಕೆ.ಶಿವಕುಮಾರ್ ಒಬ್ಬರೇ ಹಿಂದಕ್ಕೆ ಕೈಕಟ್ಟಿಕೊಂಡು ನಿಂತು, ಸಿದ್ದರಾಮಯ್ಯ ಹಾಗೂ ರಾಹುಲ್ ಗಾಂಧಿ ಮಾತುಕತೆಯನ್ನು ಕುತೂಹಲ ಹಾಗೂ ಅಚ್ಚರಿಯಿಂದ ವೀಕ್ಷಿಸುತ್ತಿದ್ದರು. ರಾಹುಲ್ ಗಾಂಧಿಯೊಂದಿಗೆ ಮಾತುಕತೆ ಬಳಿಕ ಸಿದ್ದರಾಮಯ್ಯ ಅಲ್ಲಿಂದ ನೇರವಾಗಿ ಬೆಂಗಳೂರಿಗೆ ಹಾರಲು ಸಿದ್ಧವಾಗಿದ್ದ ವಿಶೇಷ ವಿಮಾನವನ್ನೇರಿ ಕುಳಿತರು.

ಬಳಿಕ ರಾಹುಲ್ ಗಾಂಧಿ, ಕಾದಿದ್ದ ಡಿ.ಕೆ.ಶಿವಕುಮಾರ್ ಅವರೊಂದಿಗೂ ಕೆಲ ನಿಮಿಷಗಳ ಕಾಲ ಪ್ರತ್ಯೇಕ ಗೌಪ್ಯ ಮಾತುಕತೆ ನಡೆಸಿದರು. ಐದಾರು ನಿಮಿಷಗಳ ಕಾಲ ನಡೆದ ಈ ಮಾತುಕತೆ ತೀವ್ರ ಕುತೂಹಲ ಮೂಡಿಸಿತು. ಡಿ.ಕೆ.ಶಿವಕುಮಾರ್ ಅವರ ಹಾವಭಾವ, ಮಾತಿನ ವರಸೆ ಗಮನಿಸಿದರೆ, ಬಹುಶಃ ತಮಗೆ ನಾಯಕತ್ವ ಕಲ್ಪಿಸುವ ವಿಚಾರವನ್ನು ಬಲವಾಗಿ ಪ್ರಸ್ತಾಪಿಸಿದಂತಿತ್ತು. ಜೊತೆಗೆ ಅದನ್ನು ರಾಹುಲ್ ಗಾಂಧಿಗೆ ಪೂರ್ಣ ಮನದಟ್ಟು ಮಾಡಿಕೊಡುವ ವರಸೆಯಲ್ಲಿತ್ತು.

ಅಂತಿಮವಾಗಿ ರಾಹುಲ್ ಗಾಂಧಿ ಅವರು ಡಿ.ಕೆ.ಶಿವಕುಮಾರ್‌ಗೆ ಏನೋ ಸಂದೇಶ ರವಾನಿಸಿದಂತೆ ತೋರುತ್ತಿತ್ತು. ನಂತರ ರಾಹುಲ್ ಗಾಂಧಿ, ತಮಗಾಗಿ ಕಾದಿದ್ದ ವಿಶೇಷ ವಿಮಾನವನ್ನೇರಿ ದೆಹಲಿಗೆ ತೆರಳಿದರು.

ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಕರೆದು ಯಾವ ಯಾವ ವಿಚಾರವಾಗಿ ಮಾತನಾಡಿರಬಹುದು ಎಂಬುದು ತೀವ್ರ ಕುತೂಹಲ ಮೂಡಿಸಿದೆ. ಡಿ.ಕೆ.ಶಿವಕುಮಾರ್ ಅವರು ಅಧಿಕಾರ ಹಸ್ತಾಂತರ ಸಂಬಂಧ ದೆಹಲಿಯಲ್ಲಿ ಅಂತಿಮ ಮಾತುಕತೆಗೆ ಸಮಯಾವಕಾಶ ಕೇಳಿರಬಹುದು. ಸಿದ್ದರಾಮಯ್ಯನವರು ಸಂಪುಟ ಪುನಾರಚನೆ, ಬಜೆಟ್ ಮಂಡನೆ ವಿಚಾರ ಪ್ರಸ್ತಾಪಿಸಿರಬಹುದು ಎಂದು ಅಲ್ಲಿ ಕಾದಿದ್ದವರು ಮಾತ್ರವಲ್ಲ ಈ ದೃಶ್ಯ ನೋಡಿದವರು ಭಾವಿಸಿದ್ದಾರೆ. ಆದರೆ ಇಬ್ಬರಲ್ಲಿ ಯಾರೊಬ್ಬರೂ ರಾಹುಲ್ ಜೊತೆಗಿನ ಮಾತುಕತೆ ಬಗ್ಗೆ ತುಟಿಬಿಚ್ಚಿಲ್ಲ. ರಾಜ್ಯ ರಾಜಕೀಯದ ಕುರ್ಚಿ ಕದನ ಪ್ರಸಂಗದಲ್ಲಿ ಮೈಸೂರು ವಿಮಾನ ನಿಲ್ದಾಣ ಇಂದು ಒಂದು ಅಂಕಣವಾಗಿ ಸೇರ್ಪಡೆಯಾಯಿತು. ಇದನ್ನೆಲ್ಲಾ ನೋಡಿದರೆ ಸಂಕ್ರಾಂತಿ ನಂತರದ ಕ್ರಾಂತಿಗೆ ಕಿಚ್ಚು ಹೊತ್ತಿರುವುದಂತೂ ಸತ್ಯ.

ಸ್ಥಳೀಯ ಸಂಸ್ಥೆ ಚುನಾವಣೆಗೆ ಸರ್ಕಾರ ಸಿದ್ಧ

ಮೈಸೂರು: ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯ್ತಿ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರ ಸಿದ್ಧವಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕೂಟದಿಂದ ಕಾಂಗ್ರೆಸ್‌ಗೆ ಹಿನ್ನಡೆ ಆಗುವುದಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಆ ಎರಡು ಪಕ್ಷಗಳು ಒಂದಾಗಿ ಚುನಾವಣೆ ನಡೆಸಿದರೂ ನಮಗೆ ಯಾವುದೇ ಸಮಸ್ಯೆ ಇಲ್ಲ. ಇರುವುದು ಎರಡೇ, ಒಂದು ಕಾಂಗ್ರೆಸ್ ಮತ ಹಾಗೂ ಮತ್ತೊಂದು ಕಾಂಗ್ರೆಸ್ ವಿರೋಧಿ ಮತ ಎಂದರು.

ಇಲ್ಲಿ ಜೆಡಿಎಸ್ ಮತ ಬೇರೆ, ಬಿಜೆಪಿ ಮತ ಬೇರೆ ಎಂಬುದಿಲ್ಲ, ಎರಡು ಪಕ್ಷದ ಮತಗಳು ಒಂದೇ ಅಭ್ಯರ್ಥಿಗೆ ಬಿದ್ದರೆ ಕಾಂಗ್ರೆಸ್‌ಗೆ ಸೋಲಾಗುತ್ತದೆ ಎಂಬುದು ತಪ್ಪು ಅಭಿಪ್ರಾಯ ಎಂದು ತಿಳಿಸಿದರು.

ರಾಹುಲ್ ಗಾಂಧಿಗೆ ಮೈಸೂರು ಅರಮನೆಯ ಸ್ಮರಣಿಕೆ ಉಡುಗೊರೆ



ಮೈಸೂರು: ಮೈಸೂರಿಗೆ ಆಗಮಿಸಿದ್ದ ರಾಹುಲ್ ಗಾಂಧಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು. ಇದೇ ವೇಳೆ ಅವರಿಗೆ ಮೈಸೂರು ಅರಮನೆಯ ಪ್ರತಿರೂಪ ಉಡುಗೊರೆಯಾಗಿ ನೀಡಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್, ಆನೆ ಪ್ರತಿರೂಪ ವನ್ನು ಉಡುಗೊರೆ ನೀಡಿದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೂಗುಚ್ಛ ಮಾತ್ರ ನೀಡಿ, ಸ್ವಾಗತಿಸಿದರು. ರಾಹುಲ್ ಗಾಂಧಿ ತಮಿಳುನಾಡಿಗೆ ಪ್ರಯಾಣ ಬೆಳೆಸಿದ ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಜೊತೆಯಾಗಿ ವಿಮಾನ ನಿಲ್ದಾಣದಿಂದ ಹೊರಗೆ ಬಂದರು. ಸಿದ್ದರಾಮಯ್ಯ ಅವರು ಪೊಲೀಸರಿಂದ ಗೌರವ ವಂದನೆ ಸ್ವೀಕರಿಸುವುದನ್ನು ಡಿ.ಕೆ.ಶಿವಕುಮಾರ್ ತದೇಕ ಚಿತ್ತದಿಂದ ವೀಕ್ಷಿಸಿದರು.

ಸಿದ್ದರಾಮಯ್ಯ ಅವರು ಪತ್ರಕರ್ತರೊಡನೆ ಮಾತನಾಡಲು ಪ್ರೆಸ್ ಗ್ಯಾಲರಿಗೆ ಬರುತ್ತಿದ್ದಂತೆ, ಡಿ.ಕೆ.ಶಿವಕುಮಾರ್ ಅವರು ಅಲ್ಲಿಂದ ನಿರ್ಗಮಿಸಿದರು. ಸಿದ್ದರಾಮಯ್ಯ ಟಿ.ಕೆ.ಬಡಾವಣೆಯ ನಿವಾಸಕ್ಕೆ, ಡಿ.ಕೆ.ಶಿವಕುಮಾರ್ ರ‍್ಯಾಡಿಸನ್ ಬ್ಲೂ ಹೋಟೆಲ್‌ಗೆ ತೆರಳಿದರು. ತಮಿಳುನಾಡಿನ ಗುಡಲೂರಿನ ಕಾರ್ಯಕ್ರಮ ಮುಗಿಸಿ ರಾಹುಲ್ ಗಾಂಧಿ ಅವರು ಹೆಲಿಕಾಪ್ಟರ್‌ನಲ್ಲಿ ಮೈಸೂರು ವಿಮಾನ ನಿಲ್ದಾಣಕ್ಕೆ ವಾಪಸ್ಸಾದಾಗ ಅವರನ್ನು ಬೀಳ್ಕೊಟ್ಟ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಪ್ರತ್ಯೇಕವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಮನರೇಗಾ ಕಾಯ್ದೆ ಪುನಃ ಸ್ಥಾಪನೆಗೆ ನಮ್ಮ ಹೋರಾಟ ಮುಂದುವರೆಯುತ್ತೆ...

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಬೆಂಗಳೂರು ಅರಮನೆ ಆವರಣದಲ್ಲಿ ಮನರೇಗಾ ಬಚಾವ್ ಸಂಗ್ರಾಮ ಪೂರ್ವಸಿದ್ಧತಾ ಸಭೆ ● ಕೃಷಿ ಕಾಯ್ದೆ ರದ್ದಿಗೆ ರೈತರ ಹೋರಾಟ ಮಾದರಿ ನಮ್ಮ ಹೋರಾಟ: ಸಿಎಂ


ಬೆಂಗಳೂರು ಅರಮನೆ ಮೈದಾನದಲ್ಲಿ ಮನರೇಗಾ ಬಚಾವೋ ಸಂಗ್ರಾಮದ ಪೂರ್ವಸಿದ್ಧತಾ ಸಭೆ ಮಂಗಳವಾರ ನಡೆಯಿತು.

ಬೆಂಗಳೂರು, ಜ.13(ಕೆಎಂಶಿ)– ವಿಬಿ–ಜಿ–ರಾಮ್–ಜಿ ಕಾನೂನು ರದ್ದಾಗಿ ಮನರೇಗಾ ಕಾಯ್ದೆ ಪುನಃ ಸ್ಥಾಪನೆ ಆಗುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಬಚಾವ್ ಸಂಗ್ರಾಮ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಆಂದೋಲನ ನಡೆಸಲಾಗುವುದು. ಕೃಷಿ ಕಾಯ್ದೆ ರದ್ದಿಗೆ ರೈತರ ಹೋರಾಟ ಮಾದರಿ ನಾವೂ ಹೋರಾಟ ನಡೆಸಬೇಕು ಎಂದರು.

ಕಳೆದ ತಿಂಗಳ ಎಐಸಿಸಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮನರೇಗಾ ಯೋಜನೆ ರದ್ದು ಮಾಡಿದ್ದನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿದೆ. ಕೇಂದ್ರ ಸರ್ಕಾರ ತಂದಿರುವ ನೂತನ ವಿಬಿ–ಜಿ–ರಾಮ್–ಜಿ ಕಾಯ್ದೆ ರೂಪಿಸಿರುವುದನ್ನು ಗಮನಿಸಿದರೆ ಎನ್‌ಡಿಎ ಸರ್ಕಾರಕ್ಕೆ ಮಹಾತ್ಮ ಗಾಂಧಿ ಹೆಸರೆಂದರೆ ಅಲರ್ಜಿ ಎಂಬುದನ್ನು ತೋರುತ್ತದೆ. ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಗ್ರಾಮೀಣ ಪ್ರದೇಶದ ಬಡವರಿಗೆ ಕೆಲಸದ ಹಕ್ಕು ನೀಡಲೆಂದು ಮನರೇಗಾ ಕಾಯ್ದೆ ಜಾರಿ ಮೂಲಕ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿದರು.

ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಖಾತ್ರಿ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು, ಅರಣ್ಯ ವಾಸಿಗಳ ಹಕ್ಕು ಕಾಯ್ದೆಗಳನ್ನು ರೂಪಿಸಿದರು, 20 ವರ್ಷಗಳಿಂದ ಜಾರಿಯಲ್ಲಿದ್ದ ಮನರೇಗಾ ಯೋಜನೆಯಡಿ ದೇಶದ 12.16 ಕೋಟಿ ಕಾರ್ಮಿಕರು ಉದ್ಯೋಗ ಪಡೆದಿದ್ದರು. ಇವರಲ್ಲಿ 6.21 ಕೋಟಿ ಮಹಿಳೆಯರಿದ್ದರು.

ಮನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದ ಕಾರ್ಮಿಕರು ತಮ್ಮ ಊರಿನಲ್ಲಿ, ತಮ್ಮದೇ ಜಮೀನಿನಲ್ಲಿ ಕೆಲಸ ಮಾಡಬಹುದಿತ್ತು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವಿಬಿ–ಜಿ–ರಾಮ್–ಜಿ ಕಾಯ್ದೆ ಜಾರಿಗೆ ತರುವ ಮೂಲಕ ಮಹಾತ್ಮಾ ಗಾಂಧಿಯನ್ನು ಮತ್ತೊಮ್ಮೆ ಕೊಲ್ಲುತ್ತಿದ್ದಾರೆ.

ಕೇಂದ್ರ ಸರ್ಕಾರದ ಅಧಿಸೂಚನೆ ಅನ್ವಯ ಕೆಲಸದ ಪ್ರದೇಶ ನಿಗದಿ ಮಾಡಲಾಗುತ್ತದೆ. ರಾಜ್ಯ ಸರ್ಕಾರಗಳು ಶೇ.40 ವೆಚ್ಚ ಭರಿಸಬೇಕಿದೆ, ಅಂದರೆ, 2,500 ಕೋಟಿ ರೂ. ನೀಡಬೇಕಾಗುತ್ತದೆ. ಇದರ ವಿರುದ್ಧವಾಗಿ ನರೇಗಾ ಬಚಾವ್ ಆಂದೋಲನ ರೂಪಿಸಲಾಗಿದ್ದು, ಇದು ಜನಾಂದೋಲನವಾಗಿ ಪರಿವರ್ತನೆ ಆಗಬೇಕು ಎಂದರು.

ಮೂರ್‍ನಾಲ್ಕು ತಿಂಗಳಲ್ಲಿ ಜಿಪಂ, ತಾಪಂ ಸೇರಿ ಎಲ್ಲಾ ಹಂತದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ಬೆಂಗಳೂರು, ಜ.13(ಕೆಎಂಶಿ)– ಜಿಲ್ಲಾ, ತಾಲೂಕು ಪಂಚಾಯತ್ ಸೇರಿದಂತೆ ಎಲ್ಲಾ ಹಂತದ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಮೂರ್‍ನಾಲ್ಕು ತಿಂಗಳಲ್ಲಿ ಚುನಾವಣೆ ನಡೆಸುವುದಾಗಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಘೋಷಿಸಿದ್ದಾರೆ. ಅರಮನೆ ಮೈದಾನದಲ್ಲಿ ನಡೆದ ಮನರೇಗಾ ಬಚಾವೋ ಸಂಗ್ರಾಮದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣೆ ಎದುರಿಸಲು ಸಜ್ಜಾಗಿ ಎಂದರು.

ಸಿದ್ಧರಾಗಿ: ಸಾವಿರಾರು ಕಾರ್ಯಕರ್ತರಿಗೆ ಈ ಚುನಾವಣೆಯಿಂದ ಜನರ ಸೇವೆ ಮಾಡಲು ಅವಕಾಶ ದೊರೆಯುತ್ತದೆ. ನೀವು ಹಗಲು–ರಾತ್ರಿ ಎನ್ನದೆ ಸ್ಥಳೀಯ ಮಟ್ಟದಲ್ಲಿ ಪಕ್ಷ ಸಂಘಟಿಸಿ ಸಿದ್ಧರಾಗಿ.


ದೇವರು ವರ ಹಾಗೂ ಶಾಪ ನೀಡುವುದಿಲ್ಲ ಅವಕಾಶ ನೀಡುತ್ತಾನೆ. ಅದನ್ನು ನಾವು ಯಾವ ರೀತಿ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ಪಕ್ಷಕ್ಕೆ ಶಕ್ತಿ ಸಿಗುತ್ತದೆ.

ಕೋರ್ಟ್ ಆದೇಶದ ತಡೆ: ನ್ಯಾಯಾಲಯದ ಆದೇಶಗಳಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಇದುವರೆಗೆ ಸಾಧ್ಯವಾಗಿರಲಿಲ್ಲ. ಇದೀಗ ಜಿಬಿಎಗೆ ಚುನಾವಣೆ ನಡೆಸಲು ಸುಪ್ರೀಂಕೋರ್ಟ್ ಗಡುವು ನೀಡಿದೆ. ಅದರೊಳಗೆ ಎಲ್ಲಾ ಚುನಾವಣೆ ಮುಗಿಸುತ್ತೇವೆ. ಜಿಲ್ಲಾ ತಾಲೂಕು ಹಾಗೂ ಗ್ರಾಮ ಪಂಚಾಯತ್ ಚುನಾವಣೆ ನಡೆಸಲು ನಮ್ಮ ಸರ್ಕಾರ ಬದ್ಧವಾಗಿದೆ. ಮೀಸಲಾತಿ ಹಾಗೂ ಇತರೆ ತೊಡಕು ನಿವಾರಿಸಿ ಚುನಾವಣೆ ನಡೆಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಿದ್ದೇವೆ. ಸರ್ಕಾರ ಅನುಷ್ಠಾನಕ್ಕೆ ತಂದಿರುವ ಐದು ಗ್ಯಾರಂಟಿಗಳನ್ನೇ ಅಸ್ತ್ರವಾಗಿಟ್ಟುಕೊಂಡು ಚುನಾವಣೆಗೆ ಸಿದ್ಧರಾಗಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಗ್ರಾಮೀಣ ಭಾಗದ ಅಭಿವೃದ್ಧಿಗೆ ನೆರವಾಗಿದ್ದ ಮನರೇಗಾ ಯೋಜನೆಯನ್ನು ಕೇಂದ್ರ ಬಿಜೆಪಿ ಸರ್ಕಾರ ಕೊಂದಿದೆ. ಡಾ.ಮನಮೋಹನ್ ಸಿಂಗ್ ಸರ್ಕಾರದಲ್ಲಿ ಬಡವರಿಗೆ ಉದ್ಯೋಗ ಖಾತರಿ ಹಕ್ಕನ್ನು ನೀಡಿದ್ದರು, ನರೇಗಾ ಉದ್ಯೋಗ ಕಾರ್ಡ್ ಹೊಂದಿರುವವರಿಗೆ ಉದ್ಯೋಗ ನೀಡಬೇಕಿತ್ತು. ಉದ್ಯೋಗ ಸಿಗದಿದ್ದರೆ ಕೂಲಿ ನೀಡಲಾಗುತ್ತಿತ್ತು. ದುರ್ಬಳಕೆ ತಡೆಗಟ್ಟಲು ಬೆರಳಚ್ಚು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲಾಗಿತ್ತು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಡಿಜಿಪಿಗೆ ಬಿಜೆಪಿ ಶಾಸಕ ಶ್ರೀವತ್ಸ ದೂರು ಸಲ್ಲಿಕೆ

ಮೈಸೂರು, ಜ.13(ಪಿಎಂ)– ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಚಿತಾವಣೆಯಿಂದ ಬಳ್ಳಾರಿಯಲ್ಲಿ ಗಲಾಟೆ ನಡೆದು ಕಾಂಗ್ರೆಸ್ ಕಾರ್ಯಕರ್ತರ ಹೆಣ ಬಿದ್ದಿದೆ ಎಂದು ಸುಳ್ಳು ಹೇಳಿಕೆಗಳನ್ನು ನೀಡಿರುವ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರಿಗೆ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ದೂರು ನೀಡಿದ್ದಾರೆ.



ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರಿಗೆ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ದೂರು ಸಲ್ಲಿಸುತ್ತಿರುವುದು.

ಜ.8ರಂದು ಎಂ.ಲಕ್ಷ್ಮಣ್ ಅವರು ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಅಮಿತ್ ಶಾ ಅವರ ಸಂದೇಶ ಹೊತ್ತು ತಂದ ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಬ್ರೈನ್ ಮ್ಯಾಪಿಂಗ್‌ಗೆ ಒಳಪಡಿಸಿದರೆ ಷಡ್ಯಂತ್ರ ಬಯಲಾಗಲಿದೆ. ವಿ.ಸೋಮಣ್ಣ ಅವರು ಬಳ್ಳಾರಿಗೆ ಭೇಟಿ ನೀಡಿ ಜನಾರ್ಧನ ರೆಡ್ಡಿ ಹಾಗೂ ಶ್ರೀರಾಮುಲು ಜೊತೆ ಚರ್ಚೆ ನಡೆಸಿದ ನಂತರ ಗಲಾಟೆಯಾಗಿದೆ. ಕೆಲಸಕ್ಕೆ ಬಾರದ ಮಾತನಾಡಿಕೊಂಡು ಪ್ರೆಸ್‌ಮೀಟ್ ಮಾಡಿಕೊಂಡಿದ್ದರೆ ಯಾವುದೇ ಪ್ರಯೋಜನವಿಲ್ಲ. ಒಂದು ಹೆಣ ಬೀಳಿಸಿ ರಾಜಕಾರಣ ಮಾಡಿ ಎಂಬ ಅಮಿತ್ ಶಾ ಅವರ ಸಂದೇಶವನ್ನು ವಿ.ಸೋಮಣ್ಣ ಅವರು ಜನಾರ್ಧನ ರೆಡ್ಡಿ ಹಾಗೂ ಶ್ರೀರಾಮುಲುಗೆ ತಲುಪಿಸಿದ್ದಾರೆ ಎಂಬಿತ್ಯಾದಿ ಗಂಭೀರ ಆರೋಪಗಳನ್ನು ಪತ್ರಿಕಾಗೋಷ್ಠಿಯಲ್ಲಿ ಲಕ್ಷ್ಮಣ್ ಮಾಡಿದ್ದಾರೆ.

ಯಾವುದೇ ದಾಖಲೆ, ಪುರಾವೆ ಅಥವಾ ಯುಕ್ತವಾದ ಆಧಾರ ಇಲ್ಲದೇ ಲಕ್ಷ್ಮಣ್ ಅವರು ಹೀಗೆ ಹೇಳಿಕೆ ನೀಡಿರುವುದು ಅತ್ಯಂತ ಗಂಭೀರ ಸಂಗತಿಯಾಗಿದೆ. ಈ ರೀತಿಯ ಸುಳ್ಳು ಹೇಳಿಕೆಗಳು, ಸಾರ್ವಜನಿಕರಲ್ಲಿ ಭಯ, ಆತಂಕ ಮತ್ತು ಅಶಾಂತಿ ಉಂಟು ಮಾಡಲಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಾಗೂ ಸಾರ್ವಜನಿಕರ ಮಧ್ಯೆ ಶಾಂತಿ, ಸೌಹಾರ್ದತೆಗೆ ಧಕ್ಕೆಯಾಗುವ ಸಾಧ್ಯತೆಯೂ ಇದೆ ಹಾಗೂ ಉನ್ನತ ಸ್ಥಾನದಲ್ಲಿರುವ ಕೇಂದ್ರ ಸಚಿವರ ವಿರುದ್ಧ ಸುಳ್ಳು ಹರಡಿ ಜನರನ್ನು ಪ್ರಚೋದಿಸುವ ಕೃತ್ಯವಾಗಿದೆ.

ಎಂ.ಲಕ್ಷ್ಮಣ್ ಅವರು ಎಸಗಿರುವ ಈ ಕೃತ್ಯವು ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣವಾಗಿದ್ದು, ಭಾರತೀಯ ನ್ಯಾಯ ಸಂಹಿತ–2023ರ ಕಲಂ 125, 351 ಹಾಗೂ 353ರ ಅಡಿ ಶಿಕ್ಷಾರ್ಹ ಅಪರಾಧವಾಗುತ್ತದೆ. ಆದ ಕಾರಣ ಸುಳ್ಳು ಹಾಗೂ ಪ್ರಚೋದನಕಾರಿ ಹೇಳಿಕೆ ನೀಡುತ್ತಿರುವ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕೆಂದು ಶ್ರೀವತ್ಸ ದೂರಿನಲ್ಲಿ ಒತ್ತಾಯಿಸಿದ್ದಾರೆ. ಎಂಎಲ್‌ಸಿ ಕೇಶವ ಪ್ರಸಾದ್, ಮಾಜಿ ಎಂಎಲ್‌ಸಿ ಸಿದ್ದರಾಜು, ಬಿಜೆಪಿ ರಾಜ್ಯ ಮಾಧ್ಯಮ ಪ್ರಮುಖ ಪ್ರಕಾಶ್ ಈ ವೇಳೆ ಹಾಜರಿದ್ದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವಾಗಲೇ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಆಗಬೇಕು

● ಶಾಸಕ ಜಿ.ಟಿ.ದೇವೇಗೌಡರ ಬಯಕೆ ● ಡಾ.ಯತೀಂದ್ರ, ತಾವು ಕೋರಿದ್ದರಿಂದ ಗ್ರೇಟರ್ ಮೈಸೂರು ಸಾಧ್ಯವಾಯಿತು

ಮೈಸೂರು,ಜ.13(ಎಂಟಿವೈ)– ಸಿದ್ದರಾಮಯ್ಯರವರು ಮುಖ್ಯಮಂತ್ರಿ ಆಗಿರುವಾಗಲೇ ಚಾಮುಂಡೇಶ್ವರಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮಾಡಲು ಹೋರಾಟ ಮಾಡುತ್ತಿದ್ದೇನೆ ಎಂದು ಶಾಸಕ ಜಿ.ಟಿ. ದೇವೇಗೌಡ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಗೋಪಾಲಪುರದಲ್ಲಿ ಮುಳ್ಳೂರು ಕೆರೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದರಿಂದ ಅಭಿವೃದ್ಧಿ ಕೆಲಸ ಮಾಡಲು ಆಗಿರಲಿಲ್ಲ. ಈಗ ಶಾಸಕರ ಅನುದಾನ 25 ಕೋಟಿ ನೀಡಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಕೆಲವು ಬಡಾವಣೆಗಳ ವಿವಿಧ ಸಮಸ್ಯೆಗಳಿದ್ದು, ಮುಖ್ಯಮಂತ್ರಿಗಳನ್ನು ಗ್ರೇಟರ್ ಮೈಸೂರು ಮಾಡಿ ಎಂದು ನಾನು ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಕೇಳಿಕೊಂಡಾಗ 'ಗ್ರೇಟರ್ ಮೈಸೂರು' ಮಾಡಲು ಮುಂದಾದರು. ಕ್ಷೇತ್ರದ ಗ್ರಾಮಗಳ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಡಲು ಸಿದ್ದರಾಮಯ್ಯನವರು ತಿಳಿಸಿದ್ದಾರೆ. ಅಧಿಕಾರಿಗಳಿಗೆ ಪಟ್ಟಿ ಮಾಡಲು ಹೇಳಿದ್ದೇನೆ. ವಿಶೇಷ ಅನುದಾನ ಕೊಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಎಲ್ಲಾ ಕೆಲಸಗಳನ್ನು ಮಾಡೋಣ, ಗ್ರಾಮದ ಅಭಿವೃದ್ಧಿ ವಿಚಾರದಲ್ಲಿ ಪಕ್ಷಭೇದ ಮಾಡಬೇಡಿ, ನಾನು ಮಾಡುವುದಿಲ್ಲ ಎಂದರು.

ಇದೇ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಮುಳ್ಳೂರು ಕೆರೆ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆಯಿಂದ 2 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಬಿಡುಗಡೆ ಮಾಡಿಕೊಟ್ಟಿದ್ದಾರೆ. ರಾಜಕಾಲುವೆ ಅಭಿವೃದ್ಧಿಗೂ ಹಣ ಬಿಡುಗಡೆ ಮಾಡಿಸಿಕೊಡುತ್ತೇನೆ. ಚಾಮುಂಡೇಶ್ವರಿ ಕ್ಷೇತ್ರ ಎಂದರೆ ಸಿದ್ದರಾಮಯ್ಯರವರಿಗೆ ವಿಶೇಷ ಪ್ರೀತಿ ಇದೆ. ಕ್ಷೇತ್ರದ ಮಾತ್ರವಲ್ಲ ನಾಯಕರ ವೈಯಕ್ತಿಕ ಕೆಲಸಗಳನ್ನು ಮುಖ್ಯಮಂತ್ರಿಗಳು ಮಾಡಿಕೊಡುತ್ತಾರೆ. ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವುದಾಗಿ ಮುಖ್ಯಮಂತ್ರಿಗಳು ಜಿ.ಟಿ.ದೇವೇಗೌಡರಿಗೆ ತಿಳಿಸಿದ್ದಾರೆ ಎಂದರು.



ಗೋಪಾಲಪುರದಲ್ಲಿ ಮುಳ್ಳೂರು ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಗುದ್ದಲಿಪೂಜೆ ನೆರವೇರಿಸಿದರು.

ಸಮಾರಂಭದಲ್ಲಿ ಜಿ.ಪಂ.ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿ.ಪಂ. ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ತಾಪಂ ಮಾಜಿ ಸದಸ್ಯ ಜಿ.ಕೆ.ಬಸವಣ್ಣ, ಮೈಮುಲ್ ನಿರ್ದೇಶಕ ಬಿ.ಗುರುಸ್ವಾಮಿ, ಗ್ರಾ.ಪಂ. ಅಧ್ಯಕ್ಷ ರಾಮಲಿಂಗಾಚಾರಿ, ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎನ್.ವಿಜಯ್, ಪ್ರದೀಪ್‌ಕುಮಾರ್, ನಾಗರಾಜ್, ಮುಖಂಡರಾದ ಅಹಿಂದ ಜವರಪ್ಪ ಎಂ.ಟಿ.ರವಿಕುಮಾರ್, ಮಾರ್ಬಳ್ಳಿ ಕುಮಾರ್, ಸಿ.ಎಂ.ಸಿದ್ದರಾಮೇಗೌಡ, ಕೆಂಚಪ್ಪ ರಾಜೇಗೌಡ, ಕೃಷ್ಣಮೂರ್ತಿ, ಸಿದ್ದರಾಮೇಗೌಡ, ಹರೀಶ್‌ಮೊಗಣ್ಣ, ಜಯರಾಮೇಗೌಡ, ಸ್ವಾಮಿಗೌಡ, ಅಂದಾನಿ, ದೇವರಾಜು, ರವಿಶಂಕರ್, ಜಿ.ಎಸ್.ಬಸವರಾಜು ಇದ್ದರು.

ಪತ್ನಿ ಮಕ್ಕಳಿಂದ ಕಿರುಕುಳ; ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಳ್ಳದ್ದಕ್ಕೆ ಬೇಸರ

ಮೈಸೂರು, ಜ.13(ಜಿಎ)–ತಮ್ಮ ಪತ್ನಿ, ಇಬ್ಬರು ಮಕ್ಕಳು ತಮ್ಮ ಮೇಲೆ ನಿರಂತರವಾಗಿ ಮಾರಣಾಂತಿಕ ಹಲ್ಲೆ ನಡೆಸುತ್ತಿದ್ದು, ರಕ್ಷಣೆಗಾಗಿ ಪೊಲೀಸರಿಗೆ ದೂರು ನೀಡುತ್ತಲೇ ಬಂದಿದ್ದರೂ ಸ್ಪಂದಿಸುತ್ತಿಲ್ಲ ಎಂದು ಶ್ರೀರಂಗಪಟ್ಟಣ ತಾಲೂಕು ಅನಗನಹಳ್ಳಿ ಗ್ರಾಮದ ಎಸ್.ಶ್ರೀಧರ್ ದೂರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ತಮ್ಮ ತಾಯಿ ನೆರವು ಹಾಗೂ ತಮ್ಮ ಶ್ರಮದ ಹಣದಿಂದ ಇನ್ಫೋಸಿಸ್ ಬಳಿ ಸುಮಾರು 7 ಎಕರೆ ಜಮೀನು ಖರೀದಿಸಿ ತೋಟದ ಮನೆ ಮಾಡಿಕೊಂಡಿದ್ದೇವೆ. ಈ ಹಿಂದೆ ತಮ್ಮ ಪತ್ನಿ ತಮ್ಮ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಠಾಣೆಗೆ ದೂರು ನೀಡಿ ಕಿರುಕುಳ ನೀಡಿದರು. ತಮ್ಮ ಸಹೋದರಿ ಹಾಗೂ ಇನ್ನಿತರ ಬಂಧುಗಳ ವಿರುದ್ಧವೂ ದೂರು ದಾಖಲಿಸಿ ಮಾನಸಿಕ ಹಿಂಸೆ ಕೊಟ್ಟರು. ಈ ಪ್ರಕರಣವನ್ನು ನ್ಯಾಯಾಲಯ ತಳ್ಳಿ ಹಾಕಿತ್ತು. ಈಗ ಮತ್ತೊಂದು ನ್ಯಾಯಾಲಯದಲ್ಲಿ ತೀರ್ಪು ಬಾಕಿ ಇದೆ. ಈ ನಡುವೇ ಪತ್ನಿ ಹಾಗೂ ಮಕ್ಕಳು ಜಮೀನಿಗೆ ಬಂದು ಪದೇ ಪದೆ ಹಲ್ಲೆ ಮಾಡಿ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಇದರಿಂದ ರಕ್ಷಣೆ ನೀಡಬೇಕೆಂದು ತಾವು ದೂರು ನೀಡಿ ಕೋರುತ್ತಿದ್ದರೂ ಕೆಆರ್‌ಎಸ್ ಠಾಣೆ ಪೊಲೀಸರು ರಕ್ಷಣೆ ನೀಡುತ್ತಿಲ್ಲ. ಹೀಗಾಗಿ ಎಸ್‌ಪಿ ಹಾಗೂ ಸಂಬಂಧಪಟ್ಟ ಇತರ ಅಧಿಕಾರಿಗಳು ಗಮನಹರಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ರುಕ್ಮಿಣಿ, ನಾಗರಾಜು ಉಪಸ್ಥಿತರಿದ್ದರು.

ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಜ.13– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗ ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗ ನಡೆಸಲಿರುವ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಆಯೋಜಿಸಲಾಗಿದ್ದು, ಆಸಕ್ತರು ಜ.17ರ ಬೆಳಗ್ಗೆ 10ರಿಂದ ಸಂಜೆ 4.30ರೊಳಗೆ ಹೆಸರು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 0821–2515944 ಸಂಖ್ಯೆಯನ್ನು ಸಂಪರ್ಕಿಸುವಂತೆ ಕರಾಮುವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಶ್ರೀ ಮಹಾಲಕ್ಷ್ಮಿ ಸ್ವೀಟ್‌ನ ಮಳಿಗೆ ಶುಭಾರಂಭ



ಮೈಸೂರಿನ ಪ್ರತಿಷ್ಠಿತ ಶ್ರೀ ಮಹಾಲಕ್ಷ್ಮಿ ಸ್ವೀಟ್‌ನ 48ನೇ ಮಳಿಗೆ ಶಿವಮೊಗ್ಗದ ನೆಹರು ರಸ್ತೆಯಲ್ಲಿ ಶುಭಾರಂಭಗೊಂಡಿದ್ದು, ಸ್ಥಳೀಯ ಶಾಸಕ ಎಸ್.ಎನ್.ಚನ್ನಬಸಪ್ಪ ಹಾಗೂ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಉದ್ಘಾಟನೆ ನೆರವೇರಿಸಿದರು. ಈ ವೇಳೆ ಶ್ರೀ ಮಹಾಲಕ್ಷ್ಮಿ ಸ್ವೀಟ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಶಿವಕುಮಾರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿ.ಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜನವರಿ 20ರೊಳಗೆ ಇಲಾಖಾ ವೆಬ್‌ಸೈಟ್ https://bcwd.karnataka.gov.inಮೂಲಕ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 8050770004 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ...



ಮೈಸೂರು ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಬಸವ ಸಮಿತಿಯ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಬಿಡುಗಡೆ ಗೊಳಿಸಿದರು. ಈ ವೇಳೆ ಸಮಿತಿ ಅಧ್ಯಕ್ಷ ಹೆಚ್.ಆರ್.ವೃಷಭೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಎಂ.ಪುಟ್ಟಣ್ಣ, ಉಪಾಧ್ಯಕ್ಷ ಹೆಚ್.ಪಿ.ನಂಜುಂಡಸ್ವಾಮಿ, ಖಜಾಂಚಿ ಕೆಂಡಗಣ್ಣಸ್ವಾಮಿ, ನಿರ್ದೇಶಕರಾದ ಅನಿಲ್‌ರಾಜ್, ಹೆಚ್.ಬಿ.ಓಂಕಾರಯ್ಯ, ಕೆ.ಸಿ.ಶಿವಕುಮಾರಸ್ವಾಮಿ, ರಾಜೇಂದ್ರಕುಮಾರ್, ಜಯಶೇಖರ ಸ್ವಾಮಿ, ಅಭಿಷೇಕ್, ಪ್ರಕಾಶ್, ಸತೀಶ್, ನಂದೀಶ್, ಜಯಶೇಖರ್, ಗುರುಪಾದಸ್ವಾಮಿ, ಕರುಣಾಕರಮೂರ್ತಿ, ಆನಂದ್ ಇನ್ನಿತರರಿದ್ದರು.

ಸುಜಾತಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಜಿ. ಮಂಜುನಾಥ ಅವರ ಮಾರ್ಗದರ್ಶನದಲ್ಲಿ ಬಿ.ಸುಜಾತ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಎಚ್.ಎಸ್. ಗೋಪಾಲ ರಾವ್ ಅವರ ಸಾಹಿತ್ಯ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಿಜೆಪಿ ಕಾರ್ಯಕರ್ತೆ ಮೇಲಿನ ದೌರ್ಜನ್ಯಕ್ಕೆ ಖಂಡನೆ



ಹೇಮಾ ನಂದೀಶ್

ಮೈಸೂರು,ಜ.13–ಹುಬ್ಬಳ್ಳಿಯ ಬಿಜೆಪಿ ಕಾರ್ಯಕರ್ತೆ ಸುಜಾತ ಜೊತೆ ಪೊಲೀಸರು ನಡೆದುಕೊಂಡಿರುವ ರೀತಿ, ನಾಗರಿಕ ಸಮಾಜವೇ ತಲೆ ತಗ್ಗಿಸುವಂತೆ ಮಾಡಿದೆ ಎಂದು ಬಿಜೆಪಿ ಮುಖಂಡರಾದ ಡಾ.ಹೇಮಾ ನಂದೀಶ್ ಹೇಳಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಗಲಾಟೆ ನಡೆದ ಕಾರಣವನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಕಾರ್ಯಕರ್ತೆ, ಮಾಜಿ ಕಾರ್ಪೊರೇಟರ್ ಸುನಂದ ದೂರು ನೀಡಿದ್ದರು. ಬಳಿಕ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ದಲಿತ ಮಹಿಳೆ ಸುಜಾತರನ್ನು ಬಂಧಿಸಿ, ಠಾಣೆಗೆ ಕರೆತಂದಿದ್ದರು. ಕಾನೂನಿನನ್ವಯ ಅವರನ್ನು ವಿಚಾರಣೆ ನಡೆಸದೆ, ಅವರನ್ನು ವಿವಸ್ತ್ರಗೊಳಿಸಿ, ಅಮಾನವೀಯ ಕೃತ್ಯ ನಡೆಸಿರುವುದು ಅತ್ಯಂತ ಖಂಡನೀಯ ಎಂದಿದ್ದಾರೆ.

ಪೊಲೀಸರ ತಾಲಿಬಾನಿ ಸಂಸ್ಕೃತಿ ಸಮಾಜಕ್ಕೆ ಕಳಂಕ ತಂದಿದೆ. ಇಂತಹ ದಬ್ಬಾಳಿಕೆಯಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ನಾಡಿನ ಜನತೆ ತಕ್ಕ ಪಾಠ ಕಲಿಸಲಿದ್ದಾರೆ. ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವ ಮೂಲಕ ನೊಂದ ಮಹಿಳೆಗೆ ನ್ಯಾಯ ದೊರಕಿಸಿಕೊಡುವಂತೆ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ವಿವಿಧ ಕ್ಷೇತ್ರದ ಸಾಧಕರಿಗೆ ಅನಿಕೇತನ ಪ್ರಶಸ್ತಿ ಪ್ರದಾನ

ಮೈಸೂರು, ಜ.13(ಜಿಎ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಅನಿಕೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷೆ ರತ್ನಾ ಹಾಲಪ್ಪ ಗೌಡ, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಹಾಗೂ ವಿಶ್ರಾಂತ ಪ್ರಾಂಶುಪಾಲ ವಿಜಯದಾಸ್ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಸಂಧ್ಯಾ ಸುರಕ್ಷ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್.ನಟರಾಜ ಜೋಯ್ಸ್ ಅನಿಕೇತನ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಅನಿಕೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕವಿ ಕುವೆಂಪು ಕೊಡುಗೆ ಅಪಾರ. ಅವರ ಸ್ಮರಣೆಯೊಂದಿಗೆ ವಿವಿಧ ಕ್ಷೇತ್ರದ ಸಾಧಕರಿಗೆ ಅನಿಕೇತನ ಪ್ರಶಸ್ತಿ ಪ್ರದಾನ ಮಾಡುತ್ತಿರುವ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ ಎಂದರು.

ಕುವೆಂಪು ಅವರು ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಲಿಲ್ಲದಿದ್ದರೆ, ಅವರು ಕುಪ್ಪಳ್ಳಿಯಲ್ಲಿಯೇ ಉಳಿದುಕೊಳ್ಳಬೇಕಾಗಿತ್ತು. ಆದರೆ, ಅವರು ರಾಮಕೃಷ್ಣ ಆಶ್ರಮಕ್ಕೆ ಬಂದು ಸಾಕಷ್ಟು ಬದಲಾವಣೆ ಆದರು. ಪ್ರೌಢಶಾಲೆಯಲ್ಲಿಯೇ ಅವರು ಬರೆಯಲು ಆರಂಭಿಸಿ, ಮಕ್ಕಳ ಸಾಹಿತ್ಯದಿಂದ ಮಹಾಕಾವ್ಯದವರೆಗೂ ಬರೆದರು. ಇಂಗ್ಲಿಷ್‌ನಲ್ಲಿ ಸಾಹಿತ್ಯ ಆರಂಭಿಸಿದ ಅವರು ಅದನ್ನು ಮುಂದುವರೆಸಿದರೆ, ನೋಬೆಲ್ ಪ್ರಶಸ್ತಿ ಮೊದಲು ಕುವೆಂಪು ಅವರಿಗೆ ದೊರೆಯುತಿತ್ತು ಎಂದು ತಿಳಿಸಿದರು.

ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಕುವೆಂಪು ಅವರನ್ನು ಇಪ್ಪತ್ತಕ್ಕೂ ಹೆಚ್ಚು ಬಾರಿ ಭೇಟಿ ಮಾಡಿದ್ದೇನೆ. ಒಮ್ಮೆ ಆಯುರ್ವೇದ ಪರಿಪೂರ್ಣವಾಯಿತು ಎಂದು ತಿಳಿಸಿದ್ದಾಗ ಅವರು ಪರಿಪೂರ್ಣ ಎಂಬ ಪದ ಬಳಸಬೇಡಿ ಪರಿಪೂರ್ಣ ಎಂದರೆ, ಮುಕ್ತಾಯ ಎಂಬ ಅರ್ಥ ಬರುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೂ ಪರಿಪೂರ್ಣವಲ್ಲ ಎಲ್ಲದರಲ್ಲೂ ನಿರಂತರ ಅಧ್ಯಯನ ನಡೆಯುತ್ತಿರಬೇಕು ಎಂದು ಹೇಳಿದ್ದಾಗಿ ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಸಮಾಜಸೇವಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಹಕಾರ ಸಂಘದ ಅಧ್ಯಕ್ಷ ಟಿ.ಸುರೇಶ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ದೇಶ – ವಿದೇಶ

ರಸ್ತೆಯಲ್ಲಿ ಸಿಕ್ಕ ಚಿನ್ನಾಭರಣವನ್ನು ಪೊಲೀಸರಿಗೊಪ್ಪಿಸಿದ ಸ್ವಚ್ಛತಾ ಕಾರ್ಯಕರ್ತೆ



ಚೆನ್ನೈ: ತಮಿಳುನಾಡಿನ ಚೆನ್ನೈ ಮಹಾನಗರಪಾಲಿಕೆ ನೈರ್ಮಲ್ಯ ಕಾರ್ಯಕರ್ತೆಯೊಬ್ಬರು ರಸ್ತೆಯಲ್ಲಿ ಸಿಕ್ಕ 45 ಲಕ್ಷರೂ ಮೌಲ್ಯದ ಚಿನ್ನಾಭರಣವನ್ನು ಪೊಲೀಸ್ ಠಾಣೆಗೆ ಒಪ್ಪಿಸಿರುವುದಾಗಿ ವರದಿಯಾಗಿದೆ. ಪಾಲಿಕೆಯ ನೈರ್ಮಲ್ಯ ಕಾರ್ಯಕರ್ತೆ, ಟ್ರಿಪ್ಲಿಕೇನ್ ನಿವಾಸಿ ಎಸ್.ಪದ್ಮಾ(45) ಅವರು ಕೆಲಸ ಮುಗಿಸಿ ಸ್ವಚ್ಛತಾ ಪರಿಕರಗಳನ್ನು ಮೇಲಾಧಿಕಾರಿಗಳಿಗೆ ಹಿಂತಿರುಗಿಸಲು ಹೋಗುವಾಗ ಟಿ.ನಗರದ ಮುಪಾತು ಅಮ್ಮನ್ ಕೊಯಿಲ್ ಬಳಿ ಆಕಸ್ಮಿಕವಾಗಿ ಒಂದು ಬ್ಯಾಗ್ ನೋಡಿದ್ದಾರೆ. ತಕ್ಷಣ ಆ ಬ್ಯಾಗ್ ಅನ್ನು ತೆರೆದು ನೋಡಿದಾಗ ಅದರಲ್ಲಿ ಚಿನ್ನಾಭರಣಗಳು ಪತ್ತೆಯಾಗಿವೆ. ಕೂಡಲೇ ಈ ವಿಚಾರವನ್ನು ತಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ ಬಳಿಕ ಅದನ್ನು ಪಾಂಡಿ ಬಜಾರ್ ಪೊಲೀಸರಿಗೆ ಒಪ್ಪಿಸಿದ್ದಾರೆ. ಟಿ.ನಗರದಲ್ಲಿ ಸ್ನೇಹಿತನೊಂದಿಗೆ ಮಾತನಾಡುತ್ತಿದ್ದ ಆಭರಣ ವ್ಯಾಪಾರಿಯೊಬ್ಬರು ತನ್ನ ಬ್ಯಾಗ್ ಅನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು ಎನ್ನಲಾಗಿದೆ. ಪೊಲೀಸರು ಮಾಲೀಕರನ್ನು ಹುಡುಕಿ ಅವರ ಆಭರಣಗಳನ್ನು ಹಿಂತಿರುಗಿಸಿದ್ದಾರೆ. ಲಕ್ಷಾಂತರ ರೂ. ಬೆಲೆಬಾಳುವ ಚಿನ್ನಾಭರಣ ಸಿಕ್ಕರೂ, ಅದನ್ನು ಪ್ರಾಮಾಣಿಕವಾಗಿ ಪೊಲೀಸರಿಗೆ ಒಪ್ಪಿಸಿದ ಪದ್ಮಾ ಅವರಿಗೆ ಅಭಿನಂದನೆ ಮಹಾಪೂರವೇ ಹರಿದುಬಂದಿದೆ.

ರಷ್ಯಾ ಪರಮಾಣು ಸಾಮರ್ಥ್ಯದ ಕ್ಷಿಪಣಿ ದಾಳಿ; ಅಮೆರಿಕಾ ಖಂಡನೆ



ವಾಷಿಂಗ್ಟನ್: ಇತ್ತೀಚೆಗೆ ರಷ್ಯಾ ಉಕ್ರೇನ್ ಹಾಗೂ ನ್ಯಾಟೋ ಸದಸ್ಯ ರಾಷ್ಟ್ರ ಪೋಲೆಂಡ್ ಗಡಿ ಸಮೀಪದಲ್ಲೇ ಪರಮಾಣು ಸಾಮರ್ಥ್ಯದ ಓರೆಶ್ನಿಕ್ ಕ್ಷಿಪಣಿಯನ್ನು ಬಳಸಿ ದಾಳಿ ನಡೆಸಿತ್ತು ಎಂದು ವರದಿಯಾಗಿದ್ದು, ರಷ್ಯಾದ ಈ ಕ್ರಮದ ಬಗ್ಗೆ ವಿಶ್ವಸಂಸ್ಥೆಯಲ್ಲಿ ಅಮೆರಿಕಾ ಖಂಡನೆ ವ್ಯಕ್ತಪಡಿಸಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ಅಮೆರಿಕಾದ ಉಪ ರಾಯಭಾರಿ ಟ್ಯಾಮಿ ಬ್ರೂಸ್ ರಷ್ಯಾದ ಈ ದಾಳಿಯು ಅತ್ಯಂತ ಅಪಾಯಕಾರಿ ಮತ್ತು ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಕ್ರಮವಾಗಿದ್ದು, ಯುದ್ಧವನ್ನು ಮತ್ತಷ್ಟು ತೀವ್ರಗೊಳಿಸಲು ಒತ್ತು ನೀಡುವಂತಿದೆ ಎಂದು ಖಂಡಿಸಿದ್ದಾರೆ.

ಅಮೆರಿಕಾ ಅಧ್ಯಕ್ಷ ಟ್ರಂಪ್ ಹಾಗೂ ಯುಎಸ್ ಅಧಿಕಾರಿಗಳು ಉಕ್ರೇನ್ ಹಾಗೂ ಯುರೋಪಿಯನ್ ನಾಯಕರೊಂದಿಗೆ ಉಕ್ರೇನ್ ಶಾಂತಿ ಒಪ್ಪಂದ ಮಾಡಿಕೊಳ್ಳಲು ಮಾತುಕತೆ ನಡೆಸಿದ್ದು, ಇದು ಅಂತಿಮ ಹಂತದಲ್ಲಿರುವಾಗ ರಷ್ಯಾ ಉಕ್ರೇನ್ ಮೇಲೆ ದಾಳಿ ನಡೆಸುತ್ತಿದೆ. ಇದು ಟ್ರಂಪ್ ಅವರು ಯುದ್ಧವನ್ನು ಕೊನೆಗಾಣಿಸಲು ಮಾಡುತ್ತಿರುವ ಪ್ರಯತ್ನಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದ್ದಾರೆ. ಉಕ್ರೇನ್‌ನ ಇಂಧನ ಸೌಲಭ್ಯಗಳು ಮತ್ತು ಇತರ ನಾಗರಿಕ ಮೂಲಸೌಕರ್ಯಗಳ ಮೇಲೆ ರಷ್ಯಾ ನಡೆಸುತ್ತಿರುವ ದಾಳಿಗಳನ್ನು ನಾವು ಖಂಡಿಸುತ್ತೇವೆ ಎಂದಿದ್ದಾರೆ.

ಗೂಗಲ್ ಮ್ಯಾಪ್ ಎಡವಟ್ಟು; ವಿದೇಶಿ ಮಹಿಳೆಗೆ ರ್‍ಯಾಪಿಡೋ ಚಾಲಕಿ ಸಹಾಯ



ಗೋವಾ: ಇಂದಿನ ಡಿಜಿಟಲ್ ಯುಗದಲ್ಲಿ ಏನನ್ನು ಹುಡುಕಬೇಕಿದ್ದರೂ ಗೂಗಲ್ ಮೊರೆ ಹೋಗುವುದು ಸಾಮಾನ್ಯ. ಹಾಗೆಯೇ ಹೊಸ ವಿಳಾಸಕ್ಕೆ ಹೋಗಬೇಕಾದರೆ ತಕ್ಷಣ ಗೂಗಲ್ ಮ್ಯಾಪ್ ಸಹಾಯ ಪಡೆಯುತ್ತೇವೆ. ಡೆಲಿವರಿ ಹುಡುಗರು ಮಾತ್ರವಲ್ಲದೆ ಬಹುತೇಕ ಎಲ್ಲರೂ ಗೂಗಲ್ ಮ್ಯಾಪ್ ಅವಲಂಬಿಸಿದ್ದೇವೆ. ಹಾಗೆಯೇ ಇದೇ ಗೂಗಲ್ ಮ್ಯಾಪ್‌ನಿಂದ ಹಲವರು ತೊಂದರೆ ಅನುಭವಿಸಿರುವ ಪ್ರಕರಣಗಳೂ ಸಾಕಷ್ಟು ನಡೆದಿವೆ. ಹೀಗೆ ಭಾರತಕ್ಕೆ ಪ್ರವಾಸಕ್ಕೆಂದು ಗೋವಾಗೆ ಬಂದಿದ್ದ ವಿದೇಶಿ ಮಹಿಳೆಯೊಬ್ಬರು ಗೂಗಲ್ ಮ್ಯಾಪ್‌ನಿಂದ ಸಂಕಷ್ಟಕ್ಕೆ ಸಿಲುಕಿ, ಕಗ್ಗತ್ತಲಲ್ಲಿ ಭಯಭೀತರಾಗಿದ್ದರು. ಈ ವೇಳೆ ರ್‍ಯಾಪಿಡೊ ಚಾಲಕಿಯೊಬ್ಬರು ಅವರಿಗೆ ಸಮಾಧಾನ ಹೇಳಿ, ಅವರಿದ್ದ ಹೋಟೆಲ್‌ಗೆ ಡ್ರಾಪ್ ಮಾಡಿದ್ದಾರೆ. ಈ ಘಟನೆ ಸೋಮವಾರ ರಾತ್ರಿ ಸುಮಾರು 10 ಗಂಟೆ ವೇಳೆ ನಡೆದಿದ್ದು, ಗೂಗಲ್ ಮ್ಯಾಪ್ಸ್ ವಿಫಲವಾದ ಕಾರಣ ವಿದೇಶಿ ಮಹಿಳೆ ಬೀಚ್ ಬಳಿ ದಾರಿ ತಪ್ಪಿ ತುಂಬಾ ಭಯಭೀತರಾಗಿದ್ದರು. ಇವರನ್ನು ಗಮನಿಸಿದ ರ್‍ಯಾಪಿಡೊ ಚಾಲಕಿ ಸಿಂಧು ಕುಮಾರಿ ನೆರವಿಗೆ ಮುಂದಾಗಿದ್ದಾರೆ. ವಿದೇಶಿ ಮಹಿಳೆಗೆ ಧೈರ್ಯ ತುಂಬಿ, ಹೋಟೆಲ್‌ಗೆ ಸುರಕ್ಷಿತವಾಗಿ ತಲುಪಿಸಿದ್ದಾರೆ. ಹೋಟೆಲ್ ತಲುಪಿದ ನಂತರ ವಿದೇಶಿ ಮಹಿಳೆ ಸಿಂಧುವನ್ನು ಅಪ್ಪಿಕೊಂಡು ಕೃತಜ್ಞತೆ ವ್ಯಕ್ತಪಡಿಸಿರುವ ವಿಡಿಯೋ ವೈರಲ್ ಆಗಿದೆ. ರ್‍ಯಾಪಿಡೋ ಚಾಲಕಿ ಮಾನವೀಯತೆಗೆ ಎಲ್ಲೆಡೆ ಶ್ಲಾಘನೆ ವ್ಯಕ್ತವಾಗುತ್ತಿವೆ.

ಬಾಂಗ್ಲಾದಲ್ಲಿ ಹಿಂದೂ ಆಟೋ ಚಾಲಕನ ಹತ್ಯೆ



ಢಾಕಾ: ಬಾಂಗ್ಲಾದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ದಾಳಿ ಮುಂದುವರೆದಿದ್ದು, ಸಮೀರ್ ದಾಸ್ ಎಂಬ 28 ವರ್ಷದ ಹಿಂದೂ ಆಟೋ ಚಾಲಕನ ಮೇಲೆ ಹಲ್ಲೆ ನಡೆಸಿ, ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಿನ್ನೆ ಬೆಳಕಿಗೆ ಬಂದಿದೆ.

ಫೆನಿ ಜಿಲ್ಲೆಯ ನಿವಾಸಿ ಸಮೀರ್ ಕುಮಾರ್ ದಾಸ್, ಆಟೋ ಓಡಿಸಿಕೊಂಡು ಜೀವನ ನಡೆಸುತ್ತಿದ್ದರು. ಕಳೆದ ಭಾನುವಾರ ಎಂದಿನಂತೆ ಅವರು ಕೆಲಸಕ್ಕೆ ತೆರಳಿದ್ದರು. ಆದರೆ, ಅಂದು ರಾತ್ರಿ ಅವರು ಮನೆಗೆ ವಾಪಸ್ ಆಗಲೇ ಇಲ್ಲ. ಇದರಿಂದ ಆತಂಕಕ್ಕೆ ಒಳಗಾದ ಕುಟುಂಬಸ್ಥರು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರು. ಹುಡುಕಾಟ ನಡೆಸಿದರೂ ಆತ ಪತ್ತೆಯಾಗಲಿಲ್ಲ. ಆದರೆ ಸೋಮವಾರ ಮುಂಜಾನೆ ದಕ್ಷಿಣ ಕರಿಂಪುರದ ಮುಹುರಿ ಬಾರಿ ಬಳಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸಮೀರ್ ಕುಮಾರ್‌ದಾಸ್ ಅವರ ದೇಹ ಸಿಕ್ಕಿದೆ.

ಚಿತ್ತಗಾಂಗ್‌ನ ದಗನ್‌ಭೂಯಾನ್ ಎಂಬಲ್ಲಿ ಭಾನುವಾರ ರಾತ್ರಿ ದುಷ್ಕರ್ಮಿಗಳು ಸಮೀರ್ ದಾಸ್ ಅವರನ್ನು ಸುತ್ತುವರಿದು, ನಾಡಬಂದೂಕು ಹಾಗೂ ಮಾರಕಾಸ್ತ್ರಗಳಿಂದ ಮನಬಂದಂತೆ ಹಲ್ಲೆ ನಡೆಸಿ, ಬರ್ಬರವಾಗಿ ಕೊಂದಿದ್ದಾರೆ. ಹತ್ಯೆಯ ನಂತರ, ಆರೋಪಿಗಳು ಅವರ ಬ್ಯಾಟರಿ ಚಾಲಿತ ಆಟೋ ರಿಕ್ಷಾವನ್ನು ಕಸಿದುಕೊಂಡು ಸ್ಥಳದಿಂದ ಪರಾರಿಯಾಗಿದ್ದಾರೆ.

ವಿಮಾನದಲ್ಲಿ ದೋಷ; ಪ್ರಯಾಣಿಕರ ಕೆಳಗಿಳಿಸಿದ ಆಕಾಶ್ ಏರ್ ಸಂಸ್ಥೆ




ಮುಂಬೈ: ಪುಣೆ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಳಗ್ಗೆ ಆಕಾಶ ಏರ್ ವಿಮಾನ ಯಾನ ಸಂಸ್ಥೆಯ ಬೋಯಿಂಗ್ 737 ಮ್ಯಾಕ್ಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ಬೆಂಗಳೂರಿಗೆ ಹೊರಟಿದ್ದ ಪ್ರಯಾಣಿಕರನ್ನು ವಿಮಾನದಿಂದ ಕೆಳಗಿಳಿಸಿದೆ ಎಂದು ಮೂಲಗಳು ತಿಳಿಸಿವೆ. ಪ್ರಯಾಣಿಕರು ಬೋಯಿಂಗ್ 737 ಮ್ಯಾಕ್ಸ್ ವಿಮಾನದಲ್ಲಿ ಸುಮಾರು ಒಂದೂವರೆ ಗಂಟೆಗಳ ಕಾಲ ಕುಳಿತಿದ್ದರು. ನಂತರ ತಾಂತ್ರಿಕ ಕಾರಣ ತಿಳಿಸಿ ಕೆಳಗಿಳಿಸಲಾಯಿತು ಎಂದು ವಿಮಾನದಲ್ಲಿದ್ದ ಪ್ರಯಾಣಿಕರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಪುಣೆಯಿಂದ ಬೆಂಗಳೂರಿಗೆ ಹೊರಟಿದ್ದ ಆಕಾಶ ಏರ್ ವಿಮಾನಕ್ಕೆ ಪ್ರಯಾಣಿಕರು ಬೆಳಗ್ಗೆ 8.10ರ ಸುಮಾರಿಗೆ ಹತ್ತಿದ್ದರು. ಬೆಳಗ್ಗೆ 8.50ಕ್ಕೆ ಹೊರಡಬೇಕಿತ್ತು. ವಿಮಾನವು ನಿರ್ಗಮನಕ್ಕೆ ಸಿದ್ಧವಾಗುತ್ತಿದ್ದಾಗ ಕೊನೆಯ ಕ್ಷಣದಲ್ಲಿ ಕೆಲವು ತಾಂತ್ರಿಕ ಸಮಸ್ಯೆ ವರದಿಯಾಗಿದೆ. ನಂತರ, ಎಲ್ಲಾ ಪ್ರಯಾಣಿಕರನ್ನು ಕೆಳಗಿಳಿಸಲಾಗಿದೆ. ಆಕಾಶ್ ಏರ್ ವಿಮಾನವು ಕಾರ್ಯಾಚರಣೆಯ ಕಾರಣಗಳಿಂದ ಕ್ಯೂಐಪಿ 1312 ವಿಮಾನ ವಿಳಂಬವಾಗಿದೆ ಎಂದು ಪ್ರಯಾಣಿಕರಿಗೆ ನೀಡಿದ ಸಂವಹನದಲ್ಲಿ ತಿಳಿಸಿದ್ದು, ಮಧ್ಯಾಹ್ನ 1.15ಕ್ಕೆ ವಿಮಾನ ಹೊರಟಿದ್ದಾಗಿ ತಿಳಿದುಬಂದಿದೆ.

ಮೈಸೂರು ಮಿತ್ರ

ಇಂದು ಶಿವಯೋಗಿ ಸಿದ್ದರಾಮೇಶ್ವರ ಜಯಂತಿ



ಮಡಿಕೇರಿ, ಜ.13– ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಜ.14ರ ಬೆಳಿಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್, ರಾಜ್ಯ ಸಭಾ ಸದಸ್ಯ ಅಜಯ್ ಮಾಕನ್, ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಟಿ.ಎಂ.ಧರ್ಮಜ ಉತ್ತಪ್ಪ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಜಿಲ್ಲಾ ಬೋವಿ ಸಮಾಜದ ಅಧ್ಯಕ್ಷ ಡಿ.ಸುಜಿತ್, ನಾಪೋಕ್ಲು ಕರ್ನಾಟಕ ಪಬ್ಲಿಕ್ ಶಾಲೆಯ ಕನ್ನಡ ಶಿಕ್ಷಕಿ ಉಷಾರಾಣಿ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಪಾಲ್ಗೊಳ್ಳಲಿದ್ದಾರೆ.

ಕೊಡಗು ಆಹಾರ ಪ್ರಿಯರಿಗೆ ಬಾಯಲ್ಲಿ ನೀರು ತರಿಸಿದ ಸಿರಿಧಾನ್ಯ ತಿನಿಸುಗಳ ಪ್ರದರ್ಶನ

ಮಡಿಕೇರಿ, ಜ.13–ಸಿರಿಧಾನ್ಯದ ಮಹತ್ವ ಕುರಿತು ಜಾಗೃತಿ ಹಾಗೂ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ ಅಂಗವಾಗಿ ಮಂಗಳವಾರ ಜಾಥಾ ನಡೆಯಿತು.

ನಗರದ ಕೋಟೆ ಆವರಣದಲ್ಲಿ ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಜಾಥಾಕ್ಕೆ ಚಾಲನೆ ನೀಡಿ ಸಿರಿಧಾನ್ಯ ಬಳಕೆಯಿಂದ ಪೌಷ್ಠಿಕಾಂಶಗಳು ಹೆಚ್ಚಿದ್ದು, ಈ ಬಗ್ಗೆ ಜಾಗೃತಿ ಮೂಡಿಸುವಂತಾಗಬೇಕು. ಸಿರಿಧಾನ್ಯ ಉಪ ಯೋಗದಿಂದ ದೇಹದಲ್ಲಿ ಆಹಾರದ ಸಮತೋಲನ ಕಾಯ್ದುಕೊಳ್ಳಬಹುದು. ಮಧುಮೇಹ ಮತ್ತು ರಕ್ತದೊತ್ತಡದಿಂದ ದೂರವಿರಬಹುದು ಎಂದರು.

ಜಾಥವು ನಗರದ ಕೋಟೆ ಆವರಣದಿಂದ ಗಾಂಧಿ ಮೈದಾನದವರೆಗೆ ನಡೆಯಿತು. ಬಳಿಕ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಸಿರಿಧಾನ್ಯ ಹಾಗೂ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧಾ ಪ್ರದರ್ಶನ ನಡೆಯಿತು. ಸ್ಪರ್ಧೆಯಲ್ಲಿ 60 ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದರು.

ಸಿರಿಧಾನ್ಯಗಳಾದ ಜೋಳ, ರಾಗಿ, ನವಣೆ, ಸಜ್ಜೆ, ಹಾರಕ, ಬರಗು, ಸಾಮೆಯಿಂದ ಮಾಡಿದ ತಿಂಡಿ ತಿನಿಸುಗಳು ಪ್ರದರ್ಶನದಲ್ಲಿ ನೋಡುಗರ ಬಾಯಲ್ಲಿ ನೀರು ತರಿಸಿತು. ಸಿರಿಧಾನ್ಯದಲ್ಲಿ ಮಾಡಿದ್ದ ರಾಗಿ ದೋಸೆ, ನಿಪ್ಪಟ್ಟು, ಚಟ್ನಿ, ಚಕ್ಕುಲಿ, ಕೋಡು ಬಳೆ, ಕಜ್ಜಾಯ, ಮಿಲ್ಲೇಟ್ ಪಾಯಸ, ಮಿಲ್ಲೇಟ್ ಪಲಾವ್, ರಾಗಿ ಬಿಸ್ಕೇಟ್, ಬಿಳಿ ಜೋಳದ ಬಿಸ್ಕೇಟ್, ಮಿಲ್ಲೇಟ್ ಕೇಕ್, ಸಿರಿಧಾನ್ಯ ಪಡ್ಡು, ಸಿರಿಧಾನ್ಯ ಲಡ್ಡು, ಸಿರಿಧಾನ್ಯ ಚಟ್ನಿ, ಸೀಮೆಬದನೆ ಕಟ್ಲೆಟ್, ನವಣೆ ದೋಸೆ, ಹಲಸಿನ ಕಟ್ಲೆಟ್, ಬೂಕಿ ಕಜ್ಜಾಯ, ರಾಗಿ ಲಡ್ಡು, ಗುಳಿಗೆ ಪಾಯಸ, ಸಜ್ಜೆ ನಾಡು, ನವಣೆ ಕಟ್ಲೆಟ್, ಪಪ್ಪಾಯಿ ಹಲ್ವ, ಸಜ್ಜೆ ಹಲ್ವ, ಸಿರಿಧಾನ್ಯ ಒಡೆ, ಮೆಂತ್ಯೆ ಸೊಪ್ಪಿನ ಒಡೆ, ಮೆಂತ್ಯೆ ಹಿಟ್ಟು, ರಾಗಿ ಮತ್ತು ಕ್ಯಾರೇಟ್ ಕೇಕ್, ಶಾಮೆ ಪುಡಿ ಮತ್ತು ಕಾಳು ಕಡುಬು, ಹುರಿಕಡಲೆ ಚಿಕ್ಕಿ, ಹಿರಲೆ ಕಾಯಿ ಗೊಜ್ಜು, ಗೋದಿ ಹಲ್ವ, ಸಿಹಿ ಕಡುಬು, ನವಣೆ ಬಿಸಿಬೇಳೆ ಬಾತ್, ರಾಗಿ ದೋಸೆ, ನವಣೆ ಉಪ್ಪಿಟ್ಟು, ರಾಗಿ ಹಲ್ವ, ರಾಗಿ ಮಿಕ್ಸರ್, ಕಕ್ಕಡ ಸೊಪ್ಪು ಪಾಯಸ, ಸಿಹಿ ಗೆಣಸು ಖಾರ, ಹಿರಲೆ ಉಪ್ಪಿನ ಕಾಯಿ, ನವಣೆ ರೊಟ್ಟಿ, ಶುಂಠಿ ಚಟ್ನಿ, ಕೆಸುವಿನಸಾರು, ಮಾವಿನಕಾಯಿ ಜೂಸು, ಕುಂಬಳ ಕೊಡಿ ಪಲ್ಯ, ಬರಗು ಒಡೆ, ಸಿರಿಧಾನ್ಯ ನಿಪ್ಪಟ್ಟು, ಅಡಿಕೆ ಪುಟ್ಟು, ನವಣೆ ಬರಗು ಹಲ್ವ, ಪತ್ರೊಡೆ ಬೇಂದಿ ಖಾದ್ಯಗಳು ಸ್ಪರ್ಧೆಯಲ್ಲಿ ಗಮನ ಸೆಳೆದವು.



ಖಾದ್ಯಗಳ ಪಾಕ ಸ್ಪರ್ಧೆ ಅಂಗವಾಗಿ ಮಂಗಳವಾರ ನಡೆದ ಸಿರಿಧಾನ್ಯಗಳ ತಿನಿಸುಗಳ ಪ್ರದರ್ಶನ

ಜಿಲ್ಲಾ ಮಟ್ಟಕ್ಕೆ ಖಾರ ತಿನಿಸು, ಸಿಹಿ ತಿನಿಸು ಮತ್ತು ಮರೆತು ಹೋದ ಖಾದ್ಯಗಳಿಗೆ ಪ್ರತ್ಯೇಕವಾಗಿ ಪ್ರಥಮ ಬಹುಮಾನವಾಗಿ ರೂ. 5 ಸಾವಿರ, ದ್ವಿತೀಯ ಬಹುಮಾನವಾಗಿ ರೂ. 3 ಸಾವಿರ ಹಾಗೂ ತೃತೀಯ ಬಹುಮಾನವಾಗಿ ರೂ. 2 ಸಾವಿರ ನೀಡಲಾಯಿತು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ಸಿರಿಧಾನ್ಯ ಉಪಯೋಗದಿಂದ ಹಲವು ರೀತಿಯ ಪೋಷಕಾಂಶಗಳು ದೊರೆಯಲಿದ್ದು, ಇವುಗಳನ್ನು ಬಳಸುವಂತಾಗಬೇಕು ಎಂದು ಅವರು ಸಲಹೆ ಮಾಡಿದರು. ಸಿರಿಧಾನ್ಯ ಬಳಕೆಯಿಂದ ಮೂಳೆಯು ಸಹ ಗಟ್ಟಿಯಾಗಲಿದೆ. ಕ್ಯಾಲ್ಸಿಯಂ ದೊರೆಯಲಿದೆ. ಆದ್ದರಿಂದ ಸಿರಿಧಾನ್ಯ ಬಳಕೆ ಅತ್ಯಗತ್ಯ ಎಂದರು.

ಗುಂಡು ಹಾರಿಸಿಕೊಂಡು ಕಾರಿನ ಚಾಲಕ ಆತ್ಮಹತ್ಯೆ



ಡಾಲು ನಂಜಪ್ಪ

ಮಡಿಕೇರಿ/ವಿರಾಜಪೇಟೆ ಜ.13– ಕಾರಿನ ಚಾಲಕರೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಅರಮೇರಿ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ಕದನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಮೇರಿ 4ನೇ ಮೈಲು ನಿವಾಸಿ ಚೆರಿಯ ಕಂಡ ಡಾಲು ನಂಜಪ್ಪ(64)ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಇವರ ಆತ್ಮಹತ್ಯೆಗೆ ಅನಾರೋಗ್ಯವೇ ಕಾರಣ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ.

ಘಟನೆ ಹಿನ್ನೆಲೆ: ಡಾಲು ನಂಜಪ್ಪ ವಿರಾಜಪೇಟೆಯಲ್ಲಿ ಕಾರು ಚಾಲಕರಾಗಿದ್ದು, 8 ವರ್ಷಗಳ ಹಿಂದೆ ಪಾರ್ಶ್ವವಾಯು ರೋಗದಿಂದ ಚೇತರಿಸಿಕೊಂಡು ಚಾಲಕ ವೃತ್ತಿ ಮಾಡಿಕೊಂಡಿದ್ದರು.ಕೌಟುಂಬಿಕ ಕಾರಣಗಳಿಂದ ಪತ್ನಿ ಮತ್ತು ಮಗಳು ದೂರವಾಗಿದ್ದರು ಎನ್ನಲಾಗಿದೆ. ಇಂದು ತೋಟದ ಕೆಲಸಕ್ಕೆ ತೆರಳಿದ್ದ ಕಾರ್ಮಿಕರು ಗದ್ದೆ ಭಾಗದಲ್ಲಿ ನೋಡಿದಾಗ ಡಾಲು ನಂಜಪ್ಪ ಅವರು ಗುಂಡು ಹೊಡೆದು ಕೊಂಡು ಮೃತಪಟ್ಟಿರುವುದು ಕಂಡು ಬಂದಿದೆ.

ವಿರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಗ್ರಾಮಾಂತರ ಠಾಣಾಧಿಕಾರಿ ಎನ್.ಜಿ. ಲತಾ, ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಮೃತರ ಅಣ್ಣ ವಿಜಯ ಅವರು ನೀಡಿದ ದೂರಿನ ಅನ್ವಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕೃತ್ಯಕ್ಕೆ ಬಳಸಲಾದ ಒಂಟಿ ನಳಿಕೆ ಬಂದೂಕನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಕಾನೂನು ಕ್ರಮ ಕೈಗೊಂಡಿದ್ದಾರೆ.

ಪೂಜಾರಿರ ಕೃಪಾ ದೇವರಾಜ್‌ಗೆ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ




ಮಡಿಕೇರಿ, ಜ.13–ಈ ಬಾರಿಯ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿಗೆ ಪೂಜಾರಿರ ಕೃಪಾ ದೇವರಾಜ್ ಪಾತ್ರರಾಗಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿಗಳಲ್ಲಿ ಅತ್ಯಂತ ಪ್ರತಿಷ್ಠಿತವಾದ ದತ್ತಿ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿಯನ್ನು ಗೌರಮ್ಮ ಅವರ ಪುತ್ರ ಬಿ.ಜಿ.ವಸಂತ ನೀಡಿದ್ದು, ಮಹಿಳಾ ಲೇಖಕಿಯರು ಪ್ರಕಟಪಡಿಸಿದ ಉತ್ತಮ ಕೃತಿಗೆ ಪ್ರಶಸ್ತಿ ನೀಡಿ ಗೌರವಿಸುವ ಸಲುವಾಗಿ ದತ್ತಿಯನ್ನು ಸ್ಥಾಪಿಸಲಾಗಿದೆ. ಇಲ್ಲಿಯವರೆಗೆ 22 ಲೇಖಕಿಯರಿಗೆ ಈ ಪ್ರಶಸ್ತಿ ನೀಡಲಾಗಿದೆ. ಲೇಖಕಿಯ 'ಮಂತ್ರ ಪುಷ್ಪ–ಕಥೆಗಳ ಕ್ಯಾನ್ವಾಸ್' ಕೃತಿಗೆ ಪ್ರಶಸ್ತಿ ಲಭ್ಯವಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಕೂಟರ್‌ನಲ್ಲೇ ಅಮ್ಮನಿಗೆ ಪುಣ್ಯಕ್ಷೇತ್ರಗಳ ದರ್ಶನ

ಮಡಿಕೇರಿ, ಜ.13–ತಂದೆತಾಯಿಯನ್ನು ಬುಟ್ಟಿಯಲ್ಲಿ ಕೂರಿಸಿಕೊಂಡು ಯಾತ್ರೆಗೆ ಕರೆದೊಯ್ದ ಶ್ರವಣನ ಕಥೆಗೆ ಇಂಬು ಕೊಡುವಂತೆ ಆಧುನಿಕ ಕಾಲದಲ್ಲೂ ತಂದೆ ಇಲ್ಲವೆ ತಾಯಿಯನ್ನು ದ್ವಿಚಕ್ರ ವಾಹನದಲ್ಲಿ ತೀರ್ಥಯಾತ್ರೆ ಮಾಡಿಸುವ ಸತ್ಸಂಪ್ರದಾಯ ನಡೆಯುತ್ತಿರುವುದು ಆಗಾಗ್ಗೆ ಬೆಳಕಿಗೆ ಬರುತ್ತಿರುತ್ತದೆ. ಇಂಥ ಒಂದು ನಿದರ್ಶನ ಮಡಿಕೇರಿಯಲ್ಲಿ ಕಂಡುಬಂದಿದೆ.

ಕೂಡು ಕುಟುಂಬದಲ್ಲಿ ಅಡುಗೆ ಮನೆಗಷ್ಟೆ ಸೀಮಿತವಾಗಿದ್ದ ಅಮ್ಮನನ್ನು ಅಪ್ಪ ಕೊಡಿಸಿದ್ದ ಬಜಾಜ್ ಚೇತಕ್ ಸ್ಕೂಟರ್‌ನಲ್ಲಿ ಭಾರತದ ಎಲ್ಲಾ ರಾಜ್ಯವನ್ನು ಒಳಗೊಂಡಂತೆ ಸುತ್ತಮುತ್ತಲ 3 ದೇಶಗಳಿಗೆ ಕರೆದೊಯ್ದು, ಅಲ್ಲಿನ ಪುಣ್ಯಸ್ಥಳ ಪ್ರವಾಸಿ ತಾಣಗಳಿಗೆ ಭೇಟಿ ಮಾಡಿಸಿದ ಡಿ.ಕೃಷ್ಣಕುಮಾರ್ ಮತ್ತು ಅವರಮ್ಮ ಚೂಡಾ ರತ್ನಮ್ಮ ಮಂಜಿನ ನಗರಿ ಮಡಿಕೇರಿಗೆ ಇಂದು ಆಗಮಿಸಿದ್ದರು.



ಮೂಲತಃ ಮೈಸೂರಿನವರಾದ ಕೃಷ್ಣಕುಮಾರ್ ಅಮ್ಮನೊಂದಿಗೆ 2018ರ ಜ.16ರಂದು ಆರಂಭಿಸಿದ ಪ್ರವಾಸ ಇಂದಿಗೂ ಮುಂದುವರೆದಿದೆ. ಇಲ್ಲಿಯವರೆಗೆ ಭಾರತದ ವಿವಿಧ ರಾಜ್ಯಗಳು, ನೆರೆಯ ನೇಪಾಳ, ಭೂತಾನ್, ಮ್ಯಾನ್ಮಾರ್ ದೇಶ ಸೇರಿದಂತೆ 1 ಲಕ್ಷ ಕಿ.ಮೀ.ಗೂ ಹೆಚ್ಚಿನ ದೂರವನ್ನು ಕ್ರಮಿಸಿ, ಅಮ್ಮನ ಇಚ್ಛೆಯ ಪ್ರದೇಶಗಳನ್ನು, ತೀರ್ಥ ಕ್ಷೇತ್ರಗಳ ದರ್ಶನವನ್ನು ಮಾಡಿಸಿದ್ದಾರೆ.

ಅಪ್ಪ ದಕ್ಷಿಣಾ ಮೂರ್ತಿ ಕಾಲವಾದ ಬಳಿಕ, ಅವರು ಕೊಡಿಸಿದ್ದ 'ಬಜಾಜ್ ಚೇತಕ್' ಸ್ಕೂಟರ್‌ನಲ್ಲೇ ತಂದೆಯನ್ನು ಕಾಣುತ್ತಿದ್ದೇನೆ. ಇದರಿಂದಾಗಿ ಸ್ಕೂಟರ್‌ನಲ್ಲಿ ಅಮ್ಮನೊಂದಿಗಿನ ಪ್ರವಾಸ ಅಂದರೆ ಅದು ಅಪ್ಪನನ್ನು ಒಳಗೊಂಡ ನಮ್ಮ ಕುಟುಂಬದ ಪ್ರವಾಸ ಎಂದೇ ಭಾವಿಸಿದ್ದೇನೆ ಎಂದು ಹೇಳಿದ ಕೃಷ್ಣಕುಮಾರ್, ಈ ಹಿಂದೆ ಕಾರ್ಪೋರೇಟ್ ಕಂಪನಿಯಿಂದ ಸ್ವಯಂನಿವೃತ್ತಿಯನ್ನು ಪಡೆದು, ತಾಯಿಯ ಸಂತೋಷದಲ್ಲೆ ತಮ್ಮ ಸಂತೋಷವನ್ನು ಕಾಣುತ್ತ ಊರಿಂದ ಊರಿಗೆ, ರಾಜ್ಯದಿಂದ ರಾಜ್ಯಕ್ಕೆ, ದೇಶದಿಂದ ದೇಶಕ್ಕೆ ಪಯಣಿಸುತ್ತ ಅಲ್ಲಿನ ಸುಂದರ ತಾಣಗಳನ್ನು, ಪುಣ್ಯ ಕ್ಷೇತ್ರಗಳ ದರ್ಶನ ಮಾಡಿಸುತ್ತಾ ಸಾಗಿರುವುದಾಗಿ ಹೇಳಿದರು.

ದೇಶದ ಯಾವುದೇ ಪ್ರದೇಶಗಳಿಗೆ ತೆರಳಿದಾಗಲೂ ಅಲ್ಲಿನ ಜನತೆ ನಮ್ಮನ್ನು ಅತ್ಯಂತ ಪ್ರೀತಿಯಿಂದ ಕಂಡಿದ್ದಾರೆ, ಆತಿಥ್ಯವನ್ನು ನೀಡಿದ್ದಾರೆ. ಈ ರಾಷ್ಟ್ರದ ಸಂಸ್ಕೃತಿಯಲ್ಲಿ ಅತಿಥಿ ಸತ್ಕಾರದ ವಿಶೇಷ ಅಂತಃಕರಣ ಹಾಸು ಹೊಕ್ಕಾಗಿದೆ ಎಂದು ಕೃಷ್ಣಕುಮಾರ್ ತಿಳಿಸಿದರು. ಮಗನೊಂದಿಗಿನ ಪ್ರಯಾಣ ಯಾವತ್ತೂ ಆರಾಮದಾಯಕವಾಗಿದೆ. ಆತನ ಸಂಕಲ್ಪದಂತೆ ನಾವಿಬ್ಬರು ವಿವಿಧೆಡೆಗಳಿಗೆ ಭೇಟಿ ನೀಡುತ್ತಿರುವುದಾಗಿ ಚೂಡಾ ರತ್ನಮ್ಮ ಹೇಳಿದರು. ಅಮ್ಮ–ಮಗನ ಸುದೀರ್ಘ ಪ್ರವಾಸವನ್ನು ಗುರುತಿಸಿದ ಬಜಾಜ್ ಸಂಸ್ಥೆ ಇವರಿಗೆ ಬಜಾಜ್ ಇಲೆಕ್ಟ್ರಿಕ್ ಸ್ಕೂಟರನ್ನು ಕೊಡುಗೆಯಾಗಿ ನೀಡಿದೆ

ಆತ್ಮೀಯ ಸ್ವಾಗತ: ಇಲ್ಲಿನ ಬಾಲಭವನದಲ್ಲಿ ರೋಟರಿ ಸಂಸ್ಥೆ ಆತ್ಮೀಯವಾಗಿ ಅವರನ್ನು ಸ್ವಾಗತಿಸಿತು. ರೋಟರಿ ಜಿಲ್ಲಾ ರಾಜ್ಯಪಾಲ ಪಿ.ಕೆ. ರಾಮಕೃಷ್ಣ, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ ರೈ, ಸಹಾಯಕ ರಾಜ್ಯಪಾಲ ದಿಲನ್ ಚಂಗಪ್ಪ, ಜಿಲ್ಲಾ ರೋಟರಿ ಕಾರ್ಯದರ್ಶಿ ಬಿ.ಕೆ.ಕಾರ್ಯಪ್ಪ, ರೊಟೇರಿಯನ್ ಬಿ.ಜಿ. ಅನಂತಶಯನ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎಚ್.ಟಿ. ಅನಿಲ್ ನಗರಸಭೆ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

ಉದ್ಯಮಿ ಕೆ.ಕೆ.ಭಾಸ್ಕರ್‌ಗೆ ನುಡಿನಮನ

ಕುಶಾಲನಗರ, ಜ.13–ಪಟ್ಟಣ ಸೇರಿದಂತೆ ಕೊಡಗಿನ ಹೋಟೆಲ್ ಉದ್ಯಮದಲ್ಲಿ ಉತ್ತಮ ಆತಿಥ್ಯಕ್ಕೆ ಹೆಸರಾಗಿದ್ದ ಕೆ.ಕೆ. ಭಾಸ್ಕರ್ ಅಗಲಿಕೆ ಕೊಡಗಿನ ಹೋಟೆಲ್ ಉದ್ಯಮಕ್ಕೆ ಉಂಟಾದ ನಷ್ಟ ಎಂದು ಹೋಟೆಲ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಜಿ.ಕೆ.ಶೆಟ್ಟಿ ಅಭಿಪ್ರಾಯಪಟ್ಟರು.

ಜಿಲ್ಲಾ ಹೋಟೆಲ್ ಅಸೋಸಿಯೇಷನ್ ಹಾಗೂ ಕುಶಾಲನಗರದ ವಿವಿಧ ಸಂಘಟನೆಗಳ ವತಿಯಿಂದ ನಗರದ ಮೈಸೂರು ರಸ್ತೆಯ ಟಾಪ್ ಇನ್ ಟೌನ್ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನುಡಿನಮನದಲ್ಲಿ ಮಾತನಾಡಿದ ಅವರು, ಕೊಡಗಿಗೆ ಅಪರಿಚಿತ ಪ್ರವಾಸಿಗರು ಅತಿಥಿ ಹೋಟೆಲ್‌ಗೆ ಆಗಮಿಸಿದಾಗ ಅವರಲ್ಲಿ ಪರಿಚಿತ ಭಾವನೆ ಮೂಡಿಸುತ್ತಿದ್ದ ಭಾಸ್ಕರ್, ಅತ್ಯುತ್ತಮವಾದ ಆತಿಥ್ಯ ನೀಡಿ ಸತ್ಕರಿಸುತ್ತಿದ್ದರು. ಹಾಗಾಗಿಯೇ ಅವರು ರಾಜ್ಯ ಮಟ್ಟದ ಆತಿಥ್ಯ ರತ್ನ ಪ್ರಶಸ್ತಿಗೆ ಭಾಜನರಾಗಿದ್ದರು ಎಂದು ಸ್ಮರಿಸಿದರು.

ಕೊಡಗು ಜಿಲ್ಲಾ ಘಟಕದ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕಾರ್ಯಪ್ಪ ಮಾತನಾಡಿ, ಭಾಸ್ಕರ್ ಅವರ ಅಕಾಲಿಕ ಅಗಲಿಕೆ ಹೋಟೆಲ್ ರಂಗಕ್ಕೆ ತುಂಬಲಾರದ ನಷ್ಟವಾಗಿದೆ. ಮೂಲ ಮಲೆಯಾಳಿಗರಾದರೂ ಕೂಡ ಕನ್ನಡ ಭಾಷೆ ಹಾಗೂ ಸಾಹಿತ್ಯದಲ್ಲಿ ಅಪಾರ ಅಸಕ್ತಿ ಇತ್ತು. ತಾವು ವಹಿಸಿಕೊಂಡ ಯಾವುದೇ ಜವಾಬ್ದಾರಿಗಳನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರು ಎಂದು ಹೇಳಿದರು.

ಜಿಲ್ಲಾ ವಾಣಿಜ್ಯೋದ್ಯಮಿಗಳ ಸಂಘದ ಅಧ್ಯಕ್ಷ ಬಿ.ಅರ್.ನಾಗೇಂದ್ರ ಪ್ರಸಾದ್, ಕಾರ್ಯದರ್ಶಿ ವಿ.ಪಿ.ಶಶಿಧರ್, ಶ್ರೀನಿವಾಸ ಶೆಟ್ಟಿ, ಶೇಖರ ನಾಯ್ಡು, ವಕೀಲರ ಸಂಘದ ಅಧ್ಯಕ್ಷ ಆರ್.ಕೆ.ನಾಗೇಂದ್ರ, ಚಂದ್ರಮೋಹನ್, ಲೋಕೇಶ್ ಸಾಗರ್, ಕೆ.ವರದ ಮಾತನಾಡಿದರು.

ರುಕ್ಮಿಣಿ ನಿಧನ



ನಾಪೋಕ್ಲು, ಜ.13–ಸಮೀಪದ ಪಾಲೂರು ಗ್ರಾಮದ ನಿವಾಸಿ ದಿವಂಗತ ಶಿವಯ್ಯ ಆಚಾರ್ಯರ ಪತ್ನಿ ರುಕ್ಮಿಣಿ (90) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ, ಮತ್ತು ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಪಾಲೂರು ಗ್ರಾಮದಲ್ಲಿ ನೆರವೇರಿತು.

ಎಂ.ಎನ್.ಕೊಮಾರಪ್ಪ



ಸುಂಟಿಕೊಪ್ಪ, ಜ.13–ಬಿಜೆಪಿ ಹಿರಿಯ ಮುಖಂಡ, ಹಿರಿಯ ಸಹಕಾರ ಧುರೀಣ ಎಂ.ಎನ್.ಕೊಮಾರಪ್ಪ(76) ಇಂದು ಮೈಸೂರಿನಲ್ಲಿ ನಿಧನರಾದರು. ಎಂ.ಎನ್. ಕೊಮಾರಪ್ಪ ಮೃತರು ಪತ್ನಿ, ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಳಗವನ್ನು ಆಗಲಿದ್ದಾರೆ. ಅಂತ್ಯಕ್ರಿಯೆ ಸ್ವಗೃಹ ಕಲ್ಲೂರಿನಲ್ಲಿ ಬುಧವಾರ ನಡೆಯಲಿದೆ.

ಚಾ.ನಗರದಲ್ಲಿ ವಿವಿಧ ಸಂಘಟನೆಗಳಿಂದ ವಿವೇಕಾನಂದ ಜಯಂತಿ ಆಚರಣೆ

ಚಾಮರಾಜನಗರ, ಜ.13– ನಗರದ ಹಿಂದೂ ಜಾಗೃತಿ ಸಮಿತಿ ವತಿಯಿಂದ ನಗರದ ಹಳೆ ಖಾಸಗಿ ಬಸ್ ನಿಲ್ದಾಣದ ಬಳಿ ಮಾರಮ್ಮ ದೇವಸ್ಥಾನ ಮುಂಭಾಗ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಹಾಗೂ 2026ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಹಿಂದೂ ಜಾಗೃತಿ ಸಮಿತಿಯ ಶ್ರೀಕಂಠ ಸ್ವಾಮಿ ಮಾತನಾಡಿ, ವಿವೇಕಾನಂದ ಜಯಂತಿ ಕೇವಲ ಅವರ ಜನ್ಮೋತ್ಸವವಲ್ಲ; ಅದು ಅವರ ಆಲೋಚನೆಗಳನ್ನು ಮರುಸ್ಮರಿಸುವ ದಿನವಾಗಿದೆ. ಅವರ ಬೋಧನೆಗಳು ಆಧ್ಯಾತ್ಮಿಕತೆಯನ್ನು ಮೀರಿ ಸಾಮಾಜಿಕ ಸುಧಾರಣೆ, ರಾಷ್ಟ್ರೀಯ ಏಕತೆ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುತ್ತವೆ. ಸ್ವಾಮಿ ವಿವೇಕಾನಂದರ ಸ್ವಯಂ–ಸಬಲೀಕರಣ, ಸೇವಾ ಭಾವನೆ ಮತ್ತು ಏಕತೆಯ ಸಂದೇಶವು ಇಂದಿಗೂ ಜನರನ್ನು ಸ್ಪರ್ಶಿಸುತ್ತಿದೆ ಎಂದರು.



ಹಿಂದೂ ಜಾಗೃತಿ ಸಮಿತಿಯಿಂದ ನಗರದ ಹಳೆ ಖಾಸಗಿ ಬಸ್ ನಿಲ್ದಾಣದ ಬಳಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಮಾಡಲಾಯಿತು.

ಯುವಕರಲ್ಲಿ ಆತ್ಮವಿಶ್ವಾಸ, ಶಿಸ್ತು ಮತ್ತು ರಾಷ್ಟ್ರಭಕ್ತಿ ಬೆಳೆಸುವ ಅವರ ವಿಚಾರಗಳು ಇಂದು ಕೂಡ ಯುವಜನತೆಗೆ ಅಪಾರ ಪ್ರೇರಣೆಯಾಗಿವೆ. ಎದ್ದೇಳಿ, ಎಚ್ಚೆತ್ತುಕೊಳ್ಳಿ ಎಂಬ ಅವರ ಸಂದೇಶ ಯುವ ಮನಸ್ಸುಗಳಿಗೆ ಶಕ್ತಿಯನ್ನು ತುಂಬುತ್ತದೆ. ಈ ಕಾರಣದಿಂದಲೇ ಅವರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತಿದ್ದು ಹಿಂದೂ ಸಮಾಜದ ಜಾಗೃತಿಗಾಗಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಸಮಿತಿಯ ಕೃಷ್ಣಕುಮಾರ್, ದರ್ಶನ್, ಮುಖಂಡರಾದ ಸುರೇಶನಾಯಕ ಪೂಜಾ ಸಮಿತಿಯ ಕೃಷ್ಣಕುಮಾರ್, ದರ್ಶನ್, ಮುಖಂಡರಾದ ಸುರೇಶ್‌ನಾಯಕ, ರಾಮು, ಗುರು ಸೋಮವಾರಪೇಟೆ, ಮಹದೇವ್, ಸಿದ್ದಪ್ಪ, ನಾಗಭೂಷಣ್ ಇತರರು ಇದ್ದರು.

ಜೈ ಹಿಂದ್ ಪ್ರತಿಷ್ಠಾನದಿಂದ ಸ್ವಾಮಿ ವಿವೇಕಾನಂದ ಜಯಂತಿ

ಚಾಮರಾಜನಗರ, ಜ.13–ಜೈ ಹಿಂದ್ ಪ್ರತಿಷ್ಠಾನ, ಋಗ್ವೇದಿ ಯೂತ್ ಕ್ಲಬ್, ಅಖಿಲ ಭಾರತೀಯ ಸಾಹಿತ್ಯ ಪರಿಷತ್ತು, ಜಿಲ್ಲಾ ಯುವ ಸಂಘಟನೆಗಳ ಒಕ್ಕೂಟ, ಶ್ರೀಗಂಧ ಕನ್ನಡ ಯುವ ವೇದಿಕೆ ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ಜೈ ಹಿಂದ್ ಕಾರ್ಯಕ್ರಮವನ್ನು ಇಂದು ಪ್ರಕಾಶಭವನದಲ್ಲಿ ನಡೆಸಿದವು

ತಾಪಂ ಮಾಜಿ ಅಧ್ಯಕ್ಷ ಬಿಕೆ ರವಿಕುಮಾರ್ ಮಾತನಾಡಿ, ವಿವೇಕಾನಂದರು ಭಾರತದ ಯುವಶಕ್ತಿಯ ಪ್ರತೀಕ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ಮಾತನಾಡಿ ಸ್ವಾಮಿ ವಿವೇಕಾನಂದರ ಭಾರತವನ್ನು ತಿಳಿಯಬೇಕಾದರೆ ವಿವೇಕಾನಂದರ ಸಮಗ್ರ ಇತಿಹಾಸವನ್ನು ಅಧ್ಯಯನ ಮಾಡಬೇಕು ಎಂದರು.



ಸ್ವಾಮಿ ವಿವೇಕಾನಂದ ಜಯಂತಿಯನ್ನು ಬಿ.ಕೆ.ದಾನೇಶ್ವರಿ ಉದ್ಘಾಟಿಸಿದರು

ದಿವ್ಯ ಸಾನಿಧ್ಯವನ್ನು ವಹಿಸಿದ್ದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಬಿ.ಕೆ.ದಾನೇಶ್ವರಿ ಮಾತನಾಡಿ, ಭಾರತ ಸಂಸ್ಕೃತಿ ಪರಂಪರೆಯ ನಾಡು. ಭಾರತಕ್ಕೆ ವಿಶೇಷ ಗೌರವವಿದೆ. ಭಾರತದ ಪ್ರತಿಯೊಬ್ಬರು ಯುವಶಕ್ತಿಯ ಪ್ರತೀಕವಾಗಿದ್ದಾರೆ. ತಮ್ಮ ಆಧ್ಯಾತ್ಮಿಕ, ಸಾಮಾಜಿಕ ಬೆಳವಣಿಗೆ ಮೂಲಕ ಶ್ರೇಷ್ಠ ಮನಸ್ಸುಗಳಾಗಿ ಸಮಾಜಕ್ಕೆ ಅರ್ಪಿಸಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳೋಣ ಎಂದರು.

ಜಿಲ್ಲಾ ಯುವ ಸಂಘಟನೆಗಳ ಒಕ್ಕೂಟದ ಕಾರ್ಯದರ್ಶಿ ಸುರೇಶ್ ದೊಡ್ಡಮೋಳೆ, ಅಭಾಸಾಪದ ಬಿ.ಕೆ.ಆರಾಧ್ಯ, ರವಿಚಂದ್ರ ಪ್ರಸಾದ್ ಶಿವಕುಮಾರ್ ಉಪಸ್ಥಿತರಿದ್ದರು.

ಬೈಕ್‌ಗೆ ಬಸ್ ಡಿಕ್ಕಿ: ಇಬ್ಬರ ಸಾವು

ಹನೂರು, ಜ.13– ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಹದೇಶ್ವರ ಬೆಟ್ಟದ ಮುಖ್ಯ ರಸ್ತೆಯಲ್ಲಿರುವ ಮೂಕಳ್ಳಿ ಮಾರಮ್ಮ ದೇವಾಲಯದ ಬಳಿ ನಡೆದಿದೆ.

ಸೋಲಿಗ ಯುವಕರಾದ ಪೊನ್ನಾಚಿ ರಾಮೇಗೌಡನಹಳ್ಳಿಯ ಶಿವಪ್ಪ (21), ಸತೀಶ (24) ಸಾವನ್ನಪ್ಪಿದವರು. ಇವರಿಬ್ಬರೂ ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಕೆಎಸ್‌ಆರ್‌ಟಿಸಿ ಬಸ್ (ಕೆಎ 10, ಎಫ್–0509)ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಯುವಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಅಪಘಾತವಾಗುತ್ತಿದ್ದಂತೆ ಸ್ಥಳದಿಂದ ಬಸ್ ಚಾಲಕ, ನಿರ್ವಾಹಕ ನಾಪತ್ತೆಯಾಗಿದ್ದಾರೆ. ಈ ಸಂಬಂಧ ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಪಾಲಸ್ವಾಮಿಬೆಟ್ಟ ತಪ್ಪಲಿನಲ್ಲಿ ಬಸ್ ಷೆಲ್ಟರ್‌ಗೆ ಭೂಮಿಪೂಜೆ



ಬಸ್ ಷೆಲ್ಟರ್ ನಿರ್ಮಾಣಕ್ಕೆ ಗಣೇಶ್ ಪ್ರಸಾದ್ ಭೂಮಿ ಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ ಜ.13(ಸೋಮ್.ಜಿ)– ತಾಲೂಕಿನ ಹಿಮವದ್ ಗೋಪಾಲ ಸ್ವಾಮಿ ಬೆಟ್ಟಕ್ಕೆ ಹೋಗುವ ಪ್ರಯಾಣಿಕರ ಅನುಕೂಲಕ್ಕೆ ಬಸ್ ಷೆಲ್ಟರ್ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ಗೋಪಾಲಸ್ವಾಮಿಬೆಟ್ಟದ ತಪ್ಪಲಿನಲ್ಲಿ ಸೋಮವಾರ 20ಲಕ್ಷ ವೆಚ್ಚದಲ್ಲಿ ಬಸ್ ಷೆಲ್ಟರ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಬೆಟ್ಟಕ್ಕೆ ಹೋಗುವ ಪ್ರಯಾಣಿಕರು ಬೇಸಿಗೆಯಲ್ಲಿ ಬಿಸಿಲು ಹಾಗೂ ಮಳೆಗಾಲದಲ್ಲಿ ಸರದಿ ಸಾಲಿನಲ್ಲಿ ನಿಂತು ಕಾಯುವಂತಾಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದ ಹಿನ್ನೆಲೆಯಲ್ಲಿ ಬಸ್ ಷೆಲ್ಟರ್ ನಿರ್ಮಿಸಲಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಪಾರ್ಕಿಂಗ್‌ನಲ್ಲಿ ಅರಣ್ಯ ಇಲಾಖೆ ನಿರ್ಮಿಸಿದ್ದ ಶೌಚಾಲಯವನ್ನು ಉದ್ಘಾಟಿಸಿದರು.

ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್, ವಲಯಾರಣ್ಯಾಧಿಕಾರಿ ಬಿ.ಎಂ. ಮಲ್ಲೇಶ್, ಪ್ರಧಾನ ಅರ್ಚಕ ಗೋಪಾಲ ಕೃಷ್ಣಭಟ್, ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡ ಪ್ರಸಾದ್, ಎಚ್.ಎಸ್. ನಂಜಪ್ಪ ಸೇರಿದಂತೆ ಹಲವರು ಇದ್ದರು.

ನಾಳೆ ಮೈಸೂರಿನಲ್ಲಿ ಬಿಎಸ್‌ಪಿ ಸಮಾವೇಶ

ಚಾಮರಾಜನಗರ, ಜ.13–ಬಹುಜನ ಸಮಾಜ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮಾಯಾವತಿ 67ನೇ ಹುಟ್ಟುಹಬ್ಬದ ಅಂಗವಾಗಿ ಜ.15ರಂದು ಮೈಸೂರಿನಲ್ಲಿ ಬಿಎಸ್‌ಪಿ ಕಾರ್ಯಕರ್ತರ ಪ್ರೇರಣಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಕಾರ್ಯದರ್ಶಿ ಎನ್.ನಾಗಯ್ಯ ಹೇಳಿದರು.

ದೇಶದಲ್ಲಿ ಆಡಳಿತ ನಡೆಸಿದ ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಇತರೆ ಪಕ್ಷಗಳು ಶೋಷಿತ ಸಮುದಾಯಗಳ ಆಶಯಗಳನ್ನು ಈಡೇರಿಸದೇ ನಿರ್ಲಕ್ಷ್ಯ ವಹಿಸಿವೆ. ಬಿಎಸ್‌ಪಿ ಪಕ್ಷದ ಪ್ರಣಾಳಿಕೆಯಾದ ಸಂವಿಧಾನ ಯಥಾವತ್ ಜಾರಿ ಸೇರಿದಂತೆ ಬಹು ಜನರು ಹೇಗೆ ತಮ್ಮ ಸ್ವಾಭಿಮಾನದಿಂದ ಬದುಕಬೇಕು ಎಂಬು ದರ ಬಗ್ಗೆ ಜಾಗೃತಿ ಮೂಡಿಸುವುದೇ ಸಮಾವೇಶದ ಉದ್ದೇಶವಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆಯುವ ಬಿಎಸ್‌ಪಿ ಕಾರ್ಯಕರ್ತರ ಪ್ರೇರಣಾ ಸಮಾವೇಶದಲ್ಲಿ ಬಹುಜನ ಸಮಾಜ ಪಕ್ಷದ ರಾಷ್ಟ್ರೀಯ ಸಂಯೋಜಕ ರಾಜಾರಾಮ್, ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಹ.ರಾ.ಮಹೇಶ್ ಸೇರಿದಂತೆ ಮೈಸೂರು ವಿಭಾಗ ಮಟ್ಟದ ಪದಾಧಿಕಾರಿಗಳು ಭಾಗವಹಿಸುವರು. ಸಮಾವೇಶಕ್ಕೆ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ರಾಜ್ಯ ಕಾರ್ಯಕಾರಣಿ ಸದಸ್ಯ ಬ್ಯಾಡಮೂಡ್ಲು ಬಸವಣ್ಣ, ಜಿಲ್ಲಾಧ್ಯಕ ಕೃಷ್ಣಮೂರ್ತಿ, ಪುಟ್ಟಸ್ವಾಮಿ ರಾಮಸಮುದ್ರ, ಬಿಸಲವಾಡಿ ಗ್ರಾಪಂ ಅಧ್ಯಕ್ಷ ಬಾಲರಾಜು, ಖಜಾಂಚಿ ಶಿವ ಶಂಕರ್, ಚಂದ್ರಕಾಂತ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಕುದೇರಿನಲ್ಲಿ ಆದಿನಾಥ ತೀರ್ಥಂಕರರ ವಾರ್ಷಿಕ ಪೂಜೆ

ಚಾಮರಾಜನಗರ, ಜ.13–ತಾಲೂಕಿನ ಕುದೇರು ಗ್ರಾಮದಲ್ಲಿನ ಶ್ರೀ ಆದಿನಾಥ ತೀರ್ಥಂಕರ ದಿಗಂಬರ ಜೈನ ಬಸದಿಯಲ್ಲಿ ವಾರ್ಷಿಕಪೂಜಾ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು

ಆರತಿಪುರ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಸಿದ್ದಾಂತಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಪೂಜಾ ವಿಧಿವಿಧಾನದ ಬಗ್ಗೆ ಪ್ರವಚನ ನೀಡಿದರು.

ಬೆಳಗ್ಗೆ ಮೈಸೂರಿನ ಸಂಗೀತ ವಿದ್ವಾನ್ ಎನ್ ಶ್ರೀನಾಥ್, ಹಾಗೂ ಅವರ ಮಗ ರಜತ್ ಶರ್ಮರವರಿಂದ ಜಿನ ಗೀತೆಗಳ ಗಾಯನವನ್ನು ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಪ್ರಧಾನ ಅರ್ಚಕ ವಸುಪಾಲ್ ಚಾಮರಾಜನಗರ ದಿಗಂಬರ ಜೈನ ಸಮಾಜದ ಅಧ್ಯಕ್ಷ ನಿರ್ಮಲ್ ಕುಮಾರ್, ಮೈಸೂರಿನ ದಿಗಂಬರ ಜೈನ ಸಮಾಜದ ಅಧ್ಯಕ್ಷ ಸುನಿಲ್ ಕುಮಾರ್, ಹಿರಿಯರಾದ ಸುರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಸಾಧನ ರವೀಂದ್ರನಾಥ್ ಪ್ರಾರ್ಥಿಸಿದರೆ, ಎಲ್ ಅರುಣ್ ಕುಮಾರ್ ಪಂಡಿತ್ ಸ್ವಾಗತಿಸಿದರು. ಜೈನ ಸಮಾಜದ ಗಣ್ಯರು, ಅಪಾರ ಸಂಖ್ಯೆಯ ಭಕ್ತರು, ಗ್ರಾಮಸ್ಥರು ಹಾಜರಿದ್ದರು.



ಕುದೇರಿನಲ್ಲಿ ನಡೆದ ಸಮಾರಂಭದಲ್ಲಿ ಆರತಿಪುರ ಮಠದ ಸ್ವಾಮೀಜಿ ಮಾತನಾಡಿದರು.

ಪಾರ್ವತಮ್ಮ ನಿಧನ



ಬೇಗೂರು, ಜ.13– ಸಮೀಪದ ಕಮರಹಳ್ಳಿ ಗ್ರಾಮದ ನಿವಾಸಿ ಪಾರ್ವತಮ್ಮ (95) ಸೋಮವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು ಹಾಗೂ ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕಮರಹಳ್ಳಿ ಜಮೀನಿನಲ್ಲಿ ಮಂಗಳವಾರ ನಡೆಯಿತು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಸರ ಕೊಡುಗೆ ಅಪಾರ

ಯಳಂದೂರು, ಜ.13–ಬದುಕಿದ್ದು ಅಲ್ಪ ಕಾಲವಾದರೂ ಸಾಧಿಸಿದ್ದು ಅಪಾರ ಎಂಬಂತೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನಾಟಕಕಾರ ಅಗರ ಸಂಸರವರು ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಪ್ರಾಂಶುಪಾಲ ವಿಜಯ್ ತಿಳಿಸಿದ್ದಾರೆ.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಸಂಸರ ಜನ್ಮದಿನಾಚರಣೆ ಯಲ್ಲಿ ಭಾಗವಹಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ತಾಲೂಕಿನ ಅಗರ ಗ್ರಾಮದ ನರಸಿಂಹ ಪಂಡಿತರು ಹಾಗೂ ಗೌರಮ್ಮ ದಂಪತಿಗಳ ಪುತ್ರರಾದ ಎ.ಎನ್.ಸ್ವಾಮಿ ವೆಂಕಟಾದ್ರಿ ಅಯ್ಯರ್ ಸಾಹಿತ್ಯ ಲೋಕದಲ್ಲಿ ಸಂಸ ಎಂದು ಚಿರಪರಿಚಿತರಾಗಿದ್ದಾರೆ.

ಶಿಕ್ಷಕ ಹಾಗೂ ಸಾಹಿತಿ ಗುಂಬಳ್ಳಿ ಬಸವರಾಜು ಮಾತನಾಡಿ, ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಆಸುಪಾಸಿನಲ್ಲಿ ನಡೆಯುತ್ತಿದ್ದ ಚಿತ್ರಣಗಳನ್ನು ಆಧರಿಸಿ ಸುಗುಣ ಗಂಭೀರ ಎಂಬ ನಾಟಕವನ್ನು ರಚಿಸಿದ ಸಂಸ ರವರಿಗೆ ಕಂಠೀರವ ನರಸರಾಜ ಕನ್ನಡ ನಾಟಕ ಸ್ಪರ್ಧೆಯಲ್ಲಿ ಎರಡನೆ ಬಹುಮಾನ ಲಭಿಸಿದೆ. ದೇಶವಿದೇಶಗಳನ್ನು ಸುತ್ತಿ ಬಂದ ಸಂಸ ಅವರು ಷರ್ಲಾಕ್ ಹೋಮ್ಸ್ ಇನ್ ಜೈಲ್ ಎಂಬ ಕಾದಂಬರಿ ಹಾಗೂ ಲಾಲಿ ಅಂಡ್ ಮಮ್ಮಲ್ ಎಂಬ ನಾಟಕವನ್ನು ರಚಿಸುವ ಮೂಲಕ 21ನೇ ಶತಮಾನದಲ್ಲಿ ತಾಲೂಕಿನ ಕೀರ್ತಿಪತಾಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದ್ದಾರೆ. ಇಂತಹ ಮಹನೀಯರು ನಮ್ಮ ತಾಲೂಕಿನವರು ಎಂಬುದು ಹೆಮ್ಮೆಯ ವಿಷಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಿಷತ್ ಅಧ್ಯಕ್ಷ ಯರಿಯೂರು ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದರು. ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಭೀಮಪ್ಪ, ಕಸಾಪ ಕಾರ್ಯದರ್ಶಿ ಡಿ.ಪಿ.ಮಹೇಶ್, ಕೋಶಾಧ್ಯಕ್ಷ ಫೈರೋಜ್‌ಖಾನ್, ಕಾರ್ಯಕಾರಿ ಸಮಿತಿ ಸದಸ್ಯರಾದ ವೈ.ಎಂ.ಭಾನುಪ್ರಕಾಶ್, ವೈ.ಕೆ.ಮೋಳೆ ನಾಗರಾಜು, ಅಂಬಳೆ ಜೈಗುರು, ಬಳೇಪೇಟೆ ಲಿಂಗರಾಜಮೂರ್ತಿ, ವಿ.ನಾಗರಾಜು, ಪ್ರಕಾಶ್, ಯರ ಗಂಬಳ್ಳಿ ಸಿದ್ದರಾಜು, ಧನರಾಜು, ರಘು, ನಂಜೇಶ್ ಸೇರಿದಂತೆ ಇತರರು ಹಾಜರಿದ್ದರು.

ಶಿವಮ್ಮ ನಿಧನ



ಬೇಗೂರು: ಗುರುಕಾರ್ ಬಸವರಾಜಪ್ಪರ ಧರ್ಮಪತ್ನಿ ಶಿವಮ್ಮ (80) ನಂಜನಗೂಡಿನಲ್ಲಿ ಮಂಗಳವಾರ ಬೆಳಿಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಹಾಗೂ ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬೇಗೂರಿನ ತೋಟದಲ್ಲಿ ಸಂಜೆ ನಡೆಯಿತು.

ನಾಗೇಂದ್ರಸ್ವಾಮಿ ನಿಧನ



ಚಾಮರಾಜನಗರ. ಜ13–ತಾಲೂಕಿನ ವಿ.ಸಿ.ಹೊಸೂರು ಗ್ರಾಮದ ಮಹದೇವಪ್ಪನವರ ಪುತ್ರ ಶ್ರೀ ನಾಗೇಂದ್ರಸ್ವಾಮಿ (62) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ವಿ.ಸಿ. ಹೊಸೂರಿನಲ್ಲಿ ನೆರವೇರುವುದು ಎಂದು ಕುಟುಂಬದ ಮೂಲಗಳು ತಿಳಿಸಿದ್ದಾರೆ.

ನಿಗದಿತ ದಿನಾಂಕದೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಪಾಲಿಕೆ ಚುನಾವಣೆಗೆ ಸಿದ್ಧ

• ಚುನಾವಣಾ ಆಯೋಗಕ್ಕೆ ಶಿಫಾರಸು: ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ • ಕಾರ್ಯಕರ್ತರಿಗೆ ಅಧಿಕಾರ ನೀಡುವ ನಿರ್ಧಾರ

ಬೆಂಗಳೂರು, ಜ.13(ಕೆಎಂಶಿ)–ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನಿಗದಿತ ದಿನಾಂಕದೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ಪಾಲಿಕೆಗಳ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಚುನಾವಣಾ ಆಯೋಗ ನ್ಯಾಯಾಲಯದ ಮುಂದೆ ಪ್ರಮಾಣ ಪತ್ರ ಸಲ್ಲಿಸಿದೆ, ಸರ್ಕಾರ ತನ್ನ ಶಿಫಾರಸು ಮಾಡಲಿದೆ. ಇದಲ್ಲದೆ, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆಗೆ ಸಂಬಂಧಿಸಿದಂತೆಯೂ ನಿರ್ಧಾರ ಕೈಗೊಳ್ಳಲಿದೆ. ಸಂವಿಧಾನದ 73 ಹಾಗೂ 74ನೇ ತಿದ್ದುಪಡಿ ಅನುಸಾರ ಎಲ್ಲಾ ತೀರ್ಮಾನ



ಮಾಡಲಾಗುವುದು ಎಂದರು. ಮೀಸಲಾತಿ ಸಂಬಂಧ ಕೆಲವರು ಆಕ್ಷೇಪಣೆ ಸಲ್ಲಿಸುತ್ತಾರೆ. ಪರಿಶೀಲನೆಗೆ ಸಮಿತಿ ರಚಿಸಿದ್ದು, ತೀರ್ಮಾನ ಕೈಗೊಳ್ಳಲಿದೆ.

ಮಹಿಳೆಯರ ಮೀಸಲಾತಿ ಕಡಿಮೆಯಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ಇದನ್ನೂ ಪರಿಶೀಲಿಸಿ, ತಪ್ಪಾಗಿದ್ದರೆ ಸರಿಪಡಿಸಲು ಸೂಚಿಸಲಾಗುವುದು. ಸರ್ಕಾರ ಯಾವುದರಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ.

ಚುನಾವಣೆ ನಡೆಸುವ ಸಂಬಂಧ ನ್ಯಾಯಾಲಯದ ಮುಂದೆ ಯಾವುದೇ ಕಾಲಾವಕಾಶ ಕೇಳುವುದಿಲ್ಲ. ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುವುದು ನಮ್ಮ ಕರ್ತವ್ಯ. ಕಾರ್ಯಕರ್ತರಿಗೆ ಅಧಿಕಾರ ಕೊಡಲು ಹೊಸ ನಾಯಕರನ್ನು ತಯಾರು ಮಾಡುತ್ತಿದ್ದೇವೆ. ನಮ್ಮ ಕಾರ್ಯಕ್ಕೆ ಜನ ಬೆಂಬಲದ ವಿಶ್ವಾಸವಿದೆ. ಐದೂ ಪಾಲಿಕೆಗಳ ಚುನಾವಣೆಯಲ್ಲಿ ಗೆಲ್ಲುತ್ತೇವೆ.

ಬಿಜೆಪಿ ಹಾಗೂ ಜೆಡಿಎಸ್ ಫ್ರೆಂಡ್ಲಿ ಫೈಟ್ ಆದರೂ ಮಾಡಿಕೊಳ್ಳಲಿ, ಜೊತೆಯಾಗಿಯಾದರೂ ಸ್ಪರ್ಧಿಸಲಿ, ಬೇರೆ ಬೇರೆಯಾಗಿ ಬೇಕಾದರೂ ಸೆಣಸಲಿ, ಸಂಘಟಿತರಾಗಿ ವಿಧಾನಸಭೆ ಹಾಗೂ ಪಾಲಿಕೆ ಚುನಾವಣೆ ಎದುರಿಸಿದರೆ ನೇರ ಹಣಾಹಣಿ ಇರುತ್ತದೆ ಎಂದರು.

ಇರಾನ್‌ನಲ್ಲಿ 2,000 ಮಂದಿ ಸಾವು; ಭಯೋತ್ಪಾದಕರು ಕಾರಣ ಎಂದ ಅಧಿಕಾರಿಗಳು

ಟೆಹರಾನ್: ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಈವರೆಗೆ ಸುಮಾರು 2,000 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ ನಾಗರಿಕರು ಮತ್ತು ಭದ್ರತಾ ಸಿಬ್ಬಂದಿಯ ಸಾವಿಗೆ ಭಯೋತ್ಪಾದಕರು ಕಾರಣ ಎಂದು ಇರಾನ್ ಅಧಿಕಾರಿಗಳು ಆರೋಪಿಸಿದ್ದಾರೆ. ಇದು ಭಯೋತ್ಪಾದಕರ ವಿರುದ್ಧದ ಯುದ್ಧ ಎಂದು ಇರಾನ್ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಅಮೆರಿಕ ಮೂಲದ ಮಾನದ ಹಕ್ಕುಗಳ ಕಾರ್ಯಕರ್ತರ ಸುದ್ದಿ ಸಂಸ್ಥೆಯ ವರದಿಯ ಪ್ರಕಾರ, ಇರಾನ್‌ನ 31 ಪ್ರಾಂತ್ಯಗಳಲ್ಲಿ 600ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದಿವೆ. ಈವರೆಗೆ 10 ಸಾವಿರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಹೇಳಿದೆ. ಇರಾನ್‌ನಲ್ಲಿ ಇಂಟರ್‌ನೆಟ್ ಹಾಗೂ ದೂರವಾಣಿ ಸಂಪರ್ಕ ಕಡಿತಗೊಳಿಸಲಾಗಿದೆ. ಇದರಿಂದಾಗಿ ಪ್ರತಿಭಟನೆ ಕುರಿತು ಹೆಚ್ಚಿನ ಮಾಹಿತಿ ಕಲೆ ಹಾಕುವುದು ಕಷ್ಟಕರವಾಗಿದೆ. ಪ್ರತಿಭಟನೆಯ ಕುರಿತು ಪತ್ರಕರ್ತರಿಗೆ ವರದಿ ಮಾಡಲು ಸಾಧ್ಯವಾಗುತ್ತಿಲ್ಲ. ಆರ್ಥಿಕ ಕುಸಿತದ ವಿರುದ್ಧ ಆರಂಭವಾದ ಪ್ರತಿಭಟನೆ ದೇಶದಾದ್ಯಂತ ಪಸರಿಸಿದೆ. ಈ ನಡುವೆ ಪ್ರತಿಭಟನಾಕಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಸಿದೆ.

ದೇವಲಾಪುರ ಕ್ರಾಸ್ ಸಮೀಪ ಮೇಲ್ಸೇತುವೆ ನಿರ್ಮಿಸಲು

48 ಮರ ಕಡಿಯುವ ಪ್ರಸ್ತಾಪಕ್ಕೆ ತೀವ್ರ ವಿರೋಧ

ಸಾರ್ವಜನಿಕ ಅಹವಾಲು ಸಭೆಯಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆಯಿಂದ ಆಕ್ಷೇಪ

ಮೈಸೂರು, ಜ.13(ಪಿಎಂ)– ರಾಷ್ಟ್ರೀಯ ಹೆದ್ದಾರಿ 275ರ ದೇವಲಾಪುರ ಕ್ರಾಸ್ ಸಮೀಪ ಮೇಲ್ಸೇತುವೆ ನಿರ್ಮಿಸುವ ಸಂಬಂಧ 48 ಮರಗಳನ್ನು ಕಡಿಯುವ ಪ್ರಸ್ತಾಪಕ್ಕೆ ಸಾರ್ವಜನಿಕ ಅಹವಾಲು ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು.

ದೇವಲಾಪುರ ಜಂಕ್ಷನ್‌ನಲ್ಲಿ ಅರಣ್ಯ ಇಲಾಖೆ ಮೈಸೂರು ಹಾಗೂ ರಾಷ್ಟ್ರೀಯ ಹೆದ್ದಾರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಜಂಟಿ ಆಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ ಸಭೆಯಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆ ಸದಸ್ಯರು ಮತ್ತು ಸಮೀಪದ ಹೊಸಹುಂಡಿ ಗ್ರಾಮಸ್ಥರು, ಮರಗಳನ್ನು ಕಡಿಯುವ ಪ್ರಸ್ತಾಪ ಕೈಬಿಡಬೇಕೆಂದು ಒತ್ತಾಯಿಸಿದರು.

ಇಲ್ಲಿ ಅಪಘಾತಗಳನ್ನು ತಡೆಗಟ್ಟಲು ಮರಗಳನ್ನು ಕಡಿದು ಮೇಲ್ಸೇತುವೆ ನಿರ್ಮಿಸುವುದೇ ಪರಿಹಾರವಲ್ಲ. ಇದರ ಬದಲಿಗೆ ಸಿಗ್ನಲ್ ವ್ಯವಸ್ಥೆ, ರಸ್ತೆ ಉಬ್ಬುಗಳು, ಸಂಚಾರ ಚಿಹ್ನೆಗಳ ಅಳವಡಿಕೆ ಮಾಡಬೇಕೆಂದು ಆಗ್ರಹಿಸಿದರು.

'ಪರಿಸರಕ್ಕಾಗಿ ನಾವು' ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಮರಗಳನ್ನು ಕಡಿದು ಮೇಲ್ಸೇತುವೆ ಕಟ್ಟುವುದು ಕಟ್ಟಕಡೆಯ ಆಯ್ಕೆಯಾಗಬೇಕು. ಬಹುಮುಖ್ಯವಾಗಿ ಪರ್ಯಾಯ ಮಾರ್ಗೋಪಾಯಗಳಿಗೆ ಮೊದಲ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಸಂಘಟನೆ ಕಾರ್ಯಕರ್ತ ಶೈಲಜೇಶ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಇಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕೊನೆ ಹಂತದಲ್ಲಿ ಕಾಟಾಚಾರಕ್ಕೆ ಈ ಸಭೆ ನಡೆಸುತ್ತಿದೆ. ಇಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ಮಾಡಿಲ್ಲ ಎಂದು ದೂರಿದರು.

ಸಂಘಟನೆ ರವಿಬಳೆ ಮಾತನಾಡಿ, ಕಡಿಮೆ ವೆಚ್ಚದಲ್ಲಿ ಸೂಕ್ತ ಮಾರ್ಗೋಪಾಯ ಕಂಡುಕೊಳ್ಳಲು ಅವಕಾಶ ಇದ್ದರೂ ಅದಕ್ಕೆ ಆದ್ಯತೆ ನೀಡುತ್ತಿಲ್ಲ. ಬದಲಿಗೆ ಅತ್ಯಧಿಕ ವೆಚ್ಚದೊಂದಿಗೆ ಹೊಸ ನಿರ್ಮಾಣದತ್ತ ಆಡಳಿತ ಆಸಕ್ತಿ



ದೇವಲಾಪುರ ಜಂಕ್ಷನ್‌ನಲ್ಲಿ ಸಾರ್ವಜನಿಕ ಅಹವಾಲು ಸಭೆ ನಡೆಯಿತು.

ವಹಿಸುತ್ತಿರುವುದು ನೋಡಿದರೆ 40 ಪರ್ಸೆಂಟ್ ಕಮಿಷನ್ ಇದರ ಹಿಂದಿನ ಉದ್ದೇಶವೇ ಎಂಬ ಅನುಮಾನ ಮೂಡದಿರದು ಎಂದು ಶಂಕೆ ವ್ಯಕ್ತಪಡಿಸಿದರು.

ಲೀಲಾ ಶಿವಕುಮಾರ್ ಮಾತನಾಡಿ, ಮರಗಳನ್ನು ಉಳಿಸಿಕೊಂಡು ಪರಿಸರ ಸ್ನೇಹಿಯಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಆದ್ಯತೆ ನೀಡಬೇಕೆಂದು ಒತ್ತಾಯಿಸಿದರು. ಸ್ಥಳೀಯ ಮುಖಂಡ ಕೃಷ್ಣ ಮಾತನಾಡಿ, ಇಲ್ಲಿ ಮರಗಳನ್ನು ಕಡಿದು ಮೇಲ್ಸೇತುವೆ ಕಟ್ಟುವ ಅಗತ್ಯವಿಲ್ಲ. ಒಂದೇ ಒಂದು ಮರ ಕಡಿಯಲು ಸಹ ಇಲ್ಲಿನ ಸ್ಥಳೀಯರು ಅವಕಾಶ ನೀಡುವುದಿಲ್ಲ ಎಂದು ಪ್ರಕಟಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಪರಶುರಾಮೇಗೌಡ, ಮರಗಳನ್ನು ಕಡಿಯಲು ಸಭೆಯಲ್ಲಿ ಒಕ್ಕೊರಲಿನ ವಿರೋಧ ವ್ಯಕ್ತವಾಯಿತು. ಇದಕ್ಕೆ ಮಣಿದು, ಮರಗಳನ್ನು ಕಡಿಯುವುದು ನಮ್ಮ ಆದ್ಯತೆಯಲ್ಲ. ಮರಗಳನ್ನು ಉಳಿಸುವುದು ನಮ್ಮ ಇಲಾಖೆಯ ಆದ್ಯತೆ. ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಇಲಾಖೆಯ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ಆ ಮೂಲಕ ಮರಗಳನ್ನು ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಅದೇ ರೀತಿ ಅಪಘಾತಗಳನ್ನು ತಪ್ಪಿಸಲು ಸಭೆಯಲ್ಲಿ ಸೂಚಿಸಿದ ಪರ್ಯಾಯ ಮಾರ್ಗಗಳನ್ನು ಕಾರ್ಯಗತಗೊಳಿಸಲು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳಿಗೆ ತಿಳಿಸಿ, ಮೇಲ್ಸೇತುವೆ ನಿರ್ಮಾಣ ಯೋಜನೆ ರದ್ದುಪಡಿಸಲು ಶಿಫಾರಸು ಮಾಡಲಾಗುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹೆಚ್.ಆರ್. ರೂಪ ಸಹ ತಿಳಿಸಿದ್ದಾರೆ ಎಂದು ಅವರು ಹೇಳಿದರು.

ಸಭೆಯಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, 'ಪರಿಸರಕ್ಕಾಗಿ ನಾವು' ಸಂಘಟನೆ ಜಿಲ್ಲಾಧ್ಯಕ್ಷೆ ಲೀಲಾ ವೆಂಕಟೇಶ್, ಕಾರ್ಯಕರ್ತರಾದ ಸುಬ್ಬರಾವ್, ಗಂಟಯ್ಯ, ಭಾಗ್ಯ, ಭಾನು ಪ್ರಶಾಂತ್, ಅಂಜನಾ, ಪ್ರಭಾ, ಗಾಯತ್ರಿ, ಗುರುಸ್ವಾಮಿ, ವಿಶ್ವನಾಥ್, ಸುಗುಣ, ಸುಶೀಲಾ, ಮಧುಶ್ರೀ, ಜಯಲಕ್ಷ್ಮಿ, ಪ್ರಭಾಕರ್, ಅಕ್ಬರ್, ರವಿಕೀರ್ತಿ, ಗಣೇಶ್, ಸಾರ್ಥಕ್ ಮತ್ತಿತರರು ಪಾಲ್ಗೊಂಡಿದ್ದರು.

ಕರೂರು ಕಾಲ್ತುಳಿತ: ವಿಜಯ್‌ಗೆ ಸಿಬಿಐ ಸಮನ್ಸ್

ನವದೆಹಲಿ: ಕರೂರು ಕಾಲ್ತುಳಿತಕ್ಕೆ ಸಂಬಂಧಿಸಿ ಜ.19ರಂದು ಎರಡನೇ ಸುತ್ತಿನ ಪ್ರಶ್ನೋತ್ತರಕ್ಕೆ ಹಾಜರಾಗುವಂತೆ ಟಿವಿಕೆ ಮುಖ್ಯಸ್ಥ ಮತ್ತು ನಟ ವಿಜಯ್ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ.



ಇಲ್ಲಿನ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳು ಸೋಮವಾರ 6ಕ್ಕೂ ಅಧಿಕ ಗಂಟೆ ವಿಜಯ್ ಅವರ ಪ್ರಶ್ನೋತ್ತರ ನಡೆಸಿದ್ದರು. ಎರಡನೇ ಸುತ್ತಿನ ಪ್ರಶ್ನೋತ್ತರಕ್ಕೆ ಮಂಗಳವಾರವೇ ಬರುವಂತೆ ಅಧಿಕಾರಿಗಳು ಹೇಳಿದ್ದರು. ಸಂಕ್ರಾಂತಿ ಇರುವುದರಿಂದ ಮತ್ತೊಂದು ದಿನಾಂಕ ನೀಡಿ ಎಂದು ವಿಜಯ್ ಅವರು ಮನವಿ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿ, ತಮಿಳುನಾಡಿನ ಮಾಜಿ ಎಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ಎಸ್. ಡೇವಿಡ್ಸನ್ ದೇವಾಶೀರ್ವಾದಂ ಸೇರಿ ಕೆಲವು ಪೊಲೀಸ್ ಅಧಿಕಾರಿಗಳನ್ನು ಸಿಬಿಐ ಅಧಿಕಾರಿಗಳು ಸೋಮವಾರ ತನಿಖೆಗೆ ಒಳಪಡಿಸಿದ್ದರು.

ಬಸವಮಾರ್ಗ ಕೇಂದ್ರದಲ್ಲಿ 'ಮನೆಗೊಂದು ಗ್ರಂಥಾಲಯ ಅನುಷ್ಠಾನ'

ಸಮಸ್ಯೆಗಳಿಗೆ ಓದು ಪರಿಹಾರ: ಪ್ರೊ.ಪದ್ಮಾಶೇಖರ್ ಅಭಿಮತ

ಮೈಸೂರು, ಜ.13– ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಬಸವ ಮಾರ್ಗ ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರದ ವತಿಯಿಂದ ಮಂಗಳವಾರ, ಹೆಬ್ಬಾಳಿನ ಬಸವ ಮಾರ್ಗ ವ್ಯಸನಮುಕ್ತ ಪುನರ್ವಸತಿ ಕೇಂದ್ರದಲ್ಲಿ 'ಮನೆಗೊಂದು ಗ್ರಂಥಾಲಯ ಅನುಷ್ಠಾನ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಓದು ಪ್ರಶ್ನಿಸುವ ಮನೋಭಾವವನ್ನು ಬೆಳೆಸುತ್ತದೆ. ಜ್ಞಾನದ ಜೊತೆಗೆ ಸೃಜನಶೀಲತೆಯನ್ನು ಹೆಚ್ಚಿಸುತ್ತದೆ ಎಂದರು.

ಓದು ಎಂದರೆ ಪುಸ್ತಕದ ಹುಳವಾಗುವುದಲ್ಲ. ಬದಲಿಗೆ ಬಲಿಷ್ಠವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ವಿದ್ಯೆಯನ್ನು ನಾವು ಸಾಧಿಸಿಕೊಳ್ಳಬೇಕು. ಜೀವನದ ಎಲ್ಲಾ ಸಮಸ್ಯೆಗಳಿಗೆ ಓದು ಪರಿಹಾರವಾಗಲಿದೆ.



ಮೈಸೂರು ಹೆಬ್ಬಾಳಿನ ಬಸವಮಾರ್ಗ ವ್ಯಸನಮುಕ್ತ ಪುನರ್ವಸತಿ ಕೇಂದ್ರದಲ್ಲಿ 'ಮನೆಗೊಂದು ಗ್ರಂಥಾಲಯ ಅನುಷ್ಠಾನ' ಸಮಾರಂಭವನ್ನು ಪ್ರೊ.ಪದ್ಮಶೇಖರ್ ಉದ್ಘಾಟಿಸಿದರು. ಡಾ.ಈ.ಸಿ.ನಿಂಗರಾಜ್ ಗೌಡ, ಎಸ್.ಬಸವರಾಜು, ಎಂ.ಚಂದ್ರಶೇಖರ್, ದೇವರಾಜು ಪಿ.ಚಿಕ್ಕಹಳ್ಳಿ, ಕುಮಾರಸ್ವಾಮಿ ಚಿತ್ರದಲ್ಲಿದ್ದಾರೆ.

ಓದಿನ ರುಚಿ ಹತ್ತಿಸಿಕೊಳ್ಳದೆ ಇರುವ ಕಾರಣದಿಂದಲೇ ಇಂದಿನ ಯುವಜನತೆ ಹಾದಿ ತಪ್ಪುತ್ತಿದ್ದಾರೆ. ನಾನಾ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ಒಂದು ಪುಸ್ತಕ ನೂರು ಸ್ನೇಹಿತರಿಗೆ ಸಮಾನ. ಪುಸ್ತಕವನ್ನು ತಲೆ ತಗ್ಗಿಸಿ ಓದಿದರೆ, ಅದು ತಲೆ ಎತ್ತಿ ಓಡಾಡುವಂತೆ ಮಾಡುತ್ತದೆ ಎಂದರು.

> ವ್ಯಕ್ತಿ ತಲೆ ಎತ್ತಿ ನಡೆಯುವಂತೆ ಮಾಡುವುದು ಪುಸ್ತಕಗಳು. ಇವು ಉತ್ತಮ ವ್ಯಕ್ತಿತ್ವವನ್ನು ನಿರ್ಮಾಣ ಮಾಡುತ್ತವೆ. ನಾನು ಕುಡಿತಕ್ಕೆ ದಾಸನಾಗಿದ್ದೆ. ಬಳಿಕ ವ್ಯಸನಮುಕ್ತ ಜೀವನ ನಡೆಸಬೇಕೆಂದು ನಿರ್ಧರಿಸಿದಾಗ ಪುಸ್ತಕಗಳು ನನಗೆ ನೆರವಾದವು. ಓದು ಪ್ರತಿಯೊಬ್ಬರಿಗೂ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಬಸವಮಾರ್ಗ ಸಂಸ್ಥೆಯಿಂದ ಸರ್ಕಾರಿ ಶಾಲೆಯನ್ನು ದತ್ತು ಪಡೆದು, ನಿರ್ವಹಿಸಲಾಗುತ್ತಿದೆ. ಅಗತ್ಯವಿರುವ ಮಕ್ಕಳಿಗೆ ಉಚಿತ ವಸತಿ ನಿಲಯ ಕಲ್ಪಿಸಲಾಗಿದೆ. ಸಂಸ್ಥೆಯ 6ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ವ್ಯಸನಕ್ಕೆ ದಾಸರಾದ ಪಾಲಕರ ಮಕ್ಕಳನ್ನು ದತ್ತು ಪಡೆಯುವ ಯೋಜನೆ ಮಾಡಲಾಗುತ್ತಿದೆ. ನಿಮ್ಮ ಮಕ್ಕಳನ್ನು ನಮ್ಮ ಸಂಸ್ಥೆಗೆ ನೀಡಿದರೆ ಅಂತ ಮಕ್ಕಳ ಸಂಪೂರ್ಣ ಓದಿನ ಖರ್ಚನ್ನು ನೋಡಿಕೊಳ್ಳಲಾಗುವುದು.
>
> -ಎಸ್.ಬಸವರಾಜು, ಸಂಸ್ಥಾಪಕ, ಬಸವಮಾರ್ಗ

ಮನೆಗೊಂದು ಗ್ರಂಥಾಲಯ ಜಿಲ್ಲಾ ಸಂಚಾಲಕ ಎಂ.ಚಂದ್ರಶೇಖರ್ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನದ ಕದಂಬ ಬಾಹುಗಳ ನಡುವೆ ಪುಸ್ತಕ ಓದುವ ಸಂಸ್ಕೃತಿ ಮರೆಯಾಗುತ್ತಿದೆ. ಓದುವ ಹವ್ಯಾಸ ಬೆಳಸಿಕೊಂಡರೆ ನಮಗೆ ಉತ್ತಮ ಸಂಗಾತಿ ಸಿಕ್ಕಂತಾಗುತ್ತದೆ. ಪುಸ್ತಕ ಓದುವುದರಿಂದಲೇ ಮಹಾನ್ ವ್ಯಕ್ತಿಗಳಾಗಿ ಸಾಧಿಸಿರುವ ನಿದರ್ಶನಗಳು ಸಾಕಷ್ಟಿವೆ ಎಂದು ಹೇಳಿದರು.

ಈ ವೇಳೆ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು, ಶಿಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ಶರಣ ದೇವರಾಜು ಪಿ.ಚಿಕ್ಕಹಳ್ಳಿ, ಸಮಾಜ ಸೇವಕ ಕುಮಾರಸ್ವಾಮಿ ಇದ್ದರು.

'ಜೈ ಬಾಂಗ್ಲಾದೇಶ' ಘೋಷಣೆ ಕೂಗಿದ ಮಹಿಳೆ ಬಂಧನ

ಬೆಂಗಳೂರು: ಬೆಂಗಳೂರಿನಲ್ಲಿ ಜೈ ಬಾಂಗ್ಲಾ ಎಂದು ಘೋಷಣೆ ಕೂಗಿದ್ದ ಮಹಿಳೆಯನ್ನ ಹೆಬ್ಬಗೋಡಿ ಪೊಲೀಸರು ಮಂಗಳವಾರ ಬಂಧನಕ್ಕೊಳಪಡಿಸಿದ್ದಾರೆ.



ಎಲೆಕ್ಟ್ರಾನಿಕ್‌ಸಿಟಿ ಹುಲಿ ಮಂಗಲದಲ್ಲಿ ಅಕ್ರಮವಾಗಿ ನೆಲೆ ಸಿದ್ದ ವಲಸಿಗರನ್ನ ತೆರವು ಕಾರ್ಯಾಚರಣೆ ಮಾಡುತ್ತಿದ್ದ ವೇಳೆ ಶರ್ಬಾನು ಖತನ್ ಜೈ ಬಾಂಗ್ಲಾ ಎಂದು ಘೋಷಣೆ ಕೂಗಿದ್ದಳು. ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮಹಿಳೆಯನ್ನ ಬಂಧಿಸಿದ್ದಾರೆ. ಬಂಧಿತೆಯನ್ನು ಸರ್ಬಾನು ಖಾತುನ್ ಎಂದು ಗುರ್ತಿಸಲಾಗಿದೆ. ಸದ್ಯ ಮಹಿಳೆಯನ್ನು ಬಂಧಿಸಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಸರ್ಕಾರದ ವಿರುದ್ಧ ಸರಣಿ ಹೋರಾಟ

ಬಳ್ಳಾರಿ, ಬಾಗಲಕೋಟೆ, ಮೈಸೂರು, ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಇದೇ 17 ರಂದು ಬಳ್ಳಾರಿಯಲ್ಲಿ ಬೃಹತ್ ಹೋರಾಟ ಆಯೋಜಿಸಲಾಗಿದ್ದು, ಆ ಬಳಿಕ ಸರ್ಕಾರದ ವೈಫಲ್ಯಗಳ ವಿರುದ್ಧ ವಿವಿಧ ಜಿಲ್ಲೆಗಳಲ್ಲಿ ಸರಣಿ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ಸಂಸದರಾದ ಜಗದೀಶ ಶೆಟ್ಟರ್ ಹಾಗೂ ಗೋವಿಂದ ಕಾರಜೋಳ ಅವರ ಜತೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ವಿವಿಧ ಭರವಸೆಗಳನ್ನು ನೀಡಿ ಒಂದೂ ಈಡೇರಿಸದೇ ಸರ್ಕಾರ ವಂಚನೆ ಮಾಡಿದೆ. ಇದನ್ನು ಖಂಡಿಸಿ ಬಾಗಲಕೋಟೆಯಲ್ಲಿ ಹೋರಾಟ ನಡೆಸಲಿದ್ದೇವೆ ಎಂದು ಹೇಳಿದರು.

ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಹಣ ಪಾವತಿ ಸಂಬಂಧ ಬೆಳಗಾವಿ ಅಧಿವೇಶನದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸುಳ್ಳು ಮಾಹಿತಿ ನೀಡಿದ್ದರು. ಗೃಹಲಕ್ಷ್ಮಿ ಹಣದ ಪಾವತಿ ಮಾಡದೇ ಇರುವುದನ್ನು ಖಂಡಿಸಿ ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ ಡ್ರಗ್ಸ್ ಹಾವಳಿ ತೀವ್ರವಾಗಿ ಏರಿಕೆಯಾಗಿದೆ. ಯುವಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಇದರ ವಿರುದ್ಧ ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ವಿಬಿ ಜಿ ರಾಮ್ ಜಿ ವಿರುದ್ಧ ಷಡ್ಯಂತ್ರ: ಗ್ರಾಮೀಣ ಜನರ ಸ್ನೇಹಿ 'ವಿಬಿ ಜಿ ರಾಮ್ ಜಿ' ಯೋಜನೆ ಕುರಿತು ಅಪಪ್ರಚಾರ ನಡೆಸಲು ಕಾಂಗ್ರೆಸ್ ಷಡ್ಯಂತ್ರ ನಡೆಸಿದೆ ಎಂದು ಬಿ.ವೈ.ವಿಜಯೇಂದ್ರ ಬೆಂಗಳೂರಲ್ಲಿ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು. ರಾಜ್ಯದ ಜನತೆ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಈ ವಿಚಾರ ಗೊತ್ತಾಗುತ್ತಿದ್ದಂತೆ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯ್ತಿ ಚುನಾವಣೆ ಮುಂದೂಡಿ ನರೇಗಾ ವಿಷಯವನ್ನು ಕೈಗೆತ್ತಿಕೊಂಡಿದೆ. ರಾಹುಲ್‌ಗಾಂಧಿ ಸಿದ್ದರಾಮಯ್ಯ ಅಪಪ್ರಚಾರದ ಷಡ್ಯಂತ್ರ ರೂಪಿಸಿದ್ದಾರೆ ಎಂದರು.

ಅಭಿನಂದನೆ



ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ಕಾರ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಉದ್ಯಮಿ ಹಾಗೂ ಬಿಜೆಪಿ ಮುಖಂಡ ಎಸ್.ಕೆ.ದಿನೇಶ್ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ವಾರ್ಡ್ ಅಧ್ಯಕ್ಷ ಕಿರಣ್, ಮುಖಂಡರಾದ ಕಿರಣ್ ಗೌಡ, ನಂಜಪ್ಪ, ಶಿವಕುಮಾರ್, ಟೆನ್ನಿಸ್ ಗೋಪಿ, ಚಂದ್ರಕಲಾ, ಅಶೋಕ್, ಸುರೇಶ್, ಶ್ರೀನಿವಾಸ್, ಪ್ರಕಾಶ್, ಮಹೇಶ್, ಲಕ್ಷ್ಮೀಶ್, ನಮಿತ್, ಕಾರ್ತಿಕ್, ರಾಹುಲ್ ಮತ್ತಿತರರು ಅಭಿನಂದಿಸಿದರು.


ದಿನೇಶಗೆ ಪಿಹೆಚ್.ಡಿ

ಮೈಸೂರು: ಡಾ. ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ವಿ. ದಿನೇಶ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಜಿ.ಎನ್.ಕಿರಣ್

ಮೈಸೂರು: ಡಾ.ವೈ.ಹೆಚ್. ನಾಯಕವಾಡಿ ಅವರ ಮಾರ್ಗದರ್ಶನದಲ್ಲಿ ಜಿ.ಎನ್.ಕಿರಣ್ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಯುವ ಜನರಲ್ಲಿ ವೈಚಾರಿಕತೆ ಮುಖ್ಯ

ರೈತನಾಯಕ ಬಡಗಲಪುರ ನಾಗೇಂದ್ರ ಅಭಿಮತ



'ಅಕ್ಷರದವ್ವ ಸಾವಿತ್ರಿಭಾಯಿ ಫುಲೆ' ಮತ್ತು 'ಕುವೆಂಪು ಜನ್ಮ ದಿನಾಚರಣೆ' ಪ್ರಯುಕ್ತ ಸಾವಿತ್ರಿಭಾಯಿ ಫುಲೆ, ಕುವೆಂಪು ಅವರ ಭಾವಚಿತ್ರಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಮತ್ತು ಇತರರು ಪುಷ್ಪಾರ್ಚನೆ ಮಾಡಿದರು.

ಮೈಸೂರು, ಜ.13(ಎಸ್‌ಪಿಎನ್)– ಯುವಜನರಲ್ಲಿ ವೈಚಾರಿಕಾ ಮನೋಭಾವ ಮುಖ್ಯ. ಇವತ್ತಿನ ತಲೆಮಾರಿಗೆ ದೇಶ ಎತ್ತ ಸಾಗುತ್ತಿದೆ ಎಂಬ ಅರಿವು ಇರಬೇಕು. ಹಿಂದಿನ ತಲೆಮಾರಿಗೆ ವೈಚಾರಿಕ ವಿಚಾರ ಎಲ್ಲೆಡೆಯಿಂದ ಹರಿದು ಬರುತ್ತಿತ್ತು ಅವರ ಮನಸು ಹಾಗೆಯೇ ತೆರೆದುಕೊಳ್ಳುತ್ತಿತ್ತು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಇಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ಸಂಶೋಧಕ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟದ ವತಿಯಿಂದ 'ಅಕ್ಷರದವ್ವ ಸಾವಿತ್ರಿಭಾಯಿ ಫುಲೆ' ಮತ್ತು 'ಕುವೆಂಪು ಜನ್ಮ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಸಮೂಹ ಚಳವಳಿಯಲ್ಲಿ ತೊಡಗಿ, ವಿಚಾರ ಕ್ರಾಂತಿಗೆ ಮುನ್ನುಡಿ ಬರೆದರೆ ದೇಶದ ರಾಜಕೀಯವೇ ಬದಲು ಎಂದು ಅಭಿಪ್ರಾಯಪಟ್ಟರು.

ಮನುವಾದಿ ವಿಚಾರಗಳಿಗೆ ದಲಿತ ಸಮುದಾಯ ಮಾತ್ರ ಸಮರ್ಥನೀಯವಾಗಿ ಪ್ರತಿರೋಧ ತೋರುತ್ತದೆ. ಇಂದು ಮನುವಾದ, ಅದರ ಸುತ್ತಮುತ್ತಲಿನ ವಿಚಾರ ಮಂಡಿಸುವವರ ವಿರುದ್ಧ ದೊಡ್ಡ ಹೋರಾಟ ನಡೆಯಬೇಕಿದೆ. ಅದು ಅಹಿಂಸಾತ್ಮಕವಾದ ಕ್ರಾಂತಿಯಾಗಬೇಕು. ಹೀಗಾಗಿ ಈ ಸಾಲಿಗೆ ಬರುವ ಸಾವಿತ್ರಿಬಾಯಿ ಫುಲೆ, ಕುವೆಂಪು ಅವರಂತಹ ಮಹಾನೀಯರ ವಿಚಾರಧಾರೆಗಳ ಕುರಿತು ಹೆಚ್ಚಿನ ಚರ್ಚೆ ಅಗತ್ಯವಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಕೇವಲ ಒಂದು ಜಾತಿಗೆ ಮಾತ್ರ ಸೀಮಿತಗೊಳಿಸಬಾರದು. ಕೇವಲ ದಲಿತರಿಗೆ ಮಾತ್ರ ಮೀಸಲಾತಿ ಕೊಟ್ಟರು. ಅವರಿಗೆ ಪ್ರತ್ಯೇಕ ಆರ್ಥಿಕ ಸವಲತ್ತು ಮಾಡಿಕೊಟ್ಟರು ಎಂಬ ಆಲೋಚನೆಗಳನ್ನು ಮುನ್ನೆಲೆಗೆ ತರಬಾರದು. ಅಂತೆಯೇ ಅಂಬೇಡ್ಕರ್ ಅವರ ವಿಚಾರಧಾರೆ ಮುನ್ನೆಲೆಗೆ ಬರುತ್ತಿದೆ. ಎಲ್ಲಾ ಚಳವಳಿಗಳಲ್ಲಿ ಅವರ ಭಾವಚಿತ್ರ ಇಡಲಾಗುತ್ತಿದ್ದು, ಅದು ಅನಿವಾರ್ಯ ಕೂಡ ಹೌದು ಎಂದು ಬಡಗಲಪುರ ನಾಗೇಂದ್ರ ತಿಳಿಸಿದರು.

ಡಾ.ಕೃಷ್ಣಮೂರ್ತಿ ಚಮರಂ ಅವರು, ಕುವೆಂಪು ಅವರ ಸಾಹಿತ್ಯದಲ್ಲಿ ವೈಚಾರಿಕತೆ ವಿಷಯ ಮಾತನಾಡಿ, ಕುವೆಂಪು ಎಲ್ಲರನ್ನು ಸಮಾನವಾಗಿ ಕಾಣುವ ವಿಶ್ವಮಾನವ ದೃಷ್ಟಿಕೋನವನ್ನು ತಮ್ಮ ಸಾಹಿತ್ಯದ ಮೂಲಕ ಪ್ರತಿಪಾದಿಸಿದ್ದರು. ಅಲ್ಲದೆ, ಕುವೆಂಪು ಅವರು, ಸ್ವಾಮಿ ವಿವೇಕಾನಂದರ ವಿಚಾರಧಾರೆಗಳ ಕುರಿತು ಸಾಕಷ್ಟು ಅಧ್ಯಯನಶೀಲರಾಗಿದ್ದರು. ವೈಚಾರಿಕ ಚಿಂತನೆ ಬಿತ್ತುವ ಮೂಲಕ ಕೆಲಸ ಮಾಡಿದ್ದಾರೆ. ಅವರ ಆದರ್ಶವನ್ನು ಇಂದಿನ ಯುವಜನತೆ ಅಳವಡಿಸಿಕೊಂಡು ಉತ್ತಮ ಸಮಾಜ ಕಟ್ಟುವ ಸ್ಪಷ್ಟ ಚಿಂತನೆ ಅಗತ್ಯವಿದೆ ಎಂದರಲ್ಲದೆ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಆತ್ಮವಿಶ್ವಾಸ ಜ್ಞಾನ ಪ್ರತಿಬಿಂಬವಾಗುತ್ತದೆ. ಪ್ರಕೃತಿ ಹಿನ್ನೆಲೆ ಸಹಜವಾಗಿ ಮೂಡಿಬಂದಿದೆ. ಕಾನೂರು ಹೆಗ್ಗಡತಿಯಲ್ಲಿ ಹೂವಯ್ಯನ ಮೂಲಕ ಬುದ್ಧತ್ವವನ್ನು ಹೇಳುತ್ತಾರೆ ಎಂದರು.

> ನಮ್ಮ ಸಂವಿಧಾನವನ್ನು ಪ್ರಪಂಚದ ಇತರೆ ದೇಶಗಳು ವಿಮರ್ಶೆ ಮಾಡುತ್ತಿವೆ. 176 ದೇಶಗಳಲ್ಲಿ ಗೌರವಿಸಲಾಗುತ್ತಿದೆ. ಅಂಬೇಡ್ಕರ್ ಅನುಯಾಯಿಗಳು ಸ್ವಾಭಿಮಾನಿಗಳು. ಸಮಾಜದಲ್ಲಿ ಸಮಾನತೆಯಿಂದ ಬಾಳುವ ಅವಕಾಶ ಮಾಡಿಕೊಟ್ಟವರು ಅಂಬೇಡ್ಕರ್. ಸಮರ್ಥ ಸಂವಿಧಾನ ಇದ್ದಾಗಿಯೂ ನ್ಯಾಯ ಸಿಗದ ಪರಿಸ್ಥಿತಿ ನಮ್ಮ ವ್ಯವಸ್ಥೆಯಲ್ಲಿದೆ.
>
> - ಎ.ಆರ್.ಕೃಷ್ಣಮೂರ್ತಿ, ಶಾಸಕ

ಸಂಶೋಧಕರ ಸಂಘದ ಪುಷ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಸಾವಿತ್ರಿಬಾಯಿ ಫುಲೆ, ಸಮಾಜದ ಕ್ರಾಂತಿಗೆ ದಾರಿ ತೆರೆದ ಪ್ರಥಮ ಮಹಿಳೆ, ಶಿಕ್ಷಣಕ್ಕಾಗಿ ಹೋರಾಟ ನಡೆಸಿ, ಮಹಿಳೆಯರಿಗೆ ದಾರಿದೀಪವಾಗಿದ್ದಾರೆ. ಕುವೆಂಪು ಕನ್ನಡ ಸಾಹಿತ್ಯದ ಮಹಾನ್ ಚೇತನ ವಿಶ್ವಮಾನವ ಸಂದೇಶ ಸಾರಿದ್ದಾರೆ ಎಂದರು. 'ಸಾವಿತ್ರಿಬಾಯಿ ಫುಲೆ ಅವರ ಶಿಕ್ಷಣದ ಮಾರ್ಗ' ವಿಷಯ ಕುರಿತು ಮಹಾರಾಜ ಕಾಲೇಜು ಪ್ರಾಧ್ಯಾಪಕಿ ವಿಜಯಲಕ್ಷ್ಮಿ ಮನಾಪುರ ಮಾತನಾಡಿದರು.

ಮೈಸೂರು ವಿ.ವಿ ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ದಲಿತ ವಿದ್ಯಾರ್ಥಿ ಒಕ್ಕೂಟ ಅಧ್ಯಕ್ಷ ಗಜೇಂದ್ರ ಚಿನ್ನಸ್ವಾಮಿ,ಶಿವಣ್ಣ ಸ್ವಾಗತಿಸಿದರು. ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಗೌರವಾಧ್ಯಕ್ಷ ಕಲ್ಲಹಳ್ಳಿ ಕುಮಾರ್, ನವೀನ್ ಬೂದಿತಿಟ್ಟು, ರಂಗಸ್ವಾಮಿ ಕೆ.ಆರ್.ರವಿ ಲಮಾಣಿ, ರಾಮರೆಡ್ಡಿ, ರತ್ನಮ್ಮ, ರೋಹನ್ ಹೊಂಗನೂರು, ಮಾದೇಶ್ ಮುಂತಾದವರಿದ್ದರು. ಕೆ.ಎಂ ಶೇಷಣ್ಣಸ್ವಾಮಿ ಪ್ರಾರ್ಥಿಸಿದರು. ಅಭಿಷೇಕ್ ಪಾಳ್ಯಾಗಾರ್ ನಿರೂಪಿಸಿದರು. ಮಲ್ಲೇಶ್ ಬಾಚಹಳ್ಳಿ ವಂದಿಸಿದರು.

'ಬಿಲ್ಡಿಂಗ್ ಎ ಸ್ಟ್ರಾಂಗ್ ಡಿಜಿಟಲ್ ಐಡೆಂಟಿಟಿ' ತರಬೇತಿ ಕಾರ್ಯಕ್ರಮ



ಮಹಾಜನ ಪ್ರಥಮ ದರ್ಜೆ ಕಾಲೇಜಲ್ಲಿ ಅಧ್ಯಾಪಕರಿಗೆ ವಿಶೇಷ ತರಬೇತಿ ನಡೆಯಿತು.

ಮೈಸೂರು, ಜ.13–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಮಾಜಿಕ ಮಾಧ್ಯಮ ಮತ್ತು ವೆಬ್‌ಸೈಟ್ ಸಮಿತಿ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ಬಿಲ್ಡಿಂಗ್ ಎ ಸ್ಟ್ರಾಂಗ್ ಡಿಜಿಟಲ್ ಐಡೆಂಟಿಟಿ' ವಿಷಯ ಕುರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅಧ್ಯಾಪಕರಿಗಾಗಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಇನ್‌ಸೈಡ್ ಔಟ್ ಕನ್ಸಲ್ಟೆನ್ಸಿಯ ನಿಯೋಜಿತ ಪಾಲುದಾರ ಆದರ್ಶ್ ರಮೇಶ್, ವೈಯಕ್ತಿಕ ಕೊಡುಗೆಗಳು ಬಲಿಷ್ಠ ಹಾಗೂ ಅರ್ಥಪೂರ್ಣ ಸಾಮಾಜಿಕ ಮಾಧ್ಯಮ ಸಂಪರ್ಕವನ್ನು ಹೇಗೆ ರಚಿಸುತ್ತವೆ, ನೆಟ್ವರ್ಕ್ಸ್ ಪರಿಕಲ್ಪನೆಯನ್ನು ಪರಿಚಯಿಸುವ ಮೂಲಕ ಇಂದಿನ ಶೈಕ್ಷಣಿಕ ಪರಿಸರ ವ್ಯವಸ್ಥೆಯಲ್ಲಿ ಶಿಕ್ಷಕರ ಸಬಲೀಕರಣ, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಪ್ರಭಾವ, ವೈಯಕ್ತಿಕ ಬ್ರ್ಯಾಂಡ್ ನಿರ್ಮಿಸುವ ಬಗ್ಗೆ ವಿವರಿಸಿದರು.

ಶಿಕ್ಷಕರು ರಚಿಸಬೇಕಾದ ವಿಷಯದ ಪ್ರಕಾರಗಳು, ಸರ್ಚ್ ಇಂಜಿನ್ ಆಪ್ಟಿಮೈಸೇಶನ್ ತಂತ್ರಗಳು ಸಾಂಸ್ಥಿಕ ಬೆಳವಣಿಗೆ ಮತ್ತು ಆನ್‌ಲೈನ್ ಗೋಚರತೆಗೆ ನೀಡುವ ಕೊಡುಗೆ, ವೃತ್ತಿಪರ ನೆಟ್‌ವರ್ಕಿಂಗ್‌ಗಾಗಿ ಉತ್ತಮ ಅಭ್ಯಾಸಗಳು, ಎಐ ಪರಿಕರಗಳು, ಎಲ್‌ಎಂ ನೋಟ್‌ಬುಕ್ ಸೇರಿದಂತೆ ಹಲವು ವಿಷಯಗಳ ಮೇಲೆ ಕಾರ್ಯಕ್ರಮ ಬೆಳಕು ಚೆಲ್ಲಿತು. ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಐಕ್ಯೂಎಸಿ ಸಂಚಾಲಕಿ ಶ್ರೀಮತಿ ಡಿ.ಗೀತಾ, ಗ್ರಂಥಪಾಲಕಿ ಎಂ.ವೀಣಾ, ಸೋಶಿಯಲ್ ಮೀಡಿಯಾ ಮತ್ತು ವೆಬ್‌ಸೈಟ್ ಕಮಿಟಿ ಸಂಚಾಲಕ ಅನ್ಮೋಲ್ ಮತ್ತು ಶ್ರೀಮತಿ ನಿತ್ಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ಸಮುದಾಯ ಭವನಕ್ಕೆ ಭೂಮಿ ಪೂಜೆ

ಭೇರ್ಯ, ಜ.13– ಡಾ.ಬಿ.ಆರ್.ಅಂಬೇಡ್ಕರ್ ಹೆಸರಿನಲ್ಲಿ ನಿರ್ಮಾಣವಾದ ಸಮುದಾಯ ಭವನಗಳು ಜ್ಞಾನ ಸಂಪಾದನೆಯ ಕೇಂದ್ರಗಳಾಗಬೇಕು. ಆಗ ಮಾತ್ರ ಸಮಾಜ ಪರಿವರ್ತನೆಯಾಗಿ ಸುಧಾರಣೆಯಾಗಲಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಹೊಸ ಅಗ್ರಹಾರ ಗ್ರಾಮದಲ್ಲಿ ಮಂಗಳವಾರ ಹೋಬಳಿ ಮಟ್ಟದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬಾಬಾ ಸಾಹೇಬರು ನಮ್ಮೆಲ್ಲರಿಗೂ ಮನೆ ದೇವರಿದ್ದಂತೆ. ಅವರು ರಚಿಸಿಕೊಟ್ಟ ಸಂವಿಧಾನದಿಂದ ಇಂದು ನಾವೆಲ್ಲರೂ ಉನ್ನತ ಸ್ಥಾನ ಅಲಂಕರಿಸಿದ್ದೇವೆ ಎಂದರು.

ಸಂವಿಧಾನ ರಚನಾ ಸಮಿತಿಗೆ ನೇಮಕವಾದ ಹಲವರು ಬಿಟ್ಟು ಹೋದರು. ಆದರೂ ಕೂಡ ಛಲಬಿಡದೆ ವಿಶ್ವದ ಅನೇಕ ದೇಶಗಳ ಸಂವಿಧಾನ ಅಧ್ಯಯನ ಮಾಡಿ, ಅನೇಕ ಧರ್ಮ, ಜಾತಿ, ಸಂಸ್ಕೃತಿ, ಇತಿಹಾಸ ಹೊಂದಿರುವ ಭಾರತ ದೇಶಕ್ಕೆ ಬಡವರು, ಶೋಷಿತರು, ಮಹಿಳೆಯರು ಸೇರಿದಂತೆ ಸರ್ವರಿಗೂ ಸರ್ವಕಾಲಕ್ಕೂ ಸಲ್ಲುವ ಸಂವಿಧಾನ ರಚಿಸಿಕೊಟ್ಟ ಮಹಾತ್ಮ ಅಂಬೇಡ್ಕರ್ ಎಂದು ಗುಣಗಾನ ಮಾಡಿದರು.

ಬಾಬಾ ಸಾಹೇಬರ ಸಂವಿಧಾನದಿಂದ ಇಂದು ನಾವೆಲ್ಲರೂ ನವ ಭಾರತ ಕಟ್ಟಲು ಸಾಧ್ಯವಾಗಿದೆ. ಇಲ್ಲದಿದ್ದರೇ ಹಿಂದೆ ಬ್ರಿಟಿಷರ ಕಾಲದಲ್ಲಿದ್ದಂತೆ ಗುಲಾಮಗಿರಿ, ಜೀತ ಪದ್ಧತಿಯಿಂದ ಬದುಕಬೇಕಾಗಿತ್ತು. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ನಾನಿಲ್ಲಿ ಶಾಸಕನಾಗಿ ನಿಂತು ಮಾತನಾಡಲು ಸಂವಿಧಾನವೇ ಕಾರಣ. ನನಗೆ ಮತ ನೀಡಿದ ಎಲ್ಲಾ ಜನತೆಯನ್ನು ಒಂದೇ ಭಾವಿಸಿ ಅವರ ಅಭಿವೃದ್ಧಿ ಕಾರ್ಯ ಮಾಡುವುದು ನನ್ನ ಕರ್ತವ್ಯ. ಇದೀಗ ಈ ಭವನಕ್ಕೆ 75 ಲಕ್ಷ ರೂ. ಬಿಡುಗಡೆಯಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚಿನ ಅನುದಾನ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಬಂತೇಜಿ, ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿದರು. ಮುಸ್ಲಿಂ ಧರ್ಮ ಗುರು ಸೂಫಿ ಮಹಮ್ಮದ್, ಗ್ರಾಪಂ ಅಧ್ಯಕ್ಷ ಮಲ್ಲಿಕಾರ್ಜುನ, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಟಿಎಸ್ ಡಬ್ಲ್ಯೂ ಹೆಚ್.ಎಲ್.ಶಂಕರಮೂರ್ತಿ, ಪಿಡಿಓ ಶಲ್ಯ, ರಾಜಸ್ವ ನಿರೀಕ್ಷಕ ಪ್ರಕಾಶ್, ಗ್ರಾಮ ಆಡಳಿತ ಅಧಿಕಾರಿ ನವೀನ್, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ, ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಹೆಚ್.ಎಸ್.ಸ್ವಾಮಿ, ವೆಂಕಟೇಶ್, ಬ್ಯಾಂಕ್ ಮೋಹನ್, ಕೀರ್ತಿ, ರಾಮಯ್ಯ, ಶ್ರೀನಿವಾಸ್, ಹೇಮಂತ್, ನಿರ್ಮಿತಿ ಕೇಂದ್ರದ ಎಇ ಎಂ.ಚೇತನ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.



ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಡಿ.ರವಿಶಂಕರ್ ಭೂಮಿ ಪೂಜೆ ನೆರವೇರಿಸಿದರು.

ಈಗಾಗಲೇ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಸಮುದಾಯ ಭವನಕ್ಕೆ 1 ಕೋಟಿ ಅನುದಾನ ನೀಡಿದ್ದೇನೆ. ನಾಯಕ ಸಮುದಾಯದ ಎಲ್ಲಾ ಭವನಗಳಿಗೂ 3.70 ಕೋಟಿ ಅನುದಾನ ನೀಡಲಾಗಿದೆ. ಇಲ್ಲಿವರೆಗೆ ಕ್ಷೇತ್ರಕ್ಕೆ 600 ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ತಂದು ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ತಂದು ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು. ಅಲ್ಲದೇ ಪಟ್ಟಣದಲ್ಲಿ ಬಾಬಾ ಸಾಹೇಬರ ನೂತನ ಪುತ್ಥಳಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಕ್ಷೇತ್ರದ ಎಲ್ಲಾ ಸಮುದಾಯ ಭವನಗಳಲ್ಲಿ ಗ್ರಂಥಾಲಯ ತೆರೆಯಲಾಗುವುದು.

- ಡಿ.ರವಿಶಂಕರ್, ಶಾಸಕ.

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಜ.13– ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನಗರದಲ್ಲಿ ಕಬ್ಬು ಬೆಳೆಗಾರರ ಸಂಘದಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ನಗರದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜಾಧ್ಯಕ್ಷ ರವಿ ಮಾತನಾಡಿ, ರಾಜ್ಯದಲ್ಲಿ ಕಬ್ಬು ಬೆಳೆಗಾರರು ತಮ್ಮ ದುಡಿಮೆಗೆ ತಕ್ಕ ಬೆಲೆ ಸಿಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ರಾಜ್ಯ ಸರ್ಕಾರ ರೈತರನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿದ ಅವರು ತಾಲೂಕಿನ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಎದುರು ತೂಕದ ಯಂತ್ರ ಅಳವಡಿಸಬೇಕು. ಸಕ್ಕರೆ ಕಾರ್ಖಾನೆಯವರು ಸಕ್ಕರೆ ರಿಕವರಿ ಮೋಸ ಮಾಡುತ್ತಿದ್ದು, ಅದನ್ನು ತಪ್ಪಿಸಲು ಪ್ರಯೋಗಾಲಯ ಸ್ಥಾಪಿಸಬೇಕು. 2025–26ನೇ ಸಾಲಿನಲ್ಲಿ ಕಬ್ಬು ಪೂರೈಸಿದ ರೈತರಿಗೆ ಸರ್ಕಾರ ನಿಗದಿ ಮಾಡಿರುವ ಟನ್ ಕಬ್ಬಿನ ದರಕ್ಕೆ ಹೆಚ್ಚುವರಿ 300 ರೂ. ಕೊಡಿಸಬೇಕು. ಮೈಕ್ರೋ ಫೈನಾನ್ಸ್ ಹಾಗೂ ಖಾಸಗಿ ಬ್ಯಾಂಕ್‌ಗಳು ಸಣ್ಣ ರೈತರಿಗೆ ಸಾಲ ನೀಡಿ ಕಿರುಕುಳ ಕೊಡುತ್ತಿವೆ. ಅದನ್ನು ತಪ್ಪಿಸಲು ತಾಲೂಕು ಆಡಳಿತ ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಬೇಕು. ಹುರ ಏತ ನೀರಾವರಿ ಯೋಜನೆ ಕಾಮಗಾರಿ 2017ರಲ್ಲಿ ಆರಂಭಗೊಂಡು ನೆನೆಗುದಿಗೆ ಬಿದ್ದಿದೆ. ಈ ಭಾಗದ 29 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಆಗಬೇಕು. ತಾಲೂಕಿನ ಕೆರೆಕಟ್ಟೆಗಳ ಹೂಳೆತ್ತುವ ಕೆಲಸ ಕೈಗೆತ್ತಿಕೊಳ್ಳಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ನಂದೀಶ್, ಮರಿಸ್ವಾಮಿ, ಚಿಕ್ಕಸ್ವಾಮಿ, ಕುಮಾರ್, ಎಂ. ಸೋಮಣ್ಣ, ಮಹದೇವಸ್ವಾಮಿ, ಪ್ರಭುಸ್ವಾಮಿ, ಮಹೇಶ್, ದೇವಪ್ಪ, ಸಿದ್ದಲಿಂಗಪ್ಪ, ಮೂರ್ತಿ, ರಾಜಶೇಖರ್, ರವಿ, ಲೋಕೇಶ್, ಸಿದ್ದಪ್ಪ, ಶಂಕರಪ್ಪ, ಶಿವಮೂರ್ತಿ, ಆನಂದ್, ಮಲ್ಲಿಕಾರ್ಜುನ್, ಲಿಂಗರಾಜು, ಬಸವರಾಜು, ಮಂಜುನಾಥ್ ಉಪಸ್ಥಿತರಿದ್ದರು.

ಅರ್ಧಕ್ಕೆ ನಿಂತಿರುವ ಮಡಿವಾಳ

ಸಮುದಾಯ ಭವನ ಕಾಮಗಾರಿಗೆ 50 ಲಕ್ಷ ಬಿಡುಗಡೆ

ಮಡಿವಾಳ ಸಮಾಜದ ದಿನದರ್ಶಿಕೆ ಬಿಡುಗಡೆಗೊಳಿಸಿದ ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು, ಜ.13– ಈ ವರ್ಷ ಕ್ಷೇತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 50 ಕೋಟಿ ವಿಶೇಷ ಅನುದಾನ ನೀಡಿದ್ದು, ಆ ಅನುದಾನದಲ್ಲಿ 50 ಲಕ್ಷ ರೂ.ಗಳನ್ನು ಮಡಿವಾಳ ಸಮುದಾಯ ಭವನ ಪೂರ್ಣಗೊಳಿಸಲು ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.



ನಂಜನಗೂಡಲ್ಲಿ ಶಾಸಕ ದರ್ಶನ್ ಮಡಿವಾಳ ಸಮಾಜದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಮಡಿವಾಳ ಸಮುದಾಯ ಭವನದಲ್ಲಿ ನೂತನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಡಿವಾಳ ಸಮಾಜ ಶೈಕ್ಷಣಿಕ, ರಾಜಕೀಯ, ಸಾಮಾಜಿಕವಾಗಿ ಹಿಂದುಳಿದ ಸಮಾಜವಾಗಿದ್ದು, ಯಾವುದೇ ಹಿಂದುಳಿದ ಸಮಾಜಗಳು ಸಮಾಜದ ಮುನ್ನೆಲೆಗೆ ಬರಲು ಶಿಕ್ಷಣದಿಂದ ಮಾತ್ರ ಸಾಧ್ಯ. ಆದ್ದರಿಂದ ಎಲ್ಲರೂ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿವೃದ್ಧಿ ಕಾರ್ಯಗಳ ಮೂಲಕ ಎಲ್ಲಾ ಜಾತಿ ಜನಾಂಗದವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಕೆಲಸ ಮಾಡುತ್ತಿದ್ದಾರೆ. ನಾನು ಸಹ ಕ್ಷೇತ್ರದಲ್ಲಿ ಎಲ್ಲಾ ಜಾತಿ ಜನಾಂಗವನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತಿದ್ದೇನೆ. ಅರ್ಧಕ್ಕೆ ನಿಂತಿರುವ ಮಡಿವಾಳ ಸಮುದಾಯ ಭವನ ಪೂರ್ಣಗೊಳಿಸಲು ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 50 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದ್ದು, ಈಗಾಗಲೇ ಅಧಿಕಾರಿಗಳು, ಕ್ರಿಯಾಯೋಜನೆ ಸಿದ್ದಪಡಿಸಿಕೊಂಡು ಹೋಗಿದ್ದಾರೆ. ಅತ್ಯಂತ ಶೀಘ್ರ ಕಾಮಗಾರಿ ಚಾಲನೆಗೊಂಡು ಮುಕ್ತಾಯಗೊಳ್ಳಲಿದೆ ಎಂದು ಭರವಸೆ ನೀಡಿದರು.

ಮಡಿವಾಳ ನಿಗಮದ ನೂತನ ಅಧ್ಯಕ್ಷ ನಂಜಪ್ಪ ಅವರನ್ನು ಸನ್ಮಾನಿಸಲಾಯಿತು. ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್, ಕಾರ್ಯದರ್ಶಿ ಕೆ.ಎಂ.ಬಸವರಾಜು, ಗೌರ ವಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷರಾದ ರವಿ, ಮಹೇಶ್, ನಾಗರಾಜು, ಮಹದೇವಸ್ವಾಮಿ, ಬಸವರಾಜು, ಸುರೇಶ್, ಮಾಧು, ಶಿವಕುಮಾರ್, ನಂಜುಂಡಶೆಟ್ಟಿ, ಗಣೇಶ್, ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ಕೃಷಿ ಕಾಯ್ದೆ ವಿರುದ್ಧ ರೈತರು ಹೋರಾಟಕ್ಕೆ ಸಜ್ಜಾಗಿ

ಶಾಸಕ ದರ್ಶನ್ ಪುಟ್ಟಣ್ಣಯ್ಯ ಕರೆ

ಹುಣಸೂರು, ಜ.13– ರಾಜ್ಯ ಸರ್ಕಾರ 3 ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆ ಹುಸಿಯಾಗಿದ್ದು, ರೈತ ಸಮೂಹ ಕೃಷಿ ಕಾಯ್ದೆ ವಿರುದ್ಧ ಮತ್ತೆ ಹೋರಾಟಕ್ಕೆ ಸಜ್ಜಾಗಬೇಕಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ರೈತ ಸಂಘದ ತಾಲೂಕು ಘಟಕದಿಂದ ತಾಲೂಕಿನ ಕಿರಿಜಾಜಿ ಗ್ರಾಮದಲ್ಲಿ ನಡೆದ ರೈತ ಸಂಘ ಸ್ಥಾಪನೆಯ 25ನೇ ಸಂಭ್ರಮಾಚರಣೆ, ನೂತನ ನಾಮಫಲಕ ಅನಾವರಣ ಹಾಗೂ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿದ್ದ 3 ಕೃಷಿ ಕಾಯ್ದೆಗಳನ್ನು ರಾಜ್ಯದಲ್ಲಿ ರದ್ದುಪಡಿಸುವ ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾದರೂ ಕಾಯ್ದೆಗಳನ್ನು ರದ್ದುಗೊಳಿಸುವ ಗೋಜಿಗೆ ಹೋಗಿಲ್ಲ. ಇದೀಗ ಕೇಂದ್ರ ಸರ್ಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೈಲ್ಯಾಟರಲ್ ಟ್ರೇಡ್ ಅಗ್ರಿಮೆಂಟ್, ಫ್ರೀ ಟ್ರೇಡ್ ಅಗ್ರಿಮೆಂಟ್ ಮುಂತಾದ ಒಪ್ಪಂದಗಳೊಂದಿಗೆ ರೈತ ವಿರೋಧಿ ನೀತಿ ಅನುಸರಿಸಲು ಮುಂದಾಗುತ್ತಿದೆ. ಸೀಡ್ ಬಿಲ್ ಮಂಡಿಸುವ ಸಿದ್ಧತೆಯಲ್ಲಿದೆ. ಈ ಎಲ್ಲಾ ಒಪ್ಪಂದಗಳು ರೈತರ ಹಿತಕ್ಕೆ ವಿರುದ್ಧವಾಗಿದ್ದು, ಎಲ್ಲವನ್ನೂ ಅರಿತುಕೊಂಡು ಸರ್ಕಾರಗಳ ವಿರುದ್ಧ ಹೋರಾಟದ ಹೆಜ್ಜೆ ಇಡುವ ಅಗತ್ಯವಿದೆ ಎಂದರು.



25 ವರ್ಷಗಳ ಹಿಂದೆ ಸೆಸ್ಕ್ ವಿರುದ್ಧ ಹೋರಾಡಿದವರನ್ನು ಸನ್ಮಾನಿಸಲಾಯಿತು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಸರ್ಕಾರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಮುಂದಾದಾಗ ಇಲ್ಲಿಂದಲೇ ರೈತ ಹೋರಾಟದ ಕಿಡಿ ಹೊತ್ತಿತು. ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿ ರೈತರು ದಶಕಗಳ ಕಾಲ ಹೋರಾಟ ನಡೆಸಿ ಜಯಶಾಲಿಗಳಾದರು. ಇಂದಿಗೂ ಕಿರಿಜಾಜಿ ಗ್ರಾಮ ರೈತರ ಹೋರಾಟದ ಕೇಂದ್ರವಾಗಿದೆ ಎಂದರು.

ರೈತ ಸಂಘದ ವಿಭಾಗೀಯ ಕಾರ್ಯದರ್ಶಿ ಬಸವರಾಜು, ಮಹಿಳಾಧ್ಯಕ್ಷೆ ನೇತ್ರಾವತಿ ಮಾತನಾಡಿದರು. ಕಾರ್ಯಕ್ರಮದಲ್ಲಿ 25 ವರ್ಷಗಳ ಹಿಂದೆ ಸೆಸ್ಕ್ ವಿರುದ್ಧ ಹೋರಾಡಿದ ಯಜಮಾನ ಶಿವಶಂಕರ್, ಮಹೇಶ್, ಚಂದ್ರಶೇಖರ್, ಡಿ.ಕುಮಾರ್, ಶಿವಕುಮಾರ್, ಪುಟ್ಟವೀರಮ್ಮ, ಕೆ.ಜೆ.ಹರೀಶ್ ಅವರಿಗೆ ಕಾಯಕಯೋಗಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ತಾಲೂಕು ಅಧ್ಯಕ್ಷ ಚಿಕ್ಕಣ್ಣ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮರಂಕಯ್ಯ, ಪ್ರಭಾಕರ್, ಕೃಷ್ಣೇಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ರಾಮೇಗೌಡ, ತುಂಬಾಕು ಕಾಫಿ ಸಮಿತಿ ಸದಸ್ಯ ಪ್ರಭಾಕರ್, ತುಂಬಾಕು ಕ್ಷೇಮಾಭಿವೃದ್ಧಿ ಸಂಘದ ಸಿ.ಚಂದ್ರೇಗೌಡ, ಅಧ್ಯಕ್ಷ ಶಿವಣ್ಣ, ಮಹೇಶ್, ರಾಜಣ್ಣ, ಜಯಣ್ಣ, ವಿಷಕಂಠಪ್ಪ, ಶಂಕರ್, ಈಶ್ವರ್, ಮಹದೇವ್, ನಿಂಗರಾಜ ಮಲ್ಲಾಡಿ, ಕೆಂಪರಾಜು, ಗಜೇಂದ್ರ ಗ್ರಾಮಸ್ಥರಿದ್ದರು.

ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಅಪಾರ

ವಿಧಾನಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್



ಶಾಲಾ ವಾರ್ಷಿಕೋತ್ಸವವನ್ನು ಎಂಎಲ್‌ಸಿ ಶಿವಕುಮಾರ್ ಉದ್ಘಾಟಿಸಿದರು.

ಮಲ್ಕುಂಡಿ, ಜ.13– ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಅಪಾರ ಎಂದು ವಿಧಾನಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ತಿಳಿಸಿದರು.

ಸಮೀಪದ ಹುರ ಗ್ರಾಮದ ಗಾಯಿತ್ರಿ ವಿದ್ಯಾಸಂಸ್ಥೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಬೇಕು ಎಂದ ಅವರು ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರವು ಬಹಳ ಮುಖ್ಯವಾಗಿದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳ ಬಗ್ಗೆ ಹೆಚ್ಚು ಗಮನಹರಿಸಬೇಕು. ಗ್ರಾಮೀಣ ಭಾಗದಲ್ಲಿ ವಿದ್ಯಾಸಂಸ್ಥೆಗಳ ಸ್ಥಾಪನೆಯಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುತ್ತದೆ. ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಶಿಕ್ಷಣದಿಂದ ಮಾತ್ರ ಎಲ್ಲವನ್ನು ಪಡೆಯಲು ಸಾಧ್ಯ ಎಂದರು.

ಈ ವೇಳೆ ದಡದಹಳ್ಳಿ ಮಠದ ಡಾ.ಷಡಕ್ಷರ ಸ್ವಾಮೀಜಿ, ಹಲ್ಲರೆ ಮಠಾಧ್ಯಕ್ಷ ಬಸವಣ್ಣ ಸ್ವಾಮೀಜಿ, ತಾಲೂಕು ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷ ದೇವನೂರು ಮಹದೇವಪ್ಪ, ಎಂ.ವಿ.ಶಿವಕುಮಾರ್, ಆದರ್ಶ, ಕಾಂಗ್ರೆಸ್ ಮುಖಂಡ ಎನ್.ಕೆಂಡಗಣ್ಣಪ್ಪ ಸುರೇಶ್, ಸಂಸ್ಥೆ ಕಾರ್ಯದರ್ಶಿ ನಟರಾಜ್ ಸೇರಿದಂತೆ ಶಿಕ್ಷಕರಿದ್ದರು.

ಜೈ ಭೀಮ್ ದಮನಿತರ ಸೇವಾ ಸಮಿತಿಗೆ ಪದಾಧಿಕಾರಿಗಳ ಆಯ್ಕೆ

ಸರಗೂರು, ಜ.13– ಜೈ ಭೀಮ್ ದಮನಿತರ ಸೇವಾ ಸಮಿತಿ ಸರಗೂರು, ಕೋಟೆ ತಾಲೂಕು ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸಮಿತಿ ರಾಜ್ಯಾಧ್ಯಕ್ಷ ಡಾ.ಮುನಿಆಂಜಿನಪ್ಪ ಅಧ್ಯಕ್ಷತೆಯಲ್ಲಿ ಜಿಲ್ಲಾಧ್ಯಕ್ಷ ಎನ್.ಬಸವರಾಜು ನೇತೃತ್ವದಲ್ಲಿ ನಡೆದ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸರಗೂರು ತಾಲೂಕು ಅಧ್ಯಕ್ಷರಾಗಿ ಬಿಲ್ಲಯ್ಯ, ಕೋಟೆ ತಾಲೂಕು ಅಧ್ಯಕ್ಷರಾಗಿ ಮಲ್ಲೇಶ್, ಗೌರವಾಧ್ಯಕ್ಷರಾಗಿ ಪುಟ್ಟಯ್ಯ, ಉಪಾಧ್ಯಕ್ಷರಾಗಿ ಶಿವರಾಜು, ಖಜಾಂಚಿಯಾಗಿ ಜೈಕುಮಾರ್, ಸಂಚಾಲಕರಾಗಿ ಸುಂದರ್, ಮಹೇಶ್, ಚಂದ್ರಯ್ಯ, ಪ್ರಕಾಶ್, ಸದಸ್ಯರಾಗಿ ಚನ್ನಯ್ಯ, ರಂಗಯ್ಯ, ನಾರಾಯಣ, ಕುಮಾರ್, ಚಂದ್ರ, ಕೆಂಪರಾಜು, ಶಿವಕುಮಾರ್, ಶಿವರಾಜು ಅವರನ್ನು ಆಯ್ಕೆ ಮಾಡಲಾಯಿತು.

ಸಮಿತಿ ರಾಜ್ಯಾಧ್ಯಕ್ಷ ಡಾ.ಮುನಿಆಂಜಿನಪ್ಪ, ಜಿಲ್ಲಾಧ್ಯಕ್ಷ ಎನ್.ಬಸವರಾಜು ಮಾತನಾಡಿ, ಜಿಲ್ಲೆಯ ಪ್ರತಿ ತಾಲೂಕುಗಳಲ್ಲೂ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು. ಆ ಮೂಲಕ ಸಂಘಟನೆ ಬಲಪಡಿಸಲಾಗುವುದು. ದಮನಿತರ ಮತ್ತು ಬಡವರಿಗೆ ಅನ್ಯಾಯವಾದ ಸಂದರ್ಭ ಸಂಘಟನೆ ಪದಾಧಿಕಾರಿಗಳು ಒಗ್ಗೂಡಿ ನೊಂದವರಿಗೆ ನ್ಯಾಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅನ್ಯಾಯ ನಡೆಸುವವರ ವಿರುದ್ಧ ಹೋರಾಟ ಮಾಡಲಾಗುವುದು ಎಂದರು.

ಈ ವೇಳೆ ಜಿಲ್ಲಾ ಉಪಾಧ್ಯಕ್ಷ ಉಪಾಧ್ಯಕ್ಷ ರಂಗಸ್ವಾಮಿ, ಕೋಲಾರ ಜಿಲ್ಲೆ ಸಂಘಟನಾ ಸಂಚಾಲಕ ಕುಮಾರ್, ಬಂಗಾರಪೇಟೆ ತಾಲೂಕು ಅಧ್ಯಕ್ಷ ಎಂ.ನವೀನ್‌ಕುಮಾರ್, ಖಜಾಂಚಿ ಸೀನಪ್ಪ ಸೇರಿದಂತೆ ಇನ್ನಿತರರಿದ್ದರು.



ಜೈ ಭೀಮ್ ದಮನಿತರ ಸೇವಾ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ವಿದ್ಯಾರ್ಥಿಗಳಿಗೆ ತಟ್ಟೆ ವಿತರಣೆ



ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಉದ್ಯಮಿಗಳಾದ ಪ್ರಮೋದ್, ದಿಲೀಪ್ ಅವರು ಉಚಿತವಾಗಿ ತಟ್ಟೆಗಳನ್ನು ವಿತರಿಸಿದರು. ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಭಾಸ್ಕರ್, ಪ್ರಾನ್ಸಿಪಾಲ್ ಕಾಳಿಂಗೇಗೌಡ, ಉಪನ್ಯಾಸಕರಾದ ಸ್ನೇಹ, ಕುಮಾರ್, ಕನ್ನಡ ಕುಮಾರ್, ಶ್ರೀನಿವಾಸ್, ಮಹೇಶ್, ಶಾಲಿನಿ, ಪ್ರಿಯಾಂಕ, ಮೆಸ್ ಮಂಜು ಸೇರಿದಂತೆ ವಿದ್ಯಾರ್ಥಿಗಳಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಹಲಗನಹಳ್ಳಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ವೀಣಾ, ಮೈಮುಲ್ ನಿರ್ದೇಶಕ ಪ್ರಕಾಶ್, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮದ್ ಜಾನ್‌ಬಾಬು, ಶಂಕರೇಗೌಡ, ರಮೇಶ್, ಸ್ವಾಮಿ, ಅಬ್ದುಲ್ ಜಾವೀದ್, ಸಿರಾಜ್, ಅಬ್ದುಲ್ ರಜಾಕ್, ಮಹಮ್ಮದ್ ಶಫಿ, ಪಿಡಿಓ ರವಿ ಸೇರಿದಂತೆ ಇತರರಿದ್ದರು.

ಸನ್ಮಾನ



ಕನ್ನಡ ಸೇನೆ ಕರ್ನಾಟಕ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ಅವರನ್ನು ತಿ.ನರಸೀಪುರ ಜಿಲ್ಲಾ ಕಾರ್ಮಿಕರ ಘಟಕದ ಉಪಾಧ್ಯಕ್ಷ ಭೈರಾಪುರ ಕೆ.ರಾಜು ಅವರು ಸನ್ಮಾನಿಸಿದರು.

ನೂತನ ದಿನದರ್ಶಿಕೆ ಬಿಡುಗಡೆ



ಮೂಗೂರು ಸಮೀಪದ ಹ್ಯಾಕನೂರು ಡೇರಿ ನೂತನ ದಿನದರ್ಶಿಕೆಯನ್ನು ಸಂಘದ ನಿರ್ದೇಶಕರು ಬಿಡುಗಡೆಗೊಳಿಸಿದರು. ಈ ವೇಳೆ ಅಧ್ಯಕ್ಷ ಹೆಚ್.ಎಸ್.ಕುಮಾರ್, ಉಪಾಧ್ಯಕ್ಷೆ ಜಯಮ್ಮ, ಸಿಇಓ ಸತೀಶ್, ನಿರ್ದೇಶಕ ಮಲ್ಲೇಶ್, ಶಿವಮಲ್ಲಪ್ಪ, ಮಲ್ಲಿಕಾರ್ಜುನಸ್ವಾಮಿ, ಬಸವರಾಜು, ಬಸವಯ್ಯ, ಶೇಖರಪ್ಪ, ಗೌರಮ್ಮಣ್ಣಿ, ಪುಟ್ಟಮ್ಮ ಇತರರಿದ್ದರು.

ನಿಧನ

ಆರ್.ಚಿತ್ತಬೋದ್



ತಿ.ನರಸೀಪುರ, ಜ.13– ಮಾಜಿ ಸಚಿವ ದಿ.ಎನ್.ರಾಚಯ್ಯ ಅವರ ಪುತ್ರ, ಮಾಜಿ ಮಂಡಲ ಪಂಚಾಯತ್ ಸದಸ್ಯ ಆರ್.ಚಿತ್ತಬೋದ್(62) ಬೆಂಗಳೂರಿನಲ್ಲಿ ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಯಶೋಧರ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶವವನ್ನು ಪಟ್ಟಣದ ಗೋಪಾಲಪುರದಲ್ಲಿರುವ ಮಾಜಿ ಶಾಸಕ ಆರ್.ಧರ್ಮಸೇನಾ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದೆ.

ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ತಿ.ನರಸೀಪುರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಸಂಸದ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಕನ್ನಡ ಸೇನೆ ಕಾರ್ಮಿಕರ ವಿಭಾಗದ ಉಪಾಧ್ಯಕ್ಷ ಕೆ.ರಾಜು ಸಂತಾಪ ಸೂಚಿಸಿದ್ದಾರೆ.

ಸುಂದ್ರಮ್ಮ



ತಿ.ನರಸೀಪುರ, ಜ.13– ತಾಲೂಕಿನ ನೆರಗ್ಯಾತನಹಳ್ಳಿ ಗ್ರಾಮದ ನಿವಾಸಿ, ಡೇರಿ ಮಾಜಿ ಅಧ್ಯಕ್ಷ ಬಸವರಾಜಪ್ಪ ಅವರ ಪತ್ನಿ ಸುಂದ್ರಮ್ಮ(52) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮ್ಮಣ್ಣಮ್ಮ



ಹೆಚ್.ಡಿ.ಕೋಟೆ, ಜ.13– ತಾಲೂಕಿನ ಹೈರಿಗೆ ಗ್ರಾಮದ ನಿವಾಸಿ ಲೇ.ಬಸವೇಗೌಡರ ಪತ್ನಿ ಅಮ್ಮಣ್ಣಮ್ಮ(88) ಮಂಗಳವಾರ ನಿಧನರಾದರು. ಮೃತರು ಆರು ಮಂದಿ ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿಲ್ಲೆಯಲ್ಲಿ ರೌಡಿಸಂ, ಕ್ರಿಮಿನಲ್ ಪ್ರಕರಣ, ಜೂಜಾಟಕ್ಕೆ ಕಡಿವಾಣ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ

ತಿ.ನರಸೀಪುರ, ಜ.13– ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಮೊದಲ ಆದ್ಯತೆ ನೀಡುವ ಜೊತೆಗೆ ಜಿಲ್ಲಾ ವ್ಯಾಪ್ತಿಯಲ್ಲಿ ರೌಡಿಸಂ, ಕ್ರಿಮಿನಲ್ ಪ್ರಕರಣ ಮತ್ತು ಜೂಜಾಟಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಪಟ್ಟಣದ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಿ.ನರಸೀಪುರ ಪಟ್ಟಣ ಮತ್ತು ಪ್ರವಾಸಿ ತಾಣಗಳಾದ ತಲಕಾಡು, ಸೋಮನಾಥಪುರ, ಮೂಗೂರು, ಬನ್ನೂರು ಸೇರಿದಂತೆ ಹಲವು ಸೂಕ್ಷ್ಮ ಪ್ರದೇಶಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಲಾಗುವುದು. ಪ್ರವಾಸಿ ತಾಣಗಳಿಗೆ ಅವಶ್ಯಕತೆಗೆ ತಕ್ಕಂತೆ ಸಿಬ್ಬಂದಿ ನಿಯೋಜಿಸಲಾಗುವುದು. ವಾಹನ ಚಾಲಕರು ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಜೊತೆಗೆ ಪೊಲೀಸರಿಗೆ ಸಹಕಾರ ನೀಡಬೇಕು ಎಂದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿ ಹೆಚ್ಚುವರಿ ಪೊಲೀಸ್ ಠಾಣೆ ಸ್ಥಾಪನೆ ಇಲ್ಲವೇ ಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಅವಶ್ಯಕತೆಗನುಗುಣವಾಗಿ ನಿರ್ಧಾರ ಕೈಗೊಳ್ಳಲಾಗುವುದು. 150ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇರುವುದರಿಂದ ರಾತ್ರಿ ವೇಳೆ ಕೆಲವೆಡೆ ಗಸ್ತು ಇಲ್ಲದ ಕಾರಣ ಸಣ್ಣಪುಟ್ಟ ಕಳ್ಳತನ, ಸರಗಳ್ಳತನ ಪ್ರಕರಣ ನಡೆದಿವೆ. ಇವುಗಳನ್ನು ತಡೆಯಲು ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ತಾಲೂಕು ಠಾಣಾ ವ್ಯಾಪ್ತಿಯಲ್ಲಿ ಬಾಕಿ ಇರುವ ಹಳೆಯ ಪ್ರಕರಣಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ನಿರ್ದೇಶನ ನೀಡಲಾಗಿದೆ. ಸೋಸಲೆಯಲ್ಲಿ ಸಬ್ ಸ್ಟೇಷನ್ ಮಾಡಿದಲ್ಲಿ ಬನ್ನೂರು ಮತ್ತು ತಿ.ನರಸೀಪುರ ಪಟ್ಟಣದ ಕೆಲ ಭಾಗಗಳನ್ನು ನೂತನ ಠಾಣೆಗೆ ಸೇರಿಸಲಾಗುತ್ತದೆ ಎಂದರು.

ಈ ವೇಳೆ ಡಿಎಸ್ಪಿ ಜಿ.ಎಸ್.ರಘು, ಇನ್‌ಸ್ಪೆಕ್ಟರ್ ಧನಂಜಯ, ಪಿಎಸ್‌ಐ ಜಗದೀಶ್ ಧೂಳ್ ಶೆಟ್ಟಿ,ವಿಚಾರವಾದಿ ಪ್ರಭುಸ್ವಾಮಿ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.



ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರನ್ನು ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಸನ್ಮಾನಿಸಿದರು.

ಡಾ.ಮಾದೇಶ್ ಸೇವೆಗೆ ಎಸ್ಪಿ ಶ್ಲಾಘನೆ

ತಿ.ನರಸೀಪುರ ತಾಲೂಕಿನಾದ್ಯಂತ ಅನಾಥ ಶವಗಳನ್ನು ಪೊಲೀಸರ ಸಹಕಾರದೊಂದಿಗೆ ಗುರುತಿಸಿ ಶವಗಳನ್ನು ಸಂಸ್ಕಾರ ಮಾಡಿ ಮುಕ್ತಿ ತೋರಿಸುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವ ಅನಾಥ ಶವಗಳ ಮುಕ್ತಿದಾತರೆಂದೇ ಹೆಸರಾಗಿರುವ ಪಟ್ಟಣದ ಡಾ.ಎಂ.ಮಾದೇಶ್ ಅವರ ಕಾರ್ಯವೈಖರಿಯನ್ನು ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಶ್ಲಾಘಿಸಿದರು.

ಸುಮಾರು 1300ಕ್ಕೂ ಹೆಚ್ಚು ಅನಾಥ ಶವಗಳಿಗೆ ಮುಕ್ತಿ ತೋರಿಸಿರುವ ಮಾದೇಶ್ ಅವರ ಪ್ರವೃತ್ತಿಗೆ ಮಲ್ಲಿಕಾರ್ಜುನ ಬಾಲದಂಡಿ ಮೆಚ್ಚುಗೆ ವ್ಯಕ್ತಪಡಿಸಿ ನಾವು ಅಧಿಕಾರದಲ್ಲಿದ್ದು ಮಾಡುವುದು ಬೇರೆ. ನೀವು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಇದೇ ರೀತಿ ನಿಮ್ಮ ಸಮಾಜ ಸೇವೆ ಮುಂದುವರೆಸಿಕೊಂಡು ಹೋಗುವಂತೆ ಸಲಹೆ ನೀಡಿದರು. ಈ ವೇಳೆ ನೂತನ ಎಸ್‌ಪಿ ಅವರನ್ನು ಡಾ.ಮಾದೇಶ್ ಸನ್ಮಾನಿಸಿದರು.

ಮೈಸೂರು ಮಿತ್ರ

ಬುಧವಾರ 14 ಜನವರಿ 2026

ಫೆಬ್ರವರಿಗೆ ಮೈಸೂರು ಪ್ಲಾನೆಟೇರಿಯಂ ಉದ್ಘಾಟನೆ



ಚಾಮುಂಡಿಬೆಟ್ಟದ ತಪ್ಪಲಲ್ಲಿ ಸುಮಾರು 85 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಪ್ಲಾನೆಟೇರಿಯಂ.

ಮೈಸೂರು, ಜ.13(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಲ್ಲಿ ಸುಮಾರು 85 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪ್ಲಾನೆಟೇರಿಯಂ ಫೆಬ್ರವರಿಯಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳ ಹಿಂದೆ 3.5 ಎಕರೆ ಪ್ರದೇಶದಲ್ಲಿ 2022ರಲ್ಲಿ ಕಟ್ಟಡ ಕಾಮಗಾರಿಗೆ ಕೇಂದ್ರದ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಶಂಕುಸ್ಥಾಪನೆ ನೆರವೇರಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (IIA) ಸಂಸ್ಥೆಗಳ ಸಹಯೋಗದಲ್ಲಿ ನಿರ್ಮಿಸಿರುವ ಮೂರು ಅಂತಸ್ತಿನ ಕಾಸ್ಮೋಸ್ ಪ್ಲಾನೆಟೇರಿಯಂ (COSMOLOGY EDUCATION AND RESEARCH TRAINING CENTRE) ಭವ್ಯ ಕಟ್ಟಡದ ಕಾಮಗಾರಿ ಇದೀಗ ಪೂರ್ಣಗೊಂಡಿದ್ದು, ಒಳಾಂಗಣ ಹಾಗೂ ಉಪಕರಣಗಳನ್ನು ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಕೇಂದ್ರದ ಬಜೆಟ್ ಅಧಿವೇಶನ ಮುಗಿದ ಬಳಿಕ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ದಿನಾಂಕ ನೀಡುವುದಾಗಿ ತಿಳಿಸಿದ್ದು, ಫೆಬ್ರವರಿ ಮೂರು ಅಥವಾ ನಾಲ್ಕನೇ ವಾರದಲ್ಲಿ ಉದ್ಘಾಟನೆಯಾಗುವ ಸಾಧ್ಯತೆಯಿದೆ. ಸಚಿವರು ನೀಡುವ ಸಮಯ ಆಧರಿಸಿ ಉದ್ಘಾಟನಾ ಸಮಾರಂಭದ ರೂಪು–ರೇಷೆಗಳನ್ನು ತೀರ್ಮಾನಿಸುತ್ತೇವೆ. ಈಗಾಗಲೇ ಹಲವು ಬಾರಿ ಕಟ್ಟಡ ಕಾಮಗಾರಿ ಪರಿಶೀಲನೆ ನಡೆಸಿದ್ದೇನೆ. ಐಐಎ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದರು.

ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ಸೇರಿದ 25 ಎಕರೆ ಪ್ರದೇಶದಲ್ಲಿ 3.5 ಎಕರೆ ಜಾಗವನ್ನು ಕಾಸ್ಮೋಸ್ ಪ್ಲಾನೆಟೇರಿಯಂ ಸ್ಥಾಪಿಸಲು ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಸಂಸ್ಥೆಗೆ ನೀಡಲಾಗಿದೆ. ಅದರಲ್ಲಿ 3 ಅಂತಸ್ತಿನ ಭವ್ಯ ಕಟ್ಟಡ ತಲೆ ಎತ್ತಿದ್ದು, ಬೆಟ್ಟದ ತಪ್ಪಲಿನ ಸುಂದರ ನೈಸರ್ಗಿಕ ವಾತಾವರಣದಲ್ಲಿ ಕಾಸ್ಮೋಲಾಜಿ ಶಿಕ್ಷಣ, ಸಂಶೋಧನೆ ಹಾಗೂ ತರಬೇತಿಗೆ ಪ್ರಶಸ್ತವಾಗಿದೆ ಎಂದು ತಿಳಿಸಿದರು.

ಕಟ್ಟಡದಲ್ಲಿ 15 ಮೀಟರ್ ಎತ್ತರದ ಎಲ್‌ಇಡಿ ಡೂಮ್ ಪ್ಲಾನೆಟೇರಿಯಂ ನಿರ್ಮಿಸಿದ್ದು, ಆತ್ಯಾಕರ್ಷಕವಾಗಿದೆ. ಮೈಸೂರಿನ ಪಾರಂಪರಿಕ, ಸಾಂಸ್ಕೃತಿಕ ಇತಿಹಾಸವನ್ನು ಬಿಂಬಿಸುವ ಈ ಕಟ್ಟಡವು ಒಂದು ಪ್ರವಾಸಿ ಕೇಂದ್ರವೂ ಆಗಿರಲಿದೆ. ಇಲ್ಲಿ ಖಗೋಳಶಾಸ್ತ್ರದ ಬಗ್ಗೆ ತರಬೇತಿ ನೀಡುವ ಮೂಲಕ ಪ್ರಪಂಚದಾದ್ಯಂತ ಕಾಸ್ಮೋಸ್ ಪ್ಲಾನೆಟೇರಿಯಂ ಸೇವೆಯನ್ನು ಒದಗಿಸುವ ಉತ್ತಮ ಕೇಂದ್ರವಾಗಲಿದೆ.

ನಿರ್ಮಲ ಸೀತಾರಾಮನ್ ಅವರ ಸಂಸದರ ಪ್ರದೇಶಾಭಿವೃದ್ಧಿ ನಿಧಿ (ಎಂಪಿಎಲ್‌ಎಡಿ)ಯಿಂದ ಕಟ್ಟಡ ನಿರ್ಮಾಣಕ್ಕಾಗಿ ಐಐಎಗೆ 5 ಕೋಟಿ ರೂ. ಆರಂಭಿಕ ಅನುದಾನ ಬಿಡುಗಡೆ ಮಾಡಲಾಗಿತ್ತು. ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಆಟೋಮಿಕ್ ಎನರ್ಜಿ ಇಲಾಖೆಗಳ ಸಹಯೋಗದಲ್ಲಿ ನಿರ್ಮಾಣವಾಗಿರುವ ಪ್ಲಾನೆಟೇರಿಯಂ ಕಟ್ಟಡಕ್ಕೆ 2022ರ ಮಾರ್ಚ್ 6ರಂದು ಕೇಂದ್ರ ಹಣಕಾಸು ಸಚಿವರು ಶಂಕುಸ್ಥಾಪನೆ ನೆರವೇರಿಸಿದ್ದರು.

ಮೈಸೂರಿಗೆ ಕಳಸವಿದ್ದಂತೆ: ಈ ಕುರಿತಂತೆ ಪ್ರತಿಕ್ರಿಯೆ ನೀಡಿರುವ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮುಂಡಿಬೆಟ್ಟದ ತಪ್ಪಲಲ್ಲಿ ತಲೆ ಎತ್ತಿರುವ ಕಾಸ್ಮೋಸ್ ಪ್ಲಾನೆಟೇರಿಯಂ (ಗುಮ್ಮಟ ತಾರಾಲಯ) ಸಾಂಸ್ಕೃತಿಕ ನಗರಿ ಮೈಸೂರಿಗೆ ಮತ್ತೊಂದು ಕಳಸವಿದ್ದಂತೆ ಎಂದಿದ್ದಾರೆ.

ಈ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು 5 ಕೋಟಿ ರೂ.ಗಳ ಆರಂಭಿಕ ಅನುದಾನ ನೀಡುವ ಮೂಲಕ ನೆರವು ನೀಡಿದ್ದಾರೆ ಅದಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇದು ವಿಶ್ವದ ಮೊದಲ ಗುಮ್ಮಟಾಕೃತಿಯ ಎಲ್‌ಇಡಿ ತಾರಾಲಯವಾಗಿದೆ.

ಸಂಸ್ಥೆಯಲ್ಲಿ ಕಾಸ್ಮೋಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿಗೆ ಅನುಕೂಲವಾಗುವಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು. ಕಾಸ್ಮೋಸ್ ಪ್ಲಾನೆಟೇರಿಯಂ ನಾವೀನ್ಯತೆಗೆ ಹೆಚ್ಚು ಒತ್ತು ನೀಡಲಿದ್ದು, ಮೈಸೂರಿನ ಪ್ರವಾಸಿ ತಾಣವಾಗಿಯೂ ಹೊರಹೊಮ್ಮಲಿದೆ. ಇಲ್ಲಿನ ಪರಂಪರೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಜ್ಞಾನ ಕೇಂದ್ರವಾಗಲಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ.

ನಿರ್ಮಲ ಸೀತಾರಾಮನ್ ಟ್ವೀಟ್



“ಮೈಸೂರಿನಲ್ಲಿ ನಿರ್ಮಿಸಿರುವ ಕಾಸ್ಮೋಸ್ ಪ್ಲಾನೆಟೇರಿಯಂ ಬಗ್ಗೆ ಜನವರಿ 11ರಂದು ಟ್ವೀಟ್ ಮಾಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್, ಯುವ ಜನರಲ್ಲಿ ಬಾಹ್ಯಾಕಾಶ ವಿಜ್ಞಾನದಲ್ಲಿ ಕುತೂಹಲ ಹುಟ್ಟು ಹಾಕಲು ಮತ್ತು ಆಸಕ್ತಿ ಹೆಚ್ಚಿಸಲು ಕಲ್ಪಿಸಲಾದ ಡಿಜಿಸ್ಟಾರ್–7 ತಾರಾಲಯದ ಕಲ್ಪನೆ ಮತ್ತು ಯೋಜನೆಯನ್ನು ರೂಪಿಸಲಾಗಿದೆ. 8ಕೆ ರೆಸಲ್ಯೂಷನ್ ಹೊಂದಿರುವ ಕಾಸ್ಮೋಸ್ ಹೈಟೆಕ್ 15 ಮೀಟರ್ ಎಲ್‌ಇಡಿ ಗುಮ್ಮಟವು ವಿಶ್ವದ ಗಮನ ಸೆಳೆಯುತ್ತಿದೆ. ಈ ತಾರಾಲಯವು ಮೈಸೂರಿನಲ್ಲಿ ಪ್ರವಾಸೋದ್ಯಮಕ್ಕೆ ಹೊಸ ಹೆಗ್ಗುರುತಾಗಲಿದೆ. ಸಾಂಸ್ಕೃತಿಕ ನಗರಿಯ ಶ್ರೀಮಂತ ಪರಂಪರೆಯ ಭೂದೃಶ್ಯಕ್ಕೆ ಹೊಸ ಆಯಾಮ ನೀಡುವ ಮೂಲಕ ಇತಿಹಾಸವನ್ನು ಮಾತ್ರವಲ್ಲದೇ ಅದಾಚೆಗಿನ ಪ್ರಪಂಚವನ್ನು ದರ್ಶಿಸಲು ಸಂದರ್ಶಕರ ಆಹ್ವಾನಿಸುತ್ತಿದೆ. ಪ್ರವಾಸೋದ್ಯಮ ಉತ್ತೇಜನ, ಉದ್ಯೋಗ ಸೃಷ್ಟಿ, ಜ್ಞಾನ ಮತ್ತು ನಾವೀನ್ಯತೆಯೊಂದಿಗೆ ಪರಂಪರೆ ಬೆರೆಸುವ ನಗರವಾಗಿ ಮೈಸೂರಿನ ಚಿತ್ರಣವನ್ನು ಇಮ್ಮಡಿಗೊಳಿಸಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಶ್ರೀಗಳ ಪುಣ್ಯಸ್ಮರಣೆ...



ಮೈಸೂರಿನ ಜನತಾನಗರದ ಒಕ್ಕಲಿಗರ ಜಾಗೃತಿ ವೇದಿಕೆ ವತಿಯಿಂದ ಆಯೋಜಿಸಿದ್ದ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುಣ್ಯಸ್ಮರಣೆ ಪ್ರಯುಕ್ತ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸ್ವಾಮೀಜಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಮುಖಂಡರಾದ ಸುರೇಶ್, ಕುಮಾರ್, ಒಕ್ಕಲಿಗರ ವೇದಿಕೆ ಅಧ್ಯಕ್ಷ ಸುರೇಶ್, ಕಾರ್ಯದರ್ಶಿ ಲಕ್ಕೇಗೌಡ, ಖಜಾಂಚಿ ಮಂಜು, ಸಹ ಕಾರ್ಯದರ್ಶಿ ಗವಿಸಿದ್ದು, ಮಹೇಶ್, ಶಿವಣ್ಣ, ವೆಂಕಟೇಶ್, ಮಂಜೇಗೌಡ ಮತ್ತಿತರರಿದ್ದರು.

ಮುಕ್ತಕಗಳು ಬದುಕಿಗೆ ದಾರಿದೀಪವಾಗಿವೆ

ಸಂಸ್ಕೃತ ವಿದ್ವಾಂಸ ಪ್ರೊ.ನಾಗರಾಜರಾವ್ ಅಭಿಮತ



ಶೇಷಾದ್ರಿಪುರಂ ಕಾಲೇಜಲ್ಲಿ ಮೈಸೂರು ವಿವಿ ಪ್ರಸಾರಾಂಗದ ಪ್ರಚಾರೋಪನ್ಯಾಸ ನಡೆಯಿತು.

ಮೈಸೂರು, ಜ.13(ಎಂಕೆ)– ನಾಲ್ಕು ಸಾಲುಗಳಲ್ಲಿ ಜೀವನದ ಸತ್ಯವನ್ನು ಅಡಗಿಸಿಟ್ಟು ಎಲ್ಲಾ ಸಂದರ್ಭದಲ್ಲಿಯೂ ಹೇಳಬಹುದಾದ ಕವಿತೆಗಳು ಮುಕ್ತಕಗಳಾಗಿವೆ. ಮುಕ್ತಕಗಳೆಲ್ಲವೂ ಬದುಕಿಗೆ ದಾರಿ ದೀಪವಾಗಿವೆ ಎಂದು ಸಂಸ್ಕೃತ ವಿದ್ವಾಂಸ ಪ್ರೊ.ಹೆಚ್.ವಿ.ನಾಗರಾಜರಾವ್ ತಿಳಿಸಿದರು.

ಮೈಸೂರಿನ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಮೈಸೂರು ವಿವಿ ಪ್ರಸಾರಾಂಗದ ವತಿಯಿಂದ ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕೃತದಲ್ಲಿ ಮುಕ್ತ ಎಂದರೆ ಮುತ್ತು ಎಂದರ್ಥ ಎಂದರು.

ಕನ್ನಡದ ಆದಿ ಕವಿ ಪಂಪನು ರಚಿಸಿದ ಆದಿಪುರಾಣ ಜೈನ ಕೃತಿಯಲ್ಲಿ ಮುಕ್ತಕಗಳನ್ನು ರಚಿಸಿದ್ದಾರೆ. ಅದರೊಂದಿಗೆ ರನ್ನನ ಸಾಹಸಭೀಮವಿಜಯಂ, ಸರ್ವಜ್ಞನ ತ್ರಿಪದಿಗಳಲ್ಲಿ, ಪುಲಿಗೆರೆ ಸೋಮನಾಥನ ಸೋಮೇಶ್ವರ ಶತಕದಲ್ಲಿ ಮುಕ್ತಕಗಳನ್ನು ರಚಿಸಿದ್ದಾರೆ. ಕನ್ನಡದ ಭಗವದ್ಗೀತೆ ಎಂದೇ ಹೆಸರಾಗಿರುವ ಮಂಕುತಿಮ್ಮನ ಕಗ್ಗ ಕೃತಿಯ ಮೂಲಕ ಡಿ.ವಿ.ಗುಂಡಪ್ಪನವರು ಕನ್ನಡದ ಮುಕ್ತಕ ಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಸಂಸ್ಕೃತದಲ್ಲಿ ಭರ್ತೃಹರಿ ಕವಿಯ ನೀತಿ ಶತಕದಲ್ಲಿ ಜೀವನದ ನೀತಿಯನ್ನು ಮುಕ್ತಕಗಳ ಮೂಲಕ ತಿಳಿಸಲಾಗಿದೆ. ಅಲ್ಲದೆ ಸಂಸ್ಕೃತದ ಸುಭಾಷಿತಗಳು ಇಂದಿಗೂ ಪ್ರಸ್ತುತವಾದವುಗಳಾಗಿದ್ದು, ಮುಕ್ತಕಗಳನ್ನು ಓದುವಾಗ ಅಮೃತದಷ್ಟೇ ರಸ ಸ್ವಾದವಾಗುತ್ತದೆ. ಹಾಸ್ಯ, ವಿಡಂಬನೆ, ನೀತಿಗಳನ್ನೊಳಗೊಂಡ ಮುಕ್ತಕಗಳು ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿವೆ ಎಂದು ತಿಳಿಸಿದರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಮಾತನಾಡಿ, 92 ವರ್ಷಗಳ ಹಿಂದೆ ಪ್ರಾರಂಭಗೊಂಡ ಪ್ರಸಾರಾಂಗದಲ್ಲಿ ಸುಮಾರು 9 ಲಕ್ಷಕ್ಕೂ ಹೆಚ್ಚು ಪುಸ್ತಕಗಳಿದ್ದು, ಅವುಗಳಲ್ಲಿ ಮಾಹಿತಿ ಮತ್ತು ಸಂದೇಶಗಳನ್ನು ಯುವ ಸಮೂಹಕ್ಕೆ ತಿಳಿಸುವ ನಿಟ್ಟಿನಲ್ಲಿ ಪ್ರಚಾರೋಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸಿ.ಪಿ.ಲಾವಣ್ಯ, ಪ್ರಸಾರಾಂಗದ ವಿಶ್ರಾಂತ ಉಪ ನಿರ್ದೇಶಕ ಬಿ.ವಿ.ಶ್ರೀಧರ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಕೆ.ಎಂ.ಸಿದ್ದಪ್ಪ, ಸಹಾಯಕ ಪ್ರಾಧ್ಯಾಪಕಿ ಬಿ.ಕೆ.ರಶ್ಮಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ನವೀನತೆ, ಉದ್ಯಮಶೀಲತೆಯ ಅರಿವು



ಎಫ್‌ಕೆಸಿಸಿಐ ವತಿಯಿಂದ ‘ಇನೋ ಮಂಥನ್@ಎಫ್‌ಕೆಸಿಸಿಐ ಔಟ್‌ರೀಚ್’ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು.

ಮೈಸೂರು,ಜ.13(ಎಂಕೆ)– ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಫೆಡರೇಷನ್ ಆಫ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ(ಎಫ್‌ಕೆಸಿಸಿಐ) ವತಿಯಿಂದ ವಿವಿಧ ಕಾಲೇಜುಗಳಲ್ಲಿ ನಡೆದ ‘ಇನೋ ಮಂಥನ್@ಎಫ್‌ಕೆಸಿಸಿಐ ಔಟ್‌ರೀಚ್’ ಕಾರ್ಯಕ್ರಮ ಯಶಸ್ವಿಯಾಯಿತು.

ಮೈಸೂರಿನ ಮಹಾರಾಣಿ ಕಲಾ ಕಾಲೇಜು, ಮಹಾರಾಣಿ ವಿಜ್ಞಾನ ಕಾಲೇಜು, ಮಹಾರಾಣಿ ವಾಣಿಜ್ಯ ಕಾಲೇಜು, ಸೇಂಟ್ ಫಿಲೋಮಿನಾ ಪದವಿ ಕಾಲೇಜಿನ 750ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳು ಹಾಗೂ ಯಶಸ್ವಿ ಉದ್ಯಮಿಗಳ ಮೂಲಕ ನವೀನತೆ, ಉದ್ಯಮಶೀಲತೆ ಮತ್ತು ಉದಯೋನ್ಮುಖ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಎಫ್‌ಕೆಸಿಸಿಐ ಅಧ್ಯಕ್ಷರಾದ ಉಮಾರೆಡ್ಡಿ, ಎಫ್‌ಕೆಸಿಸಿಐ ಹಾಗೂ ಕರ್ನಾಟಕ ಸರ್ಕಾರವು ರಾಜ್ಯದ ಸ್ಟಾರ್ಟ್ ಅಪ್ ಮತ್ತು ನವೀನತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಂಡಿರುವ ಕ್ರಮಗಳು ಹಾಗೂ ಯುವ ನವೋದ್ಯಮಿಗಳಿಗೆ ನೀಡುತ್ತಿರುವ ಬೆಂಬಲದ ಕುರಿತು ಮಾಹಿತಿ ನೀಡಿದರು. ಬಳಿಕ ಉದ್ಯಮ ಮತ್ತು ಉದ್ಯೋಗಾವಕಾಶಗಳ ಮಾಹಿತಿಯುಳ್ಳ ಹೊತ್ತಿಗೆ ವಿತರಣೆ ಮಾಡಲಾಯಿತು. ಮೈಸೂರು ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಲಿಂಗರಾಜು ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಬಿಜೆಪಿ ಎನ್‌ಆರ್ ಕ್ಷೇತ್ರದ ಯುವ ಮೋರ್ಚಾದಿಂದ ಕಣ್ಣಿನ ತಪಾಸಣೆ ಶಿಬಿರ ನಡೆಯಿತು.

ಮೈಸೂರು, ಜ.13(ಎಂಕೆ)– ಮೈಸೂರಿನ ಕ್ಯಾತಮಾರನಹಳ್ಳಿ ಸಮುದಾಯ ಭವನದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ‘ಉಚಿತ ಕಣ್ಣಿನ ತಪಾಸಣೆ’ ಶಿಬಿರ ನಡೆಸಲಾಯಿತು.

ಶಿಬಿರವನ್ನು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಉದ್ಘಾಟಿಸಿದರು. ನಗರಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಸಂದೇಶ್ ಸ್ವಾಮಿ, ಬಿಜೆಪಿ ನಗರ ಮಾಜಿ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿಗಳಾದ ಪದ್ಮನಾಬ್, ಮಂಜು ಸಿ.ಗೌಡ, ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಕಾರ್ಯದರ್ಶಿಗಳಾದ ಲೋಹಿತ್, ಪುನೀತ್, ಬಿಜೆಪಿ ಎನ್‌ಆರ್ ಕ್ಷೇತ್ರದ ಯುವಮೋರ್ಚಾ ಅಧ್ಯಕ್ಷ ನವೀನ್ ರಾಜ್, ಮುಖಂಡರಾದ ನಾರಾಯಣ ಲೋಲಪ್ಪ, ಶಿವಕುಮಾರ್, ಆನಂದ್ ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಪ್ರತಾಪ್‌ಸಿಂಹ ಸ್ನೇಹ ಬಳಗದಿಂದ ಎಳ್ಳುಬೆಲ್ಲ, ಸ್ವೆಟರ್ ವಿತರಣೆ



ಮಾಜಿ ಸಂಸದ ಪ್ರತಾಪ್ ಸಿಂಹ ಸ್ನೇಹ ಬಳಗದಿಂದ ಪೌರಕಾರ್ಮಿಕ ಮಹಿಳೆಯರಿಗೆ ಎಳ್ಳು–ಬೆಲ್ಲ, ಸ್ವೆಟರ್ ವಿತರಿಸಲಾಯಿತು.

ಮೈಸೂರು,ಜ.13–ಸಂಕ್ರಾಂತಿ ಹಬ್ಬದ ಅಂಗವಾಗಿ ಪ್ರತಾಪ್‌ಸಿಂಹ ಸ್ನೇಹ ಬಳಗದ ವತಿಯಿಂದ ಮಂಗಳವಾರ ಮೈಸೂರಿನ ವಾರ್ಡ್ ನಂ.23ರ ವ್ಯಾಪ್ತಿಯ ಜಗನ್ಮೋಹನ ಅರಮನೆಯ ಮುಂಭಾಗ ಪೌರಕಾರ್ಮಿಕರಿಗೆ ಎಳ್ಳು–ಬೆಲ್ಲ ಹಾಗೂ ಸ್ವೆಟರ್ ವಿತರಿಸಲಾಯಿತು.

ಈ ವೇಳೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಪೌರಕಾರ್ಮಿಕ ಮಹಿಳೆಯರು ತಮ್ಮ ಕುಟುಂಬದ ಜವಾಬ್ದಾರಿಯೊಂದಿಗೆ ನಾಗರಿಕರ ಆರೋಗ್ಯ ಸುರಕ್ಷತೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಈ ಸಹೋದರಿಯರಿಗೆ ಎಳ್ಳು–ಬೆಲ್ಲ ಹಾಗೂ ಸ್ವೆಟರ್ ನೀಡಿರುವುದು ಅಭಿನಂದನೀಯ. ಇಂತಹ ಮೌಲ್ಯಯುತ ಸೇವಾಕಾರ್ಯ ಮುಂದುವರೆಯಬೇಕು ಎಂದು ಆಶಿಸಿದರು. ಈ ವೇಳೆ ಬಿಜೆಪಿ ಮುಖಂಡ ಎಸ್.ಕೆ.ದಿನೇಶ್, ಉಮೇಶ್, ಕಾರ್ಯಕ್ರಮದ ಆಯೋಜಕ ಆರ್.ಪರಮೇಶ್‌ಗೌಡ, ಪ್ರಮೋದ್ ಗೌಡ, ಚೇತನ್‌ಗೌಡ, ಸಂದೇಶ್ ಪವಾರ್, ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಖಜಾಂಚಿ ನಾಗರಾಜ್, ಮಂಜುನಾಥ್, ಗಾಣಿಗ ಸಮುದಾಯದ ಮುಖಂಡ ರಾಜು, ಭಾನುಮತಿ, ಗೀತಾ, ಮಧು, ವಿ.ಎಸ್.ಕಿರಣ್, ಶ್ರವಣ್ ಮಾಲಿ, ಮಡಿವಾಳ ನಾಗೇಶ್, ಸಾಗರ್, ರಾಜು ಮತ್ತಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಅಶೋಕಪುರಂ ನಿವೃತ್ತಿದಾರರ ಸೇವಾ ಸಮಿತಿ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಸ್ವಾಮಿ, ಎಂ.ನಾಗರಾಜು, ನಗರಪಾಲಿಕೆ ನಿವೃತ್ತ ಇನ್ಸ್‌ಪೆಕ್ಟರ್ ಶಿವಸ್ವಾಮಿ, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಪೃಥ್ವಿರಾಜ್, ಶಿವಣ್ಣ, ಮರಿದೇವರು ಮತ್ತಿತರರು ಉಪಸ್ಥಿತರಿದ್ದರು.

ಆಟೋ ಚಾಲಕರಿಗೆ ನೆರವು




ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಲೆಯನಿಯಂ ವತಿಯಿಂದ ಮಹದೇವ ಕುಟುಂಬಸ್ಥರಿಗೆ ಚಿಕಿತ್ಸೆ ನೆರವಿಗೆ ಧನಸಹಾಯ ಮಾಡಲಾಯಿತು.

ಮೈಸೂರು, ಜ.13(ಜಿಎ)–ಮೈಸೂರಿನ ಮುನೇಶ್ವರ ನಗರ ನಿವಾಸಿ ಹಾಗೂ ಆಟೋ ಚಾಲಕರಾದ ಮಹದೇವ ಎಂಬುವವರು ಪಿತ್ತಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ನೆರವಾಗಲೆಂದು 25 ಸಾವಿರ ರೂ.ಗಳನ್ನು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಲೆಯನಿಯಂ ವತಿಯಿಂದ ಅವರ ಕುಟುಂಬಸ್ಥರಿಗೆ ವಿತರಿಸಲಾಯಿತು.

ಕ್ಲಬ್ ಅಧ್ಯಕ್ಷೆ ಶಿಲ್ಪಾ ಶಿವಕುಮಾರ್ ಮಾತನಾಡಿ, ಮಹದೇವ್ ಅತ್ಯಂತ ಕಡುಬಡವರಾಗಿದ್ದಾರೆ. ಈಗ ತಾವು ನೀಡುತ್ತಿರುವ ಹಣ ಸಂಪೂರ್ಣ ಚಿಕಿತ್ಸೆಗೆ ಸಾಲುತ್ತದೆ ಎಂದಲ್ಲವಾದರೂ ಸ್ವಲ್ಪ ಮಟ್ಟಿಗಾದರೂ ನೆರವಾಗಲೆಂದು ನೀಡುತ್ತಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಎಂ.ಸುನೀಲ್, ಶೋಭಾ, ಪುಷ್ಪಾ, ಮಧುಸೂದನ್, ಮಾಧುರಿ, ಆಟೋ ಮಹೇಶ್ ಉಪಸ್ಥಿತರಿದ್ದರು.

ಆಧುನಿಕತೆಗೆ ತಕ್ಕಂತೆ ಬದಲಾದರೆ ರಂಗಭೂಮಿ ಗುಣಮಟ್ಟ ಸುಧಾರಣೆ

ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ತಜ್ಞರ ಅಭಿಮತ



ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಂವಾದದಲ್ಲಿ ನ್ಯೂ ಮೆಕ್ಸಿಕೊ ವಿಶ್ವವಿದ್ಯಾನಿಲಯದ ವಸ್ತ್ರ ವಿನ್ಯಾಸಕಾರರಾದ ಪ್ರೊ.ಸಾರಾ ಕರನ್ ಐಸ್ ಮಾತನಾಡುತ್ತಿರುವುದು.

ಮೈಸೂರು, ಜ.13(ಎಂಕೆ)– ಆಧುನಿಕತೆಗೆ ಅನುಗುಣವಾಗಿ ರಂಗಭೂಮಿಯಲ್ಲಿ ಬದಲಾವಣೆಯಾಗಬೇಕು. ಶಿಕ್ಷಣ ಮತ್ತು ಪ್ರದರ್ಶನ ಒಂದೇ ವೇದಿಕೆಯಲ್ಲಿ ನಡೆಯುವಂತಾದಲ್ಲಿ ರಂಗಭೂಮಿಯ ಗುಣಮಟ್ಟ ಮತ್ತಷ್ಟು ಹೆಚ್ಚಾಗಲಿದೆ ಎಂಬ ಅಭಿಪ್ರಾಯ ರಂಗಭೂಮಿ ಮತ್ತು ಪ್ರದರ್ಶಕ ಕಲೆಗಳ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ವ್ಯಕ್ತವಾಯಿತು.

ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಕಾರದೊಂದಿಗೆ ಆಯೋಜಿಸಿದ್ದ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಂವಾದದಲ್ಲಿ ರಂಗಭೂಮಿಯ ವಸ್ತ್ರ ವಿನ್ಯಾಸ, ಬೆಳಕು, ರಂಗ ಸಜ್ಜಿಕೆ, ರಂಗ ವಸ್ತುಶಿಲ್ಪದಲ್ಲಿ ಆಧುನಿಕತೆಗೆ ಅನುಗುಣವಾಗಿ ಬದಲಾವಣೆಯಾಗಬೇಕು ಹಾಗೂ ದೇಶಿ ಮತ್ತು ವಿದೇಶಿ ಸಂಸ್ಕೃತಿಯ ಪರಸ್ಪರ ವಿನಿಮಯವಾಗಬೇಕು ಎನ್ನಲಾಯಿತು.

ಸಂವಾದಕ್ಕೂ ಮುನ್ನ ತಮ್ಮದೇ ವಸ್ತ್ರ ವಿನ್ಯಾಸ, ರಂಗ ಸಜ್ಜಿಕೆಯಿಂದ ಪ್ರದರ್ಶನಗೊಂಡ ನಾಟಕಗಳು ಹಾಗೂ ಆಧುನಿಕತೆ ಅಳವಡಿಕೆಯಿಂದಾದ ಬದಲಾವಣೆ ಕುರಿತು ಟೆಕ್ಸಾಸ್ ಬೇಲರ್ ವಿಶ್ವವಿದ್ಯಾಲಯದ ವಸ್ತ್ರ ವಿನ್ಯಾಸಕಾರರಾದ ಪ್ರೊ.ಸಾರಾ ಮೋಷರ್, ನ್ಯೂ ಮೆಕ್ಸಿಕೊ ವಿಶ್ವವಿದ್ಯಾನಿಲಯದ ವಸ್ತ್ರ ವಿನ್ಯಾಸಕಾರರಾದ ಪ್ರೊ.ಸಾರಾ ಕರನ್ ಐಸ್, ಅಮೆರಿಕಾದ ಓಹಾಯೊ ಉತ್ತರ ವಿಶ್ವವಿದ್ಯಾಲಯದ ಬೆಳಕು ಮತ್ತು ನಿರ್ಮಾಣ ತಜ್ಞರಾದ ಪ್ರೊ.ಕ್ಯಾಥಲೀನ್ ಇ.ಡೆವಾಲ್ಟ್, ಮೆಕ್ಸಿಕೊ ಸೆಂಟ್ರೊ ಸ್ಕೂಲ್ ಆಫ್ ಡಿಸೈನ್ ವಸ್ತ್ರ ವಿನ್ಯಾಸಕಾರರಾದ ಪ್ರೊ.ಏಡಿಟಾ ಝುವೂಸ್ಕಾ, ಹಂಗೇರಿಯ ರಂಗ ಸಜ್ಜಿಕೆ ತಜ್ಞ ಪ್ರೊ. ಛಾಬಾಹ್ ಆಂಟಲ್ ಹಾಗೂ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ತಿಳಿಸಿಕೊಟ್ಟರು.

ಬಳಿಕ ನಡೆದ ಮುಕ್ತ ಸಂವಾದದಲ್ಲಿ ಆಧುನಿಕತೆ ಅನುಗುಣವಾಗಿ ರಂಗಭೂಮಿ ಬದಲಾವಣೆಯಾಗಬೇಕು. ಪ್ರಸಕ್ತ ರಂಗಭೂಮಿ ಆಸಕ್ತರ ಅಭಿರುಚಿಗೆ ಅನುಗುಣವಾಗಿ ನಾಟಕಗಳ ರಚನೆ ಮತ್ತು ವಿನ್ಯಾಸವಾಗಬೇಕು. ಶಿಕ್ಷಣ ಮತ್ತು ಪ್ರದರ್ಶನ ಒಂದೇ ವೇದಿಕೆಯಲ್ಲಿ ನಡೆದರೆ, ತಪ್ಪುಗಳನ್ನು ತಿದ್ದಲು ಮತ್ತು ಪರಿಣಾಮಕಾರಿ ಕಲಿಕೆಗೆ ಅನುಕೂಲವಾಗಲಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾದವು.

ಸಮಾರೋಪದ ಅಧ್ಯಕ್ಷತೆ ವಹಿಸಿದ್ದ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ಪಾಶ್ಚಿಮಾತ್ಯ ರಂಗಭೂಮಿಗಳಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿದ್ದರೆ, ನಾವು ನಿಂತ ನೀರಾಗಿದ್ದೇವೆ. ಆದ್ದರಿಂದ ಮುಂದಿನ ದಿನಗಳಲ್ಲಿ ನಮ್ಮ ರಂಗಭೂಮಿ ಬೆಳೆಯಬೇಕಾದರೆ, ಆಧುನಿಕತೆ ಅಳವಡಿಸಿಕೊಳ್ಳಬೇಕು. ಶಿಕ್ಷಣ ರಂಗಭೂಮಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಮ್ಮಲ್ಲಿ ಶಿಕ್ಷಣ ಮತ್ತು ರಂಗಭೂಮಿ ಬೇರೆ ಬೇರೆ ಕಡೆಯಲ್ಲಿದ್ದು, ಎರಡೂ ಒಂದೇ ವೇದಿಕೆಗೆ ಬಂದರೆ ಉತ್ತಮವಾದ ಬೆಳವಣಿಗೆ ಕಾಣಲು ಸಾಧ್ಯ ಎಂದು ಹೇಳಿದರು.

ಅಮೆರಿಕಾದ ಎ ಮತ್ತು ಎಂ ವಿಶ್ವವಿದ್ಯಾಲಯದ ರಂಗಭೂಮಿ ತಜ್ಞ ಡಾ.ದಿನೇಶ್ ಯಾದವ್, ಸಂಗೀತ ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಎಂ.ಜಿ.ಮಂಜುನಾಥ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ಹೆಚ್.ತಲಕಾಡು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಉದ್ಯಮಶೀಲತಾ ಅಭಿವೃದ್ಧಿಗೆ ತರಬೇತಿ

ಮೈಸೂರು: ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ವತಿಯಿಂದ ಕೌಶಲಾಭಿವೃದ್ಧಿ ಉದ್ಯಮಶೀಲತೆ, ಉದ್ಯಮ ಶೀಲತಾ ಅಭಿವೃದ್ಧಿ ಕೇಂದ್ರ, ಧಾರವಾಡ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ಸಂಯುಕ್ತಾಶ್ರಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವ ಯುವನಿಧಿ ಯೋಜನೆಯಡಿಯಲ್ಲಿ ನೋಂದಾಯಿಸಿರುವ ಆಸಕ್ತರಿಗೆ ಮೂವತ್ತು ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಯುವನಿಧಿ ಯೋಜನೆಯಡಿ ನೋಂದಾಯಿಸಿರುವ ಅರ್ಹರಿಗೆ ಉದ್ಯಮಶೀಲತಾ ಪ್ರೇರಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು, ಪ್ರೋತ್ಸಾಹ, ಉದ್ಯಮದಾರರಿಗೆ ದೊರೆಯುವ ಸೌಲಭ್ಯಗಳು, ಮಾರುಕಟ್ಟೆ ಹಾಗೂ ಇತರೆ ವಿಷಯಗಳ ಕುರಿತು ತರಬೇತಿ ನೀಡಲಾಗುವುದು. ಆಸಕ್ತರು ಜ.20ರೊಳಗೆ ಜಂಟಿ ನಿರ್ದೇಶಕರ ಕಚೇರಿ, ಸಿಡಾಕ್, ಕೇಂದ್ರ, ಸಯ್ಯಾಜಿರಾವ್ ರಸ್ತೆ ಸಿಟಿಐ ಕಟ್ಟಡ ಇಲ್ಲಿ ಮಾಹಿತಿ ಪಡೆಯುವುದು. ದೂ.ಸಂ.: 6361611136/ 8310738819/ 7760145784 ಸಂಪರ್ಕಿಸಿ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಂ 6, 1ನೇ ಮುಖ್ಯ ರಸ್ತೆ, ಹೂಟಗಳ್ಳಿ ಗ್ರಾಮದಲ್ಲಿ ವಾಸವಾಗಿರುವ



ಶ್ರೀ ಕೃಷ್ಣ ಎಸ್.ಬಿ. ರವರು

ಮಾಡುವ ವಿಜ್ಞಾಪನೆಗಳು

ದಿನಾಂಕ: 03-01-2026ನೆ ಶನಿವಾರದಂದು ನನ್ನ ಧರ್ಮಪತ್ನಿ

ಶ್ರೀಮತಿ ಸರಸ್ವತಿ ಆರ್.ರವರು

ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ

ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 14-01-2026ನೇ ಬುಧವಾರ ಬೆಳಗ್ಗೆ 10-00 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯಕ್ರಮಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು:

ಶ್ರೀ ಕೃಷ್ಣ ಎಸ್.ಬಿ. ಮತ್ತು ಮಕ್ಕಳು

ಹಾಗೂ ಕುಟುಂಬವರ್ಗದವರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು